ಕರ್ನಾಟಕ ವಿಧಾನ ಸಭೆ

ಬೆಳಗಾವಿ

ಗುರುವಾರ, 28ನೇ ಸೆಪ್ಟೆಂಬರ್ 2006ರಂದು

ಸದನವು ಬೆಳಗಾವಿಯ ಜವಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯದ ಆವರಣದಲ್ಲಿರುವ ಡಾ:ಬಿ.ಎಸ್.ಜೀರಿಗೆ ಸಭಾಂಗಣದಲ್ಲಿ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

3.00 ಪಿಎಂ

1. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ:

ವಿಷಯ: ರಾಜ್ಯದಲ್ಲಿ ಬರ ಹಾಗೂ ನೆರೆ ಹಾವಳಿಯಿಂದ ಉಂಟಾದ ತೊಂದರೆಗಳು ಹಾಗೂ ಡಾ॥ ನಂಜುಂಡಪ್ಪ ವರದಿ ಅನುಷ್ಠಾನದ ಬಗ್ಗೆ.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಬರ ಮತ್ತು ನೆರೆ ಹಾಗೂ ಡಾ: ನಂಜುಂಡಪ್ಪನವರ ವರದಿ ಮೇಲೆ ಚರ್ಚೆ ಆಗಬೇಕೆನ್ನುವ ಎರಡು ಸೂಚನೆಗಳು ಇವೆ. ಆದುದರಿಂದ ಇವೆರಡನ್ನೂ ಸೇರಿಸಿ ಮಾನ್ಯ ಸದಸ್ಯರುಗಳು ಮಾತನಾಡ ಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈ ಚರ್ಚೆಗಾಗಿ ಒಟ್ಟು 4 ಗಂಟೆಗಳ ಅವಧಿಯನ್ನು ನಿಗದಿ ಮಾಡಿ ನಿಷ್ಕರ್ಷೆ ಮಾಡಿದ್ದೇನೆ. ಈ ಅವಧಿಯಲ್ಲಿ ಯಾವ ಯಾವ ಪಕ್ಷಗಳಿಗೆ ಎಷ್ಟೆಷ್ಟು ಸಮಯ ಮಾತನಾಡಲು ಸಿಗುತ್ತದೆ ಎಂದು ನಾವು ಲೆಕ್ಕಾಚಾರ ಮಾಡಿದ್ದೇವೆ. ಆಡಳಿತ ಪಕ್ಷಗಳಾದ ಬಿ.ಜೆ.ಪಿ. ಹಾಗೂ ಜೆ.ಡಿ.ಎಸ್. ಎರಡೂ ಪಕ್ಷಗಳಿಗೆ ಒಟ್ಟು 2 ಗಂಟೆ 25 ನಿಮಿಷ ಸಿಗುತ್ತದೆ. ಕಾಂಗ್ರೆಸ್‌ನವರಿಗೆ 1 ಗಂಟೆ 10 ನಿಮಿಷ ಬರುತ್ತದೆ. ಜೆ.ಡಿ.(ಯು) ನವರಿಗೆ 5 ನಿಮಿಷ ಬರುತ್ತದೆ. ಇತರರಿಗೆ 20 ನಿಮಿಷ ಬರುತ್ತದೆ. ಆದುದರಿಂದ ನನ್ನ ವಿನಂತಿ ಏನು ಎಂದರೆ ಹತ್ತು ನಿಮಿಷಗಳ ಮೇಲೆ ಯಾರೂ ದಯವಿಟ್ಟು ಮಾತನಾಡಬಾರದು. ಹತ್ತು ನಿಮಿಷಕ್ಕೆ ಸೀಮಿತವಾಗಿ ತಾವುಗಳು ಮಾತನಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬೆಳಗಾವಿ ಜಿಲ್ಲೆಯ ಎಲ್ಲಾ ಶಾಸಕರು ಆದ್ಯತೆಯ ಮೇಲೆ ನಮಗೆ ಮೊದಲು ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿದ್ದಾರೆ. ಆದುದರಿಂದ ಮೊದಲು ಮಾನ್ಯ ಕಾಗೆಯವರು ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ): ಮಾನ್ಯ ಅಧ್ಯಕ್ಷರೆ, ನನಗೆ ಮೊದಲು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ

ಧನ್ಯವಾದಗಳನ್ನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ಈ ಒಂದು ವಿಶೇಷ ಅಧಿವೇಶನ ನಡೆಯುತ್ತಿರುವುದಕ್ಕಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರಿಗೂ ಕೂಡ ಇದಕ್ಕಾಗಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ಈ ಪ್ರವಾಹದ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸತತವಾಗಿ ಕಳೆದ ಎರಡು ವರ್ಷಗಳಿಂದ ಪ್ರವಾಹ ಬಂದು

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಮಿನಿಸ್ಟರ್ ಇಲ್ಲ. ರೆವಿನ್ಯೂ ಮಿನಿಸ್ಟರ್‌ನ್ನು ದಯವಿಟ್ಟು ಮೊದಲು ಕರೆಸಿ.

ಅಧ್ಯಕ್ಷರು: ರೆವಿನ್ಯೂ ಮಿನಿಸ್ಟರ್‌ನ್ನು ಸದನಕ್ಕೆ ಬೇಗ ಬರುವಂತೆ ನಾನು ಹೇಳಿ ಕರೆಸುತ್ತೇನೆ. ಮಾನ್ಯ ಕಾಗೆಯವರೆ ತಾವು ಮಾತನಾಡಿ.

ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ: ಮಾನ್ಯ ಅಧ್ಯಕ್ಷರೆ, ಸತತವಾಗಿ ಪ್ರವಾಹದಿಂದ ಜನಜೀವನ ಬಹಳ ಅಸ್ತವ್ಯಸ್ತವಾಗಿದೆ. ಬೆಳೆಗಳೂ ಹಾನಿಯಾಗಿ ಸಾಕಷ್ಟು ಜಾನುವಾರುಗಳೂ ಕೂಡ ನೀರಿನಲ್ಲಿ ಕೊಚ್ಚಿಹೋಗಿವೆ. ಸಾವಿರಾರು ಜಾನುವಾರುಗಳು ಕಳೆದ ಬಾರಿ ಪ್ರಾಣವನ್ನು ಕಳೆದುಕೊಂಡಿವೆ. ಅದೇ ರೀತಿ ಏಳೆಂಟು ಜನರು ಪ್ರವಾಹದಲ್ಲಿ ಕೊಚ್ಚಿಹೋಗಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುವಂಥ ದುಸ್ಥಿತಿ ಉದ್ಭವವಾಗಿತ್ತು. ಆದುದರಿಂದ ಇಂಥ ಸಂದರ್ಭದಲ್ಲಿ ಮುಂದೆ ಒಂದು ಶಾಶ್ವತವಾದಂಥ ಪರಿಹಾರವನ್ನು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತಿದ್ದೇನೆ. ಏಕೆಂದರೆ ಪ್ರತಿ ಸಲ ಪ್ರವಾಹ ಬಂದಾಗ ಆ ಊರಿನ ಜನರನ್ನು ಊರಿನಿಂದ ಹೊರಗೆ ನಾಲ್ಕೈದು ಕಿಲೋ ಮೀಟರ್ ದೂರದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡುವುದು ನಂತರ ಪ್ರವಾಹ ಇಳಿದ ಮೇಲೆ ಮತ್ತೆ ಅವರನ್ನು ಅವರ ಹಳ್ಳಿಗಳಿಗೆ ಕಳುಹಿಸುವುದೇ ಆಗಿದೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರವಾಹ ಬಂದ ಮೇಲೆ ತದನಂತರ ಅದು ಕಡಿಮೆಯಾದರೂ ಆ ಹಳ್ಳಿಗಳಲ್ಲಿ ಮೂರ್‍ನಾಲ್ಕು ತಿಂಗಳು ಅಲ್ಲಿ ವಾಸ ಮಾಡಲು ಸಾಧ್ಯವಾಗದ ಪರಿಸ್ಥಿತಿ ಇರುತ್ತದೆ. ಅದಕ್ಕಾಗಿ ಆ ಭಾಗದಲ್ಲಿ ಒಂದು ಶಾಶ್ವತವಾದಂಥ ರೂಪಿಸುವ ಬಗ್ಗೆ ಸರ್ಕಾರ ಈಗ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ಮುಖ್ಯಮಂತ್ರಿಗಳು ಕಳೆದ ಬಾರಿ ಪ್ರವಾಹ ಬಂದಾಗ ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಬರುವ ನಾಗನೂರಿನಲ್ಲಿ ವಾಸ್ತವ್ಯ ಹೂಡಿ ವಾಸ್ತವಿಕ ಪರಿಸ್ಥಿತಿಯನ್ನು ಗಮನಿಸಿದ್ದಾರೆ. ಅದೇ ತರಹ ನಮ್ಮ ಜಿಲ್ಲಾ ಮಂತ್ರಿಗಳು ಬಂದಿದ್ದಾರೆ, ಎಲ್ಲಾ ಮಂತ್ರಿಗಳು ಬಂದಿದ್ದಾರೆ, ಕಳೆದ ಬಾರಿ ಆಗಿನ

ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಧರ್ಮಸಿಂಗ್‌ರವರು, ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಾ ಮಂತ್ರಿಗಳು ಬಂದು ಅಲ್ಲಿ ವೀಕ್ಷಣೆ ಮಾಡಿದ್ದಾರೆ. ಆದರೂ ಕೂಡ ಇದುವರೆಗೆ ಅಲ್ಲಿಗೆ ಒಂದು ಶಾಶ್ವತ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯಾಗಿಲ್ಲ. ಏಕೆಂದರೆ ನಮ್ಮ ಸರ್ಕಾರದ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಮೊದಲು ಅಲ್ಲಿ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಳ್ಳಬೇಕಾಗಿದೆ. ಲ್ಯಾಂಡ್ ಅಕ್ವಿಸಿಷನ್ ಕೇವಲ 22 ಹಳ್ಳಿಗಳಿಗೆ ಮಾತ್ರ ಬೇಕು ಎಂದು ಹೇಳಿದ್ದಾರೆ. ಒಂದು ಉದಾಹರಣೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ ಅಧ್ಯಕ್ಷರೆ; ಚೂಳ್ ಎನ್ನುವ ಗ್ರಾಮ ಇದೆ. ಆ ಚೂಳ್ ಗ್ರಾಮವನ್ನು ಬೇರೆ ರೀತಿಯಲ್ಲಿ ಸೃಷ್ಟಿ ಮಾಡುವ ನಿರ್ಣಯವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಅದಕ್ಕೆ 450 ಎಕರೆ ಜಮೀನು ಬೇಕೆಂದು ಹೇಳುವ ಮಾಹಿತಿಯನ್ನು ಕೊಟ್ಟಿದ್ದಾರೆ. ಯಾವ ರೀತಿಯಾಗಿ ಆ ಮಾಹಿತಿಯನ್ನು ಅಧಿಕಾರಿಗಳು ಸರ್ಕಾರಕ್ಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಪುನರ್ವಸತಿಗೆ ಅಕ್ವಿಸಿಷನ್ ಮಾಡಿಕೊಳ್ಳಬೇಕೆಂದರೆ ಕೇವಲ ಇಪ್ಪತ್ತು ಮೂವತ್ತು ರೂಪಾಯಿಗಳು ಬೇಕು ಎಂದು ಹೇಳಿದ್ದಾರೆ. ಆದರೆ ಒಂದೇ ಹಳ್ಳಿಗೆ 450 ಕೋಟಿ ರೂಪಾಯಿ ಎಂದು ಸಹ ಇವೊತ್ತಿನ ದಿವಸ ಅಧಿಕಾರಿಗಳು ಹೇಳುತ್ತಿದ್ದಾರೆ. 450 ಕೋಟಿ ರೂಪಾಯಿ ತೆಗೆದುಕೊಳ್ಳಬೇಕಾದರೆ ಒಂದು ಎಕರೆಗೆ ನಮ್ಮ ಸರ್ಕಾರದವರು ನಿಗದಿ ಪಡಿಸಿರುವುದು ಎಷ್ಟು ಎಂದರೆ ಒಂದು ಲಕ್ಷ ರೂಪಾಯಿ ಎಂದು ನಿಗದಿಪಡಿಸಿದ್ದಾರೆ. ಆದರೆ ಅಲ್ಲಿ ಒಂದು ಎಕರೆಗೆ 3 ಲಕ್ಷ ರೂಪಾಯಿಗಳವರೆಗೂ ಕೂಡ ಯಾರೂ ಜಮೀನುಗಳನ್ನು ಬಿಟ್ಟುಕೊಡುವುದಕ್ಕೆ ಮುಂದೆ ಬರುವುದಿಲ್ಲ. ಇವೊತ್ತು ಒಂದೇ ಊರಿಗೆ 450 ಎಕರೆ ಜಮೀನುಗಳನ್ನು ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ. ಇವೊತ್ತು ಚೂಳ್ ಎನ್ನುವಂಥ ಒಂದೇ ಗ್ರಾಮಕ್ಕೆ ನಾನು ಪುನರ್ವಸತಿ ಕಲ್ಪಿಸಬೇಕಾದರೆ ಕೇವಲ ಅಕ್ವಿಸಿಷನ್‌ಗೋಸ್ಕರ ಹದಿಮೂರೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ ಅಧ್ಯಕ್ಷರೇ.

ಒಂದೇ ಗ್ರಾಮಕ್ಕೆ ಇವರು ಪುನರ್‌ವಸತಿ ಕಲ್ಪಿಸಬೇಕಾದರೆ ಕೆಲಸ ಅಕ್ವಿಜಿಷನ್ ಸಲುವಾಗಿ 13.50 ಕೋಟಿ ರೂಪಾಯಿ ಬೇಕಾಗಿದೆ. ಇವತ್ತಿನ ನಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ ಕೇವಲ 22 ಹಳ್ಳಿಗಳನ್ನು ಅಕ್ವಿಜಿಷನ್ ಮಾಡಿಕೊಳ್ಳುವುದಕ್ಕೆ ಕೇವಲ 20 ಲಕ್ಷ ರೂಪಾಯಿಗಳು ಬೇಕು. ಈ ರೀತಿಯಾಗಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಆದುದರಿಂದ ಪುನರ್ ಪರಿಶೀಲಿಸಬೇಕು ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ಅದೇ ರೀತಿ 22 ಹಳ್ಳಿಗಳಲ್ಲಿ ಈಗಾಗಲೇ ಗ್ರಾಮ ಸಭೆಗಳನ್ನು ಮಾಡಿದ್ದು, ಎಲ್ಲಿ ಪುನರ್ ವಸತಿ ಮಾಡಬೇಕೆಂದು ಆ ಊರಿನ ಜನ ಹೇಳಿದ್ದಾರೆ. ಆದರೆ ಇದುವರೆಗೂ ಅಕ್ವಿಜಿಷನ್ ಆಗಿಲ್ಲ. ಅಕ್ವಿಜಿಷನ್ ಆಗದೆ

ಪುನರ್‌ವಸತಿ ಹೇಗೆ ಮಾಡುತ್ತಾರೆ? ಯಾವ ಆಧಾರದ ಮೇಲೆ ಮಾಡುತ್ತೀರಿ? ಅವುಗಳ ಮೂಲಸೌಲಭ್ಯಕ್ಕಾಗಿ ಕೇವಲ 100 ಕೋಟಿ ರೂಪಾಯಿಗಳು ಬೇಕೆಂದು ಅಧಿಕಾರಿಗಳು ಹೇಳಿದ್ದಾರೆ. ಒಂದೊಂದು ಹಳ್ಳಿಗೆ ಮೂಲಭೂತ ಸೌಕರ್ಯ ಎಂದರೆ ರಸ್ತೆ, ಕುಡಿಯುವ ನೀರು ವ್ಯವಸ್ಥೆ ಮಾಡಬೇಕು, ಪಂಚಾಯತ್ ಕಟ್ಟಡಗಳು, ಸ್ಕೂಲ್ ಬಿಲ್ಡಿಂಗ್ ಮಾಡಬೇಕು, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು. ಇದನ್ನೆಲ್ಲಾ ಮಾಡಬೇಕಾದರೆ, 22 ಹಳ್ಳಿಗಳು ಮತ್ತು 7 ಹಳ್ಳಿಗಳನ್ನು ಸಪರೇಟಾಗಿ ಇವತ್ತು ರೆವಿನ್ಯೂ ಇಲಾಖೆಯಿಂದ ತೆಗೆದುಕೊಂಡಿದ್ದಾರೆ. ಅದಕ್ಕೆ ನೂರು ಕೋಟಿ ರೂಪಾಯಿಯಲ್ಲಿ ಇನ್‌ಫ್ರಾಸ್ಟ್ರಕ್ಚರ್ ಮಾಡುತ್ತೇವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅವರು ಯಾವ ರೀತಿ ಹೇಳುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಅಲ್ಲಿಗೆ 2000 ದಿಂದ 3000 ಕೋಟಿ ರೂಪಾಯಿ ನಮಗೆ ಬೇಕಾಗಿದೆ. ಅಲ್ಲಿ ಅಕ್ವಿಜಿಷನ್ ಮಾಡಿಕೊಳ್ಳುವುದಕ್ಕೆ ಮತ್ತು ಮೂಲಭೂತ ಸೌಕರ್ಯವನ್ನು ಮಾಡುವುದಕ್ಕೆ ಮತ್ತು ಪುನರ್‌ವಸತಿ ಕಲ್ಪಿಸುವುದಕ್ಕೆ, ಯುಕೆಪಿಯಲ್ಲಿ ಯಾವ ರೀತಿ ಕೊಟ್ಟಿದ್ದಾರೆ, ನಮಗೆ ಅದೇ ರೀತಿ ಕೊಡಬೇಕೆಂದು ಜನರಿಂದ ಬರುತ್ತಿದೆ. ಇವತ್ತಿನ ದಿವಸ ಅಲ್ಲಿ ಕೆಲವು ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ ಯುಕೆಪಿಯಲ್ಲಿ ಒಂದು ರೀತಿ ಮಾಡಿ ನಮಗೆ ಹಿಪ್ಪರಿಗೆ ಅಣೆಕಟ್ಟಿನಲ್ಲಿ ಮುಳುಗಡೆ ಆದವರಿಗೆ ಒಂದು ಪ್ಯಾಕೇಜ್ ಕೊಟ್ಟರೆ ಜನ ಒಪ್ಪುವುದಿಲ್ಲ. ಮೊನ್ನೆ ದಿವಸ ಜಿಲ್ಲಾಧಿಕಾರಿಗಳ ಮೀಟಿಂಗ್‌ನಲ್ಲಿ ಕೇಳಿದಾಗ, 7 ಹಳ್ಳಿಗಳನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ತೆಗೆದುಕೊಂಡಿದ್ದೇವೆ. ಅವರಿಗೆ ಮಾತ್ರ ನಾವು ಅಕ್ವಿಜಿಷನ್ ಮಾಡಿ ಅಲ್ಲಿ ಆಶ್ರಯ ಮನೆಗಳನ್ನು ಕಟ್ಟಿಕೊಡುತ್ತೇವೆ. ಅವರು ಆಶ್ರಯ ಮನೆಗಳಿಗೆ ಹೋಗಬೇಕು ಎನ್ನುವಂತಹ ಮಾತನ್ನು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಎಲ್ಲಾ ಒಂದೇ ಮತ ಕ್ಷೇತ್ರ, ಒಂದೇ ತಾಲ್ಲೂಕು, ಒಂದೇ ರಾಜ್ಯ, ಒಂದೇ ನೀರಿನ ಪರಿಸ್ಥಿತಿ ಬರುವುದರಿಂದ ಕೆಲವು ಹಳ್ಳಿಗಳಿಗೆ ಒಂದು ಪ್ಯಾಕೇಜ್ ಹಾಗೂ ಇನ್ನೂ ಕೆಲವು ಹಳ್ಳಿಗಳಿಗೆ ಇನ್ನೊಂದು ಪ್ಯಾಕೇಜ್ ಮಾಡಿದರೆ ಜನ ಒಪ್ಪುವುದಿಲ್ಲ. ಯುಕೆಪಿಯಲ್ಲಿ ಏನು ಮಾಡಿದರು ಎಂದರೆ ಅವರಿಗೆ ಲ್ಯಾಂಡ್ ಅಕ್ವಿಜಿಷನ್ ಮಾಡಿ ಪ್ರತಿಯೊಂದು ಕುಟುಂಬಕ್ಕೆ ನಾಲ್ಕು ಗುಂಟೆ ಜಾಗ ಕೊಟ್ಟಿದ್ದಾರೆ. ಅಲ್ಲಿ ಇದ್ದಂತಹ ಮನೆಗಳಿಗೆ ರಿನ್ಯೂವೇಷನ್ ಮಾಡಿ ಅವರಿಗೆ ಪರಿಹಾರ ಕೊಟ್ಟಿದ್ದಾರೆ. ಅಲ್ಲದೆ ಅವರಿಗೆ ಅಲ್ಲಿಂದ ಹೋಗುವುದಕ್ಕೆ ಟ್ರಾನ್ಸಪೋರ್ಟೇಷನ್ ಎಂದು ಪ್ರತಿಯೊಬ್ಬರು ಮನೆಯವರಿಗೂ 20 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಹೀಗಾಗಿ ಯುಕೆಪಿಯಲ್ಲಿ ಏನೊಂದು ಪ್ಯಾಕೇಜ್ ಕೊಟ್ಟಿದ್ದಾರೆ, ಆ ರೀತಿ ಹಿಪ್ಪರಿಗಿ ಅಣೆಕಟ್ಟಿನಲ್ಲಿ ಮುಳುಗಡೆಯಾದಂತಹ ಜನರಿಗೂ ಬರಬೇಕು. ಇವತ್ತಿನ ದಿವಸ ಪ್ರವಾಹ ಬಂದು ಎಷ್ಟೋ ರಸ್ತೆಗಳು ಕೆಟ್ಟು ಹೋಗಿವೆ.

ಇನ್ನೂ ರಸ್ತೆಗಳ ರಿಪೇರಿಯಾಗಿಲ್ಲ. ಇನ್ನು ಬೆಳೆ ಪರಿಹಾರವನ್ನು ಕೂಡ ಕೊಟ್ಟಿಲ್ಲ. ಈಗ ಸರ್ವೆ ಮಾಡಿ ಬೆಳೆ ಪರಿಹಾರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ಜನ ಈಗ ನಮ್ಮನ್ನು ಕೇಳುತ್ತಿದ್ದಾರೆ, ನೀವು ಬೆಳಗಾಂ ಜಿಲ್ಲೆ ಶಾಸಕರು, ಬೆಳಗಾಂ ಜಿಲ್ಲೆಯಲ್ಲಿ ಅಧಿವೇಶನ ನಡೆದಾಗ ನೀವು ಅಲ್ಲಿಗೆ ಹೋಗಿದ್ದೀರಾ; ಇಲ್ಲಿಯ ಬಗ್ಗೆ ಕೂಗು ಏನೂ ಕೇಳಿ ಬರುತ್ತಿಲ್ಲ, ನೀವು ಏನು ಮಾಡುತ್ತಿದ್ದೀರಿ ಎಂದು ಇವತ್ತಿನ ದಿವಸ ಫೋನ್ ಬರುತ್ತಿದೆ. ಮೊನ್ನೆ ದಿವಸ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳು ಸೇರಿ ನಾವು ಒಂದು ಊರಿನಲ್ಲಿ ಗ್ರಾಮ ಸಭೆಯನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ ಅಲ್ಲಿನ ಜನ, ಯಾವುದೋ ಒಂದು ರಾಜ್ಯದಲ್ಲಿ ಕೊಳವೆಬಾವಿಯಲ್ಲಿ ಬಿದ್ದಂತಹ ಪ್ರಿನ್ಸ್ ಎನ್ನುವ ಹುಡುಗನನ್ನು ಮೇಲೆತ್ತುವುದಕ್ಕೆ ಆ ಸರ್ಕಾರದವರು 3–4 ಕೋಟಿ ರೂಪಾಯಿ ಖರ್ಚು ಮಾಡಿದರು. ಆದರೆ ನಾವು ಇಲ್ಲಿ ಸಾವಿರಾರುಗಟ್ಟಲೆ ಜನ ಸಾಯುತ್ತಿದ್ದೇವೆ, ನಮ್ಮ ಸರ್ಕಾರದವರು ನಮ್ಮ ಸಹಾಯಕ್ಕೆ ಏಕೆ ಬರುತ್ತಿಲ್ಲವೆಂದು ಕೇಳುತ್ತಿದ್ಧಾರೆ. ಅದಕ್ಕೆ ಪ್ರವಾಹ ಪೀಡಿತ ಅಥಣಿ ತಾಲ್ಲೂಕಿನ ಕೆಲವು ಹಳ್ಳಿಗಳು, ರಾಯಭಾಗ ತಾಲ್ಲೂಕಿನ ಕೆಲವು ಹಳ್ಳಿಗಳು, ಜಮಖಂಡಿಯ ಕೆಲವು ಹಳ್ಳಿಗಳಲ್ಲಿ ಜನರಿಗೆ ಪುನರ್‌ವಸತಿ ಮಾಡಬೇಕೆಂದು ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಆದರೆ ಇವತ್ತಿನ ದಿವಸ ಮಾನ್ಯ ಧರ್ಮ್‌ಸಿಂಗ್ ರವರು ಅಲ್ಲಿಗೆ ಹೋಗಿ ಬಂದು ನಿರಾಶ್ರಿತರಿಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ಹೋದಸಲ ಅವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಬಂದಿದ್ದರು. ಆದರೆ ಇನ್ನು ಇವತ್ತು ಯಾವ ರೀತಿಯಲ್ಲಿ ಆ ಕಾರ್ಯವನ್ನು ಮಾಡಬೇಕಾಗಿತ್ತು ಆ ರೀತಿಯಲ್ಲಿ ಆಗುತ್ತಿಲ್ಲ. ಇನ್ನು ಅಲ್ಲಿ ಅಕ್ವಿಜಿಷನ್ ಮಾಡಿಕೊಂಡಿಲ್ಲ. ಆದುದರಿಂದ ಜನರಿಗೆ...

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಅವರಿಗೆ ಇಂಟರ್‌ವೀನ್ ಆಗುತ್ತಿದ್ದೇನೆ, ಮಾನ್ಯ ಕಾಗೆಯವರು ಕೃಷ್ಣ ನೀರು ಹರಿಸಬೇಕೆಂದು ಹೇಳಿ ಹಂಗರ್ ಸ್ಟ್ರೈಕ್ ಕುಳಿತಿದ್ದರು. ನಾನು ಹೋದ ಮೇಲೆ ಆಶ್ವಾಸನೆ ಕೊಟ್ಟೆ ಮತ್ತು ನೀರು ಬಿಡಿಸತಕ್ಕಂಥ ಕೆಲಸವನ್ನು ಮಾಡಿಕೊಟ್ಟೆ. ಅದಕ್ಕೇ ಕಾಗೆಯವರು ಆರಿಸಿಬಂದರು. ಮೊನ್ನೆ ಬೆಳಗಾವಿಗೆ ಬರುವಂತಹ ಸಂದರ್ಭದಲ್ಲಿ ಅಥಣಿಯಲ್ಲಿ 24ನೇ ತಾರೀಖು 9 ಗಂಟೆಗೆ ಹೋಗಿದ್ದೆ. ಆಗ ಅಲ್ಲಿ ಜನರಿಗೆ ಹೇಳಿದೆ, ಇಲ್ಲಿ ಅಧಿವೇಶನ ಪ್ರಾರಂಭವಾಗುತ್ತದೆ, ನಮಗೆ ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ ತೊಂದರೆಯಾಗುತ್ತಿದೆ ಎನ್ನುವಂತಹ ಮಾತನ್ನು ಹೇಳಿದರು. ಅದರ ಬಗ್ಗೆ ನಿನ್ನೆ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ನಾವು ಹೋಗಿ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇವೆಂದು ಹೇಳಿದೆ. ಯಾವುದೇ ಪಕ್ಷವಿರಲಿ, ಅವರು

ಅಲ್ಲಿ ಆಗತಕ್ಕಂಥ ಜನರ ತೊಂದರೆ ಬಗ್ಗೆ ಹೇಳುತ್ತಿದ್ದಾರೆ ಅದಕ್ಕೆ ಸ್ಪಂದಿಸಬೇಕು. ಮಾನ್ಯ ಯಡಿಯೂರಪ್ಪನವರು ಅಲ್ಲಿ ಕುಳಿತಿದ್ದಾರೆ. ಮಾನ್ಯ ಕಾಗೆ ಯವರು ತಮ್ಮ ಸದಸ್ಯರು ಇದ್ದಾರೆ. ಅದಕ್ಕೆ ಅವರು ಏನು ಕಳಕಳಿಯಿಂದ ವಿನಂತಿ ಮಾಡುತ್ತಿದ್ದಾರೆ, ಅದಕ್ಕೆ ಆಶ್ವಾಸನೆಯನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ಕಾಗೆಯವರೆ ಬೇಗ ಮುಗಿಸಿಬಿಡಿ. ನಿಮ್ಮ ಟೈಂ ಆಯಿತು.

ಶ್ರೀ ಭರಮಗೌಡ ಅಲಗೌಡ ಕಾಗೆ: ಮಾನ್ಯ ಅಧ್ಯಕ್ಷರೆ, ಇವತ್ತಿನ ನಮ್ಮ ಜಿಲ್ಲೆಯ ಕಬ್ಬಿನ ಸಮಸ್ಯೆ ಬಹಳ ಜಾಸ್ತಿ ಇದೆ. ಬೆಳಗಾಂ ಜಿಲ್ಲೆಯಲ್ಲಿ ಪ್ರತಿಯೊಂದು ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಎರಡನೇ ಕಂತು ಕೊಟ್ಟಿಲ್ಲ. ಮಹಾರಾಷ್ಟ್ರದಲ್ಲಿ ಇದುವರೆಗೆ 1400 ರಿಂದ 1500 ರವರೆಗೆ ಸಕ್ಕರೆ ಕಾರ್ಖಾನೆಗಳು ಕಂತುಗಳನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆಯವರು ಎರಡನೇ ಕಂತನ್ನು ಬಿಡುಗಡೆ ಮಾಡಿಲ್ಲ. ಆದುದರಿಂದ ಆ ಸಕ್ಕರೆ ಕಾರ್ಖಾನೆಯವರು ಎರಡನೇ ಕಂತನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಈ ಸಲ ಒಂದು ನಿಗದಿತ ರೇಟ್ ಅನ್ನು ಫಿಕ್ಸ್ ಮಾಡಿ ಸರ್ಕಾರದವರು ಆ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ನಾನು ಇವತ್ತಿನ ದಿವಸ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮುಖ್ಯವಾಗಿ ನಮ್ಮ ಅಥಣಿ ತಾಲ್ಲೂಕಿನ 28 ಹಳ್ಳಿಗಳನ್ನು ಪುನರ್‌ವಸತಿ ಮಾಡಿ ಅವರಿಗೆ ತುರ್ತಾಗಿ ಶಾಶ್ವತ ಪರಿಹಾರದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ ಮತ್ತೊಮ್ಮೆ ತಮಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಎ.ಬಿ. ಪಾಟೀಲರು........

ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ: ಮಾನ್ಯ ಎ.ಬಿ. ಪಾಟೀಲರು ಮಾತನಾಡುತ್ತಾರೆ. ನಮಗೂ ಅವಕಾಶ ಕೊಡಿ ನಾವು ವಾಪಸ್ಸು ಹೋಗುವವರಿದ್ದೇವೆ. ತಮಗೆ ಮನವಿ ಮಾಡುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಸಂಕೇಶ್ವರ): ಮಾನ್ಯ ಲಕ್ಷಣ್ ಸವದಿಯವರೆ, ನಾನು ಮಾತನಾಡಿದ ಮೇಲೆ ಮಾತನಾಡಿ. ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಅಧಿವೇಶನ ಕರೆದು ನಮಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಇವತ್ತು ಸರ್ಕಾರ ಬಹಳಷ್ಟು ಆಶ್ವಾಸನೆಗಳನ್ನು ಕೊಡುತ್ತಿದೆ. ಮಾನ್ಯ ರಾಜು ಕಾಗೆಯವರು ಹೇಳಿದರು, ನಮ್ಮ ಭಾಗವಾದ ಅಥಣಿಗೆ ಫ್ಲಡ್ ಬಂದಾಗ ಅದಕ್ಕೆ ದುಡ್ಡನ್ನು ಬಿಡುಗಡೆ ಮಾಡಬೇಕು ಎಂದು. ಮಾನ್ಯ ಧರ್ಮ್‌ಸಿಂಗ್‌ರವರು ಇದ್ದಾಗ 20 ಕೋಟಿ ರೂಪಾಯಿ ಅವರ ಕ್ಷೇತ್ರಕ್ಕೆ

ಬಿಡುಗಡೆಯಾಗಿತ್ತು. ಇವತ್ತಿನವರೆಗೂ ಕೂಡ ಅದನ್ನು ಅವರು ಏಕೋ ಹೇಳಲಿಲ್ಲ. ಬಹುತೇಕ ಮುಜುಗರವಾಗಿರಬೇಕು. ಅವರು ರೂಲಿಂಗ್ ಪಾರ್ಟಿಯಲ್ಲಿ ಇದ್ದೇವೆ ಎಂದು ಇರಬಹುದು.

ಶ್ರೀ ಜಗದೀಶ್ ಶೆಟ್ಟರ್: 132 ಕೋಟಿ ರೂಪಾಯಿ ಬಿಡುಗಡೆಯಾಗಿದೆ.

ಶ್ರೀ ಎ.ಬಿ. ಪಾಟೀಲ್: ನಾನು ಮಾತನಾಡಿ ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ತಾವು ಉತ್ತರ ಕೊಡುವಾಗ ಕೊಡಿ.

(ಅಡಚಣೆ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ 234 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎ.ಬಿ. ಪಾಟೀಲ್: ತಾವು ಉತ್ತರ ಕೊಡುವಾಗ ಕೊಡಿ.

Sri K.R. Ramesh Kumar: You are quite senior. ಡಿಸ್‌ಕಷನ್ ಈಗ ಪ್ರಾರಂಭವಾಗಿದೆ. ಎಲ್ಲಾ ಮಾನ್ಯ ಸದಸ್ಯರು ಹೇಳತಕ್ಕಂಥಾದ್ದನ್ನು ನೋಟ್ ಮಾಡಿಕೊಳ್ಳಿ. ತಮ್ಮ ರಿಪ್ಲೈನಲ್ಲಿ ಸವಿಸ್ತಾರವಾಗಿ ಇಲ್ಲಿ ಹೇಳಿ. That is the procedure.

ಶ್ರೀ ಜಗದೀಶ್ ಶೆಟ್ಟರ್: ಆ ರೀತಿ ಎಲ್ಲವನ್ನೂ ಕೇಳಿಕೊಳ್ಳುತ್ತೇನೆ. ಆದರೆ ಹಣ ಬಿಡುಗಡೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ.

ಶ್ರೀ ಎ.ಬಿ. ಪಾಟೀಲ್: ತಾವು ನಂತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಹಣ ಬಿಡುಗಡೆಯಾಗಿದೆ. ಕಾಮಗಾರಿ ಪ್ರಾರಂಭವಾಗಿದೆ. ಆದರೆ ತಪ್ಪು ಮಾಹಿತಿ ಕೊಡುವಂತಾದ್ದು ಬೇಡವೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಯಾರೂ ತಪ್ಪು ಮಾಹಿತಿ ಕೊಡುವುದಿಲ್ಲ. ಸರ್ಕಾರದ ಅಧಿಕೃತ ಮಾಹಿತಿ ನಿಮ್ಮ ಕಡೆಗೆ ಇರುತ್ತದೆ. ಆದರೆ ಸದಸ್ಯರ ಹತ್ತಿರ ಅಧಿಕೃತ ಮಾಹಿತಿ ಇರುವುದಿಲ್ಲ. ಅವರು ಅವರ ಅಭಿಪ್ರಾಯ ಹೇಳುತ್ತಾರೆ. ಅವರ ಅಭಿಪ್ರಾಯ ನಿಮ್ಮ ಅಧಿಕೃತ ದಾಖಲೆ ಜೊತೆ ಹೊಂದದೇ ಇದ್ದರೆ ಅವರು ಹೇಳುವ ಅಭಿಪ್ರಾಯ ಸರಿಯಿಲ್ಲ. ಇದು ವಾಸ್ತವಾಂಶ ಎಂದು ತಾವು ತಮ್ಮ ರಿಪ್ಲೈನಲ್ಲಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ರವರು ಹೇಳುವಂಥ ವಿಚಾರ ಸರಿಯಾಗಿದೆ. ನಾನು ಹೇಳುವಂಥಾದ್ದು ಏನೆಂದರೆ ಈಗ ತಾವು ಮಾತನಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಇನ್ನೂ ಒಳ್ಳೆಯ ಮಾಹಿತಿಗಳು ಸಿಗಲಿ ಎಂಬ ಉದ್ದೇಶಕ್ಕೆ ಹೇಳುತ್ತಿದ್ದೇವೆ.

ತಾವು ಮಾತನಾಡುವಂತಹ ಸಂದರ್ಭದಲ್ಲಿ ಹಣ ಏನು ರಿಲೀಜ್ ಆಗಿದೆ, ಅದನ್ನು ಲೆಕ್ಕ ಇಟ್ಟುಕೊಂಡು ಮುಂದಿನದನ್ನು ಮಾತನಾಡಿದರೆ....

ಶ್ರೀ ಎ.ಬಿ. ಪಾಟೀಲ್: ನೀವು ಹಣವನ್ನು ರಿಲೀಜ್ ಮಾಡಿ, ತಾವು ಕೆಲಸವನ್ನು ಮಾಡಿದರೆ ನಾವು ನಿಮ್ಮನ್ನು ಸ್ವಾಗತ ಮಾಡುತ್ತೇವೆ. ಮಾನ್ಯ ಈಶ್ವರಪ್ಪನವರೇ, ಈಗ ಚಿತ್ರಿ ನದಿ ನೀರಿನ ಬಿಡುಗಡೆಯ ವಿಚಾರವಾಗಿ ನಾನೇ ನಿಮ್ಮನ್ನು ಸ್ವಾಗತ ಮಾಡಿದ್ದೇನೆ. ನಮ್ಮ ಜೊತೆ ಮುಂಬೈಗೆ ಬಂದಿರಿ ನೀವು ಈ ಹಿರಣ್ಯಕೇಶಿ ನದಿಗೆ ಸಂಬಂಧ ಪಟ್ಟಂತೆ ಚರ್ಚಿಸುವ ಸಲುವಾಗಿ ನಾವು ನಿಮ್ಮನ್ನು ಕರೆದುಕೊಂಡು ಹೋಗಿದ್ದೇವೆ. ನಾವು ಅದಕ್ಕೆ ನಿಮಗೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಯಾರು ಕೆಲಸವನ್ನು ಮಾಡುತ್ತಾರೆ, ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಾವು ಉತ್ತರ ಕರ್ನಾಟಕದಲ್ಲಿ ಅಧಿವೇಶನವನ್ನು ಕರೆದಿದ್ದೀರಿ. ಇದು ಬಹಳ ಒಳ್ಳೆಯದಾಯಿತು. ಇಲ್ಲಿ ಏನಾಗಿದೆಯೆಂದರೆ, ಅತಿವೃಷ್ಟಿ, ಬರ, ಅದರಲ್ಲೂ ವಿಶೇಷವಾಗಿ ಗಡಿಭಾಗದಲ್ಲಿ, ಹಿಂದಿನ ದಿವಸಗಳಲ್ಲಿ ಗಡಿ ಭಾಗಗಳ ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದರು. ಇಂದಿನ ದಿವಸಗಳಲ್ಲಿ ಆ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡುತ್ತಾ ಇಲ್ಲ. ನಮ್ಮ ಗಡಿ ಪ್ರದೇಶಗಳಲ್ಲಿರುವಂತಹ ರಸ್ತೆಗಳು, ನಾವು ಇವತ್ತು ಮರಾಠಿ ಭಾಷಿಕರು ಮಹಾರಾಷ್ಟ್ರಕ್ಕೆ ಹೋಗುತ್ತಾರೆಂಬ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಅಲ್ಲಿ ಇರುವಂಥವರಿಗೆ ಮೂಲಭೂತವಾದ ಸೌಕರ್ಯಗಳನ್ನು ಒದಗಿಸಿಕೊಟ್ಟರೆ, ಕರ್ನಾಟಕದಲ್ಲಿ ನಮ್ಮ ಗಡಿಭಾಗದಲ್ಲಿ ಯಾರೂ ಕೂಡ ಇವತ್ತು ನಮ್ಮ ಕರ್ನಾಟಕ ರಾಜ್ಯವನ್ನು ಬಿಟ್ಟು ಹೋಗುವುದಕ್ಕೆ ತಯಾರು ಇಲ್ಲ. ಆದುದರಿಂದ ಇದಕ್ಕೆ ಒಂದು ಸ್ಪೇಷಲ್ ಪ್ಯಾಕೇಜ್ ಅನ್ನು ತಯಾರು ಮಾಡಿ, ರಸ್ತೆಗಳ ಸಲುವಾಗಿ ಇರಬಹುದು, ಶಾಲೆಗಳ ಸಲುವಾಗಿ ಇರಬಹುದು, ಆಸ್ಪತ್ರೆಗಳ ಸಲುವಾಗಿ ಇರಬಹುದು. ಇವತ್ತು ತಾವು ಕುಡಿಯುವ ನೀರಿನ ಯೋಜನೆಗಳು, ಹೀಗೆ ಎಲ್ಲವನ್ನೂ ಒದಗಿಸಿಕೊಡಬೇಕು. ತಾವು ಕಳೆದ ಬಾರಿ ಎರಡು ಸಲ ಹೇಳಿದ್ದೀರಿ. ಗಡಿ ಭಾಗಕ್ಕೆ ಹೆಚ್ಚು ಲಕ್ಷ್ಯವನ್ನು ಕೊಡುತ್ತೇವೆ ಎಂದು ಅಧಿವೇಶನವನ್ನು ಇಲ್ಲಿ ಕರೆದಿದ್ದೀರಿ, ಇದೆಲ್ಲವೂ ಒಳ್ಳೆಯದು. ಆದರೆ ಈ ಗಡಿಭಾಗದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದು ಬೆಳಗಾವಿ ಇರಬಹುದು, ಖಾನಾಪುರ ಇರಬಹುದು, ಉಚ್ಚಗಾಂವ್ ಇರಬಹುದು, ಸಂಕೇಶ್ವರ ಕೂಡ ಗಡಿಭಾಗದಲ್ಲಿ ಬರುತ್ತದೆ, ನಿಪ್ಪಾಣಿ ಬರುತ್ತದೆ. ಆದುದರಿಂದ ಇದರ ಬಗ್ಗೆ ವಿಶೇಷ ಲಕ್ಷ್ಯವನ್ನು ವಹಿಸಿ ಹಣವನ್ನು ಬಿಡುಗಡೆ ಮಾಡಬೇಕು. ಮಾನ್ಯ ಯಡಿಯೂರಪ್ಪನವರು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಸುವರ್ಣ ಗ್ರಾಮದ ಬಗ್ಗೆ ಒಂದು ಮಾತನ್ನು ಹೇಳಿದರು. ಇಲ್ಲಿ ಒಂದು ಸಮಸ್ಯೆ ಏನಾಗಿದೆಯೆಂದರೆ, ಹೋಬಳಿಗೆ

ಒಂದು ಸುವರ್ಣ ಗ್ರಾಮವೆಂದು ಹೇಳಿದ್ದೀರಿ. ಆದರೆ ನಮ್ಮ ತಾಲ್ಲೂಕಿನಲ್ಲಿ ಮೂರು ಹೋಬಳಿಗಳು ಬರುತ್ತವೆ. ಒಂದು ಸಂಕೇಶ್ವರ್, ಹುಕ್ಕೇರಿ, ಹೆಮ್ಮಕಮ್ಮಡಿ, ನೀವು ಹೇಳುವ ಪ್ರಕಾರ ಹೆಮ್ಮಕಮ್ಮಡಿ ಒಂದೇ ಬರುತ್ತದೆ. ಅಲ್ಲಿ ಹುಕ್ಕೇರಿ ಮತ್ತು ಸಂಕೇಶ್ವರಗಳಿಗೆ ಆ ಸವಲತ್ತುಗಳು ಸಿಗುವುದಿಲ್ಲ. ಅದರ ಬದಲಾಗಿ ಇನ್ನೊಂದು ಗ್ರಾಮ ಪಂಚಾಯತ್‌ನಿಂದ ಇವುಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದರಂತೆ ತಾವು ನಗರ ಪ್ರದೇಶಗಳಿಗೆ 45 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಬಿಡುಗಡೆ ಮಾಡಿದ್ದೇವೆಂಬುದನ್ನು ಹೇಳಿದ್ದೀರಿ. ಇಲ್ಲ, ನಗರಾಭಿವೃದ್ಧಿ ಇಲಾಖೆಯಿಂದ ಕರ್ನಾಟಕ ರಾಜ್ಯದಲ್ಲಿರುವಂತಹ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ಸಲುವಾಗಿ 80 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಹಣವನ್ನು ಬಿಡುಗಡೆ ಮಾಡಿದರೆ, ಎಲ್ಲಾ ಹಳ್ಳಿಗಳಿಗೂ ಸಂಕೇಶ್ವರ್‌ಗೆ ಸುಮಾರು ದಿವಸಗಳಿಂದಲೂ ಕೂಡ ನಾವು ನೀರನ್ನು ಕೊಟ್ಟಿದ್ದೇವೆ. ಕೃಷ್ಣಾ ಬೇಸಿನ್‌ನಲ್ಲಿ ಬಿಡುಗಡೆ ಮಾಡುವಂಥ ನೀರಿನ ವ್ಯವಸ್ಥೆ ಸರಿಯಿಲ್ಲ, ಇವತ್ತು ಅಲ್ಲಿ ಕೆಲಸ ಸರಿಯಾಗಿ ಆಗುತ್ತಾ ಇಲ್ಲ. ಇವತ್ತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ನಗರಾಭಿವೃದ್ಧಿಯವರು ಕೂಡ ಮಂಜೂರಾತಿಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನೂ ಕೂಡ ಆದಷ್ಟು ಬೇಗನೆ ಬಿಡುಗಡೆ ಮಾಡಬೇಕು. ಅತಿವೃಷ್ಟಿ, ಕೆಲವೊಂದು ಕಡೆ ಪ್ರವಾಹ, ನಮ್ಮ ಕಡೆ ಏನು ಆಗಿದೆಯೆಂದರೆ, ಸಂಕೇಶ್ವರ, ನಮ್ಮ ಮತಕ್ಷೇತ್ರದಲ್ಲಿ ಮಳೆ ಜಾಸ್ತಿಯಾಗಿದೆ. ಈ ರೀತಿ ಮಳೆ ಹೆಚ್ಚು ಆಗಿರುವುದರಿಂದ, ಎಲ್ಲಾ ರಸ್ತೆಗಳು ಹಾಳಾಗಿವೆ. ನಮ್ಮಲ್ಲಿ PWD ಯಿಂದ, ಮತ್ತು ಜಿಲ್ಲಾ ಪಂಚಾಯತ್‌ಗಳಿಂದ ಈ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ. ಈ ಅತಿವೃಷ್ಟಿಯಿಂದ ಮಳೆ ಹೆಚ್ಚು ಆಗಿದೆ. ಅಲ್ಲಿನ ರಸ್ತೆಗಳ ಸಲುವಾಗಿ ಹಣವನ್ನು ಬಿಡುಗಡೆ ಮಾಡಬೇಕು. ಅಲ್ಲಿ ಗಡಿಭಾಗ ಎರಡೂ ಕೂಡಿ ಬರುತ್ತವೆ, ಅದಕ್ಕೆ ಒಂದು ಸ್ಪೆಷಲ್ ಪ್ಯಾಕೇಜನ್ನು ಮಾಡಬೇಕು. ಇದು ನಾನು ಮೊದಲಿನಿಂದಲೂ ಇಟ್ಟಿರುವಂತಹ ವಾದ. ನಾನು ಮೊದಲೇ ಹೇಳಿದ್ದೇನೆ, ಇವತ್ತು ಚರ್ಚೆ ನಮ್ಮ ಗಡಿ ಭಾಗದ್ದು ಇರಬಹುದು, ಉತ್ತರ ಕರ್ನಾಟಕದ ವಿಷಯಗಳನ್ನು ಚರ್ಚೆ ಮಾಡಿ. ಅದಕ್ಕೆ ಸರ್ಕಾರವೂ ಸ್ಪಂದನೆಯನ್ನು ಮಾಡಬೇಕು. ಅದಕ್ಕೆ ಹಣವನ್ನೂ ಕೂಡ ಬಿಡುಗಡೆ ಮಾಡುವಂಥಾದ್ದನ್ನು ಇವತ್ತು ಮಾಡಬೇಕು. ಇವತ್ತು ಅಥಣಿಯಲ್ಲಿ ವಿಮೋಚನಾ ಯುವ ಸಂಘ ಎಂಬುದು ಒಂದು ಸಂಸ್ಥೆ ಇದೆ. ಬಹಳ ವರ್ಷದಿಂದ ಆ ಸಂಸ್ಥೆಯನ್ನು ನಡೆಸಿಕೊಂಡು ಬಂದಿದ್ದಾರೆ. ಅಲ್ಲಿ ದೇವದಾಸಿಯರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಕೊಡುತ್ತಿದ್ದಾರೆ. ಸರ್ಕಾರದಿಂದ ಇದುವರೆಗೂ ಅದಕ್ಕೆ ಗ್ರಾಂಟ್ ಕೊಡುತ್ತಾ ಇಲ್ಲ. ಇದರ ಬಗ್ಗೆಯೂ

ತಾವು ಚಿಂತನೆಯನ್ನು ಮಾಡಿ, ಇಂತಹ ಸಂಸ್ಥೆ ಇಡೀ ದೇಶದಲ್ಲೇ ಇಲ್ಲ. ಆ ಸಂಸ್ಥೆಯ ಬಗ್ಗೆಯೂ ಸಹ ತಾವು ವಿಚಾರ ಮಾಡಬೇಕು. ಬೆಳಗಾವಿ ವಿಮಾನ ನಿಲ್ದಾಣವನ್ನು ಇವತ್ತು ಮೇಲ್ದರ್ಜೆಗೆ ಏರಿಸಿ; ಮೊನ್ನೆ ಕೂಡ ಮಾನ್ಯ ಪ್ರಫುಲ್ಲ ಪಟೇಲ್‌ರು ಇಲ್ಲಿಗೆ ಬಂದಿದ್ದರು. ಅವರು ಬಂದಾಗ ಜಮೀನು ಕೊಟ್ಟರೆ ನಾವು ತಕ್ಷಣ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಇವತ್ತು ಬೆಳಗಾವಿ ಏರ್‌ಪೋರ್ಟ್ ಕೂಡ ಮಾಡಿದರೆ, ಉತ್ತಮವಾದ ಸವಲತ್ತುಗಳನ್ನು ಇಲ್ಲಿಗೆ ಒದಗಿಸಿ ಕೊಟ್ಟರೆ, ಅದೂ ಕೂಡ ಬೆಳೆಯುತ್ತದೆ. ಇಲ್ಲಿ ಮುಖ್ಯವಾಗಿ ಕಿತ್ತೂರು ಪ್ರಾಧಿಕಾರವನ್ನು ಮಾಡಿದ್ದಾರೆ. ಇದು ಹೆಸರಿಗಷ್ಟೇ ಆಗಿದೆ. ಅದಕ್ಕೆ ಇವತ್ತು ಹಣವನ್ನು ಬಿಡುಗಡೆ ಮಾಡುತ್ತಾ ಇಲ್ಲ. ನಾವು ಎಲ್ಲರೂ ಕಿತ್ತೂರು ಚೆನ್ನಮ್ಮನ ಫೋಟೋಗಳನ್ನು ಹಾಕಿ ಇವತ್ತು ನಾವೆಲ್ಲರೂ ಕಿತ್ತೂರು ಚೆನ್ನಮ್ಮನ ಹೆಸರನ್ನು ಹೇಳುತ್ತಿದ್ದೇವೆ. ಆದರೆ ಅದಕ್ಕೆ ಪ್ರಾಧಿಕಾರವನ್ನು ಮಾಡಿ, ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ, ಅದನ್ನು ಅಭಿವೃದ್ಧಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇನ್ನು ಗಡಿ ಭಾಗದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳ ಬಗ್ಗೆ, ಬೆಳಗಾವಿಯಲ್ಲಿರುವಷ್ಟು ಸಕ್ಕರೆ ಕಾರ್ಖಾನೆ ಇಡೀ ರಾಜ್ಯದಲ್ಲಿ ಎಲ್ಲೂ ಇಲ್ಲ. ನಮ್ಮ ಜಿಲ್ಲೆಯನ್ನು ಸಕ್ಕರೆ ಜಿಲ್ಲೆಯೆಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಮಹಾರಾಷ್ಟ್ರದ ಮಾದರಿಯಲ್ಲಿ ಈ ಸಕ್ಕರೆ ಕಾರ್ಖಾನೆಗಳಿಗೆ ಏನಾದರೂ ಮಾಡಿ ವಿಶೇಷವಾದ ಅನುದಾನವನ್ನು ಬಿಡುಗಡೆ ಮಾಡಿ. ತಾವು NCDC ಮುಖಾಂತರ ಅಥವಾ ತಮ್ಮ ಮುಖಾಂತರವಾದರೂ ಅನುದಾನ ಕೊಡುವಂಥಾದ್ದು ಮಾಡಬೇಕು. ಈ ಬಗ್ಗೆ ನಾವು ಮತ್ತು ಮಾನ್ಯ ಯಡಿಯೂರಪ್ಪನವರು, ಹಾಗೂ ಶಶಿಕಾಂತ್ ನಾಯಕ್‌ರವರು ಸಂಕೇಶ್ವರ ಸಕ್ಕರೆ ಕಾರ್ಖಾನೆ ಮೀಟಿಂಗ್ ಮಾಡಿ ಮಾತನಾಡಿದೆವು. ಮಾನ್ಯ ಉಪ ಮುಖ್ಯಮಂತ್ರಿಯವರು ಹಣವನ್ನು ಬಿಡುಗಡೆ ಮಾಡಿಕೊಡುತ್ತೇನೆಂದು ಹೇಳಿದರು. ಆದರೆ ಇದುವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಹಣವನ್ನು NCDC ಮುಖಾಂತರ ಹಣವನ್ನು ಬಿಡುಗಡೆ ಮಾಡಬೇಕು. ಆದಷ್ಟು ಬೇಗ ನಮ್ಮ ತಾಲ್ಲೂಕಿನ ಆ ಸಂಕೇಶ್ವರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ, ಇನ್ನು ನಮ್ಮ ಬೆಳಗಾಂನಲ್ಲಿ ರೇಣುಕ ಎಲ್ಲಮ್ಮ ದೇವಸ್ಥಾನಕ್ಕೆ ಲಕ್ಷಾಂತರ ಜನರು ಮಹಾರಾಷ್ಟ್ರದಿಂದ, ಕರ್ನಾಟಕದಿಂದ ಬರುತ್ತಿದ್ದಾರೆ. ಅದಕ್ಕೂ ಕೂಡ ಒಂದು ಪ್ರಾಧಿಕಾರವನ್ನು ಮಾಡಿ, ಇಲ್ಲಿ ನಾವು ಮಾನ್ಯ ಚಂದ್ರಶೇಖರ್ ಮಾಮನಿಯವರನ್ನು ನೆನಪು ಮಾಡಿಕೊಳ್ಳಬೇಕು. ಅವರು ಉತ್ತಮ ರೀತಿಯಲ್ಲಿ ಅದನ್ನು ಅಭಿವೃದ್ಧಿಗೊಳಿಸಿದ್ದಾರೆ. ಆದರೂ ಕೂಡ ಅದಕ್ಕೆ ಪ್ರಾಧಿಕಾರವನ್ನು ಮಾಡಿ,

ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ತಾವು ಇದಕ್ಕೆ ಒಂದು ಪ್ರಾಧಿಕಾರವನ್ನು ಮಾಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನೊಂದು ಕರ್ನಾಟಕ ರಾಜ್ಯದಲ್ಲಿ ಏನಾಗಿದೆಯೆಂದರೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ತಾವು ಏನು ಸದಸ್ಯರನ್ನು ನೇಮಕ ಮಾಡುತ್ತಿದ್ಧೀರಿ, ನಮ್ಮ ಬಾಂಬೆ ಕರ್ನಾಟಕ ಇರಬಹುದು, ಅಥವಾ ಉತ್ತರ ಕರ್ನಾಟಕದ ಯಾವ ಸದಸ್ಯರನ್ನೂ ನೇಮಿಸುತ್ತಾ ಇಲ್ಲ. ನಮಗೆ ಪ್ರಾತಿನಿಧ್ಯ ಸಿಗುತ್ತಾ ಇಲ್ಲ. ನಮ್ಮಲ್ಲಿ ಯಾರೂ ಕೂಡ ಕೆಎಎಸ್ ಅಭ್ಯರ್ಥಿಗಳು ಅಲ್ಲಿ ಭಾಗಿಯಾಗುತ್ತಾ ಇಲ್ಲ; ಆ ಪ್ರಾತಿನಿಧ್ಯವನ್ನು ತುಂಬಲಿಕ್ಕೆ ಕನಿಷ್ಠ ಎರಡು ಸದಸ್ಯರನ್ನು ಆದರೂ ಉತ್ತರ ಕರ್ನಾಟಕದವರಿಗೆ ಕೊಡಬೇಕು. ಇವತ್ತು ಮೂರು, ನಾಲ್ಕು ಜಾಗಗಳು ಖಾಲಿಯಾಗಿವೆ, ಈ ಭಾಗಕ್ಕೆ ಅದನ್ನು ಕೊಡಬೇಕು. ಡಾ: ನಂಜುಂಡಪ್ಪನವರೂ ಕೂಡ ವರದಿಯಲ್ಲಿ ಹೇಳಿದ್ದಾರೆ. ಇವತ್ತು KPSC, ಸದಸ್ಯರನ್ನು ಕೇವಲ ಆ ಕಡೆಯವರನ್ನೇ ಮಾಡುತ್ತಿದ್ದೀರಿ. ಅದಕ್ಕೆ ಉತ್ತರ ಕರ್ನಾಟಕಕ್ಕೆ ಎರಡು, ಮೂರು ಸದಸ್ಯರನ್ನು ಮಾಡಿದರೆ, ಇವತ್ತು ಈ ಭಾಗದ ಜನರಿಗೆ ಅನುಕೂಲವಾಗುತ್ತದೆ. ತಾವು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದೀರಿ. ಆ ಮಹಿಳಾ ವಿಶ್ವವಿದ್ಯಾಲಯಕ್ಕೆ ರಾಣಿ ಕಿತ್ತೂರು ಚೆನ್ನಮ್ಮ ಮಹಿಳಾ ವಿಶ್ವವಿದ್ಯಾಲಯವೆಂದು ಹೆಸರನ್ನು ಇಡಬೇಕೆಂಬುದು ನನ್ನ ಸಲಹೆ ಇದೆ. ಇದರ ಬಗ್ಗೆಯೂ ಸಹ ಸರ್ಕಾರವು serious ಆಗಿ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಬೆಳಗಾಂನಲ್ಲಿ ಪಿಜಿ ಸೆಂಟರ್ ಅನ್ನು ಮಾಡಿದ್ದಾರೆ. ಅದೂ ಕೂಡ ಕಿತ್ತೂರು ಚೆನ್ನಮ್ಮನ ಹೆಸರಿನಲ್ಲಿ ಇದೆ, ಪೂರ್ಣ ಪ್ರಮಾಣದ ವಿಶ್ವವಿದ್ಯಾಲಯವಾಗ ಬೇಕೆಂಬುದು ಎಲ್ಲರ ಬೇಡಿಕೆ ಇದೆ. ಇದು ಗಡಿಭಾಗದಲ್ಲಿ ಆಗುವುದರಿಂದ ಇಲ್ಲಿ ಅಧಿವೇಶನ ಆಯಿತು, ಎಲ್ಲಾ ಆಫೀಸ್‌ಗಳು ಆಯಿತು. ಇಲ್ಲಿ ಒಂದು ವಿಶ್ವವಿದ್ಯಾಲಯ ಆದರೂ ಕೂಡ ಇದಕ್ಕೆ ಹೆಚ್ಚಿನ ಮಹತ್ವ ಬರಬೇಕೆಂದು ಹೇಳಿ, ಅದನ್ನೂ ಕೂಡ ಇವತ್ತು ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಾಗಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಯಾವ ರೀತಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರವಿದೆ. ಅದೇ ರೀತಿ ಮುಂಬೈ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿ. ಅದನ್ನು ಕಿತ್ತೂರು ಪ್ರಾಧಿಕಾರವೆಂದು ಹೆಸರನಲ್ಲಿ ಕರೆಯಿರಿ. ಗಡಿ ಭಾಗದಲ್ಲಿ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಬರುವಂತಹ, ಕಾರವಾರ ಜಿಲ್ಲೆಯಲ್ಲಿ ಬರುವಂತಹ ಎಲ್ಲಾ ಗಡಿ ಭಾಗದಲ್ಲಿ ಇವತ್ತು ತಾಲ್ಲೂಕುಗಳು ಬರುತ್ತವೆ. ಅದಕ್ಕೆ ಒಂದು ವಿಶೇಷವಾದ ಲಕ್ಷ್ಯವನ್ನು ಇಟ್ಟು ಒಂದು ಪ್ರಾಧಿಕಾರವನ್ನು ಮಾಡಿದರೆ, ಈ ಜನರ ಕುಂದುಕೊರತೆಯನ್ನು ನಿವಾರಿಸಬಹುದು. ಇದಕ್ಕೆ ಒಂದು ಸ್ಪೆಷಲ್ ಪ್ಯಾಕೇಜ್ ಅನ್ನು ಮಾಡಿ ಅನದನು ಅಭಿವೃದ್ಧಿಪಡಿಸುವುದಕ್ಕೆ

ತಾವು ಇವತ್ತು ಇದರ ಬಗ್ಗೆ ಸೀರಿಯಸ್ ಆಗಿ ವಿಚಾರವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಸಂಕೇಶ್ವರ ಮತಕ್ಷೇತ್ರದಲ್ಲಿ ಈಗಾಗಲೇ ಮಾನ್ಯ ಈಶ್ವರಪ್ಪನವರಿಗೆ ಹೇಳಿದ್ದೇನೆ. ಮಹಾರಾಷ್ಟ್ರದ ಚಿತ್ರಿ ನದಿಯಿಂದ ಪ್ರತಿ ವರ್ಷ ಸರ್ಕಾರದ ವಿನಂತಿ ಮೇರೆಗೆ ಒಂದು ಟಿ.ಎಂ.ಸಿ ನೀರನ್ನು ಅವರು ಇವತ್ತು ಬಿಡುತ್ತಿದ್ದಾರೆ. ಇಲ್ಲಿ ಖಾಯಂ ಆಗಿ ಇವತ್ತು ನೀರನ್ನು ಬಿಟ್ಟರೆ ಸಂಕೇಶ್ವರದ ಸಮಸ್ಯೆ ಇರಬಹುದು. ಆ ಭಾಗದ ರೈತರ ಸಮಸ್ಯೆ ಇರಬಹುದು ಅವೆಲ್ಲಾ ಪರಿಹಾರವಾಗುತ್ತದೆ. ನಮಗೆ ಏನಾಗಿದೆಯೆಂದರೆ, ಹುಕ್ಕೇರಿ ತಾಲ್ಲೂಕಿನಲ್ಲಿ ಇಳಕಲ್ ಜಲಾಶಯ ಇದೆ. ಇಲ್ಲಿ ನಮಗೆ ನೀರು ಇಲ್ಲ. ಆದುದರಿಂದ ಚಿತ್ರಿ ನದಿಯಿಂದ ಹಿರಣ್ಯಕೇಶಿ ನದಿಗೆ ನೀರನ್ನು ಬಿಡುಗಡೆ ಬಗ್ಗೆ ಮಹಾರಾಷ್ಟ್ರದೊಂದಿಗೆ ಈಗಾಗಲೇ ಒಂದು ಸುತ್ತಿನ ಮಾತುಕತೆ ಇದೆ. ಇದರ ಬಗ್ಗೆ ತಕ್ಷಣ ಹೆಚ್ಚು ಪ್ರಯತ್ನವನ್ನು ಮಾಡಿ. ಆ ಬಗ್ಗೆ ಒಂದು ಅಗ್ರಿಮೆಂಟ್ ಅನ್ನು ಮಾಡಿಕೊಂಡು ಪ್ರತಿ ನಾಲ್ಕು ತಿಂಗಳಿಗೆ ಒಂದು ಟಿ.ಎಂ.ಸಿ ನೀರನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ನೀರಾವರಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ವಿಶೇಷವಾಗಿ ಹೈನುಗಾರಿಕೆಯ ಬಗ್ಗೆ ಹೇಳುವುದಾದರೆ ಚಿಕ್ಕೋಡಿ ಮತ್ತು ಈ ಗಡಿ ಭಾಗದಲ್ಲಿ ಬರುವ ಸಂಕೇಶ್ವರ ಮತ್ತು ಹುಕ್ಕೇರಿ ಇರಬಹುದು, ಅಥಣಿ ತಾಲ್ಲೂಕು ಇರಬಹುದು, ಚಿಕ್ಕೋಡಿ ತಾಲ್ಲೂಕು ಇರಬಹುದು. ನಮ್ಮಲ್ಲಿ ಇರುವಷ್ಟು ಹೈನುಗಾರಿಕೆ ಎಲ್ಲೂ ಇಲ್ಲ. ನಮ್ಮ ಎಲ್ಲಾ ಹಾಲು ಇವತ್ತು ಮಹಾರಾಷ್ಟ್ರಕ್ಕೆ ಹೋಗುತ್ತದೆ. ಇದರ ಬಗ್ಗೆ ತಾವು ಹೆಚ್ಚಿನ ಲಕ್ಷ್ಯವನ್ನು ವಹಿಸಿ, ಅದಕ್ಕೆ ಡೈರಿಗಳನ್ನು ಹೊಸ ಮಾದರಿಯಲ್ಲಿ ಇಲ್ಲಿ ಪ್ರಾರಂಭ ಮಾಡಿದರೆ, ಹಾಲಿಗೆ ಹೆಚ್ಚಿನ ರೇಟ್‌ಅನ್ನು ಕೊಟ್ಟರೆ, ಇವತ್ತು ನಮ್ಮ ರೈತರಿಗೆ ಬಹಳ ಅನುಕೂಲವಾಗುತ್ತದೆ.

ಇವತ್ತು ನಮ್ಮ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ಆದರೆ ಇವತ್ತಿನವರೆಗೆ ಬೆಳೆ ಹಾನಿ ಸಲುವಾಗಿ ಒಂದು ಪೈಸೆ ಹಣವೂ ನಮ್ಮ ರೈತರಿಗೆ ಬಂದಿಲ್ಲ. ನೀವು check ಮಾಡಿ. ಹೋದಸಾರಿ ಇದೇ ಪರಿಸ್ಥಿತಿ ಇದ್ದಾಗ ನಾವು 8 ದಿವಸಗಳೊಳಗಾಗಿ ಬೆಳೆ ಹಾನಿಯ ಹಣ ಬಿಡುಗಡೆ ಮಾಡಿದ್ದೆವು. ಆದರೆ, ಈ ವರ್ಷ, ಇವತ್ತಿನವರೆಗೆ ಬೆಳೆ ಹಾನಿ ಸಲುವಾಗಿ ಒಂದು ಪೈಸೆ ಕೂಡ ಬಂದಿಲ್ಲ. ದಯವಿಟ್ಟು ಇವೆಲ್ಲದರ ಬಗ್ಗೆ ಲಕ್ಷ್ಯವಿತ್ತು, ಈ ಕ್ಷೇತ್ರಗಳ ಬಗ್ಗೆ ಮತ್ತು ಗಡಿ ಭಾಗದ ಬಗ್ಗೆ ತಾವು ವಿಶೇಷವಾದ ಲಕ್ಷ್ಯ ವಹಿಸಿ ಆದಷ್ಟು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಅಧ್ಯಕ್ಷರು: ಈಗ ಮಾನ್ಯ ಅಭಯ ಪಾಟೀಲ್‌ರವರು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾಗಿದೆ. ಮಾನ್ಯ ಎ.ಬಿ. ಪಾಟೀಲರದ್ದು ಮುಗಿದ ಮೇಲೆ ನನಗೆ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ.

ಅಧ್ಯಕ್ಷರು: ಆಯಿತು, ನಿಮಗೂ ಅವಕಾಶ ಕೊಡೋಣ. ಅವರ ಕ್ಷೇತ್ರದಲ್ಲಿ ಕಾರ್ಯಕ್ರಮವಿದ್ದು ಅವರು ಅಲ್ಲಿಗೆ ಹೋಗಬೇಕಾಗಿದೆಯಂತೆ. ಹಾಗಾಗಿ ಅವರ ನಂತರ ನೀವು ಮಾತನಾಡಿ. ಮಾನ್ಯ ಅಭಯ ಪಾಟೀಲ್‌ರವರೇ, ಬೇಗ ಮಾತನಾಡಿ ಮುಗಿಸಿಕೊಂಡು ಹೋಗಿ ಆಯಿತು, ನೀವೇ ಮಾತನಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಅಥಣಿ): ಸನ್ಮಾನ್ಯ ಅಧ್ಯಕ್ಷರೆ, ನನಗೆ ಮೊದಲೇ ತಾವು time ಕೊಟ್ಟಿದ್ದೀರಿ. ಅತಿವೃಷ್ಟಿಯ ಬಗ್ಗೆ ಈಗಾಗಲೇ ಮಾನ್ಯ ರಾಜು ಕಾಗೆಯವರು ಮತ್ತು ಎ.ಬಿ. ಪಾಟೀಲ್‌ರವರು ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಅಥಣಿ ತಾಲ್ಲೂಕು ಎರಡು ಕ್ಷೇತ್ರಗಳನ್ನು ಒಳಗೊಂಡಿರತಕ್ಕಂಥ ಒಂದು ತಾಲ್ಲೂಕು. ಆ ತಾಲ್ಲೂಕಿನಲ್ಲಿ ಒಂದು ಕಡೆ ಅತಿವೃಷ್ಟಿಯಾದರೆ ಇನ್ನೊಂದು ಕಡೆ ಅನಾವೃಷ್ಟಿ. ಬಹುಶಃ ಇಂಥ ಒಂದು ಸಂದರ್ಭ ಇಡೀ ರಾಜ್ಯದಲ್ಲಿ ಅಥಣಿ ತಾಲ್ಲೂಕಿನಲ್ಲಿ ಮಾತ್ರ ಎದ್ದು ಕಾಣುವಂಥ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಅತಿವೃಷ್ಟಿ ಆದಂಥ ಸಂದರ್ಭದಲ್ಲಿ ನಮ್ಮ ಕ್ಷೇತ್ರದಲ್ಲಿರತಕ್ಕಂಥ ಸುಮಾರು 20–25 ಹಳ್ಳಿಗಳನ್ನು ಸ್ಥಳಾಂತರಿಸಬೇಕು, ಅವರಿಗೆ ಸಂಪೂರ್ಣವಾಗಿರತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಮಾನ್ಯ ರಾಜು ಕಾಗೆಯವರು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಒಂದು ಸಾರಿ ಅಲ್ಲಿಗೆ ಈ ರಾಜ್ಯದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಅನೇಕ ಸಚಿವರುಗಳು ಆ ಸಂದರ್ಭದಲ್ಲಿ ಭೇಟಿ ಕೊಟ್ಟು, ಅಲ್ಲಿನ ಜನರಿಗೆ ಎರಡು ತಿಂಗಳೊಳಗಾಗಿ ನಾವು ಪುನರ್ವಸತಿ ಕೇಂದ್ರವನ್ನು ಸ್ಥಾಪಿಸುತ್ತೇವೆ ಎನ್ನುವ ಭರವಸೆಯನ್ನೂ ಕೊಟ್ಟಿದ್ದಾರೆ. ನಾನು ಕೇಳಿಕೊಳ್ಳುವುದು ಇಷ್ಟೇ, ಅಥಣಿ ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳು ಅಂದರೆ ಅಥಣಿ ಮತ್ತು ಕಾಗವಾಡ. ಕಾಗವಾಡ ಸಂಪೂರ್ಣ ನೀರಾವರಿಗೆ ಒಳಪಟ್ಟಿರತಕ್ಕಂಥ ಕ್ಷೇತ್ರವಾದರೆ ಅಥಣಿ ಸಂಪೂರ್ಣ ಬರಗಾಲದ ದವಡೆಗೆ ಸಿಕ್ಕು ನರಳತಕ್ಕಂಥ ಕ್ಷೇತ್ರ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ನಾನು ಇಚ್ಛೆಪಡುತ್ತೇನೆ. ಅಥಣಿ ಕ್ಷೇತ್ರದಲ್ಲಿ ಸುಮಾರು 43 ಹಳ್ಳಿಗಳಿಗೆ 5 ವರ್ಷಗಳಿಂದ ಪ್ರತಿವರ್ಷವೂ ಸತತವಾಗಿ ಟ್ಯಾಂಕರ್‌ಗಳ ಮೂಲಕ ನೀರು ಕೊಡುತ್ತಿದ್ದೇವೆ. ಇವತ್ತು ಬಾವಿಗಳು ಮತ್ತು ಬೋರ್‌ವೆಲ್‌ಗಳಲ್ಲಿ ಅಂತರ್ಜಲದ ಮಟ್ಟ ಕುಸಿದು, ನೀರಿನ ಮಟ್ಟ ಬಹಳಷ್ಟು ಕೆಳಕ್ಕೆ ಹೋಗಿರುವುದರಿಂದ ಆ ಭಾಗದಲ್ಲಿ ಕುಡಿಯುವ ನೀರು ಸಿಗದಂಥ ಸಂದರ್ಭವನ್ನು ನಾವು ಕಣ್ಣಾರೆ ಕಂಡಿದ್ದೇವೆ. ಇವತ್ತು

ಏನು ಪ್ರತಿಭಟನೆ ನಡೆಯುತ್ತಿದೆ, ಆ ಪ್ರತಿಭಟನೆ ಕಳೆದ ವರ್ಷ ಪ್ರವಾಹ ಬಂದಂಥ ಸಂದರ್ಭದಲ್ಲಿ ಕೂಡ ನಡೆದಿತ್ತು. ಆಗ ಪ್ರತಿಭಟನೆ ನಡೆದಂಥ ಸಂದರ್ಭದಲ್ಲಿ ಆವತ್ತಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂಥ ಮಾನ್ಯ ಪ್ರಕಾಶ್ ಹುಕ್ಕೇರಿಯವರೂ ಸಹ ಆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಆಗ ಅವರು ನೇರವಾಗಿ phone ಮುಖಾಂತರ ಆವತ್ತು ಸಾಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಧರಂಸಿಂಗ್‌ರವರೊಂದಿಗೆ ಮಾತನಾಡಿ, ಅಥಣಿಯಲ್ಲಿ ಹೋರಾಟ ಪ್ರಾರಂಭವಾಗಿದೆ, ಪ್ರತಿಭಟನೆ ನಡೆಯುತ್ತಿದೆ, ಇವರಿಗೆ ನಾವು ಯಾವ ರೀತಿಯ ಪರಿಹಾರವನ್ನು ಕೊಡಬೇಕು ಕೇಳಿದಾಗ ಅವರು phone ಮುಖಾಂತರ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದೇನೆಂದರೆ, ಸುನಾಮಿಗೆ ಯಾವ ರೀತಿ ಪರಿಹಾರವನ್ನು ಕೊಡಲಾಗಿತ್ತೋ, ಅದೇ ರೀತಿಯ ಪರಿಹಾರವನ್ನು ನಾವು ಅಥಣಿಗೂ ಕೊಡುತ್ತೇವೆ ಎಂದು ಆವತ್ತು ಭರವಸೆಯನ್ನು ಕೊಟ್ಟಿದ್ದರು. ಇನ್ನೂ ನಾವು ಅದರ ನಿರೀಕ್ಷೆಯಲ್ಲಿದ್ದೇವೆ. ಮತ್ತೆ ಸುನಾಮಿ ಮರುಕಳಿಸಿದಾಗ ಮಾತ್ರ ಅದನ್ನು ಉದಾಹರಣೆಯಾಗಿ ತೆಗೆದುಕೊಂಡು ಪ್ರವಾಹದಿಂದ ನೊಂದಂಥ ಜನರಿಗೆ ಪರಿಹಾರ ಕೊಡಬಹುದೇನೋ ಎನ್ನುವ ನಿರೀಕ್ಷೆಯಲ್ಲಿದ್ದೇವೆ. ಆವತ್ತು ಕೊಟ್ಟಿರತಕ್ಕಂಥ ಭರವಸೆಯೂ ಹುಸಿಯಾಗಿದೆ. ಇವತ್ತು ನಮ್ಮದೇ ಆಗಿರತಕ್ಕಂಥ ಕರ್ನಾಟಕ ಅಭಿವೃದ್ಧಿ ರಂಗ ಸರ್ಕಾರ ಬಂದಿರುವುದರಿಂದ, ಅದು ಈ ಭಾಗದ ಜನರ ಕಷ್ಟವನ್ನು ಶಾಶ್ವತವಾಗಿ ಪರಿಹರಿಸಬೇಕಾಗಿದ್ದರೆ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ 28 ಹಳ್ಳಿಗಳಿಗೆ ಸಂಪೂರ್ಣವಾಗಿ ಪುನರ್ವಸತಿ ಕಲ್ಪಿಸಬೇಕು. ಪುನರ್ವಸತಿಯನ್ನು ಯಾವ ರೀತಿ ಕಲ್ಪಿಸಬೇಕೆಂದರೆ, U.K.Pಯಲ್ಲಿ ಜನರಿಗೆ ಯಾವ ರೀತಿ ಪರಿಹಾರ ಕೊಟ್ಟಿದ್ದಾರೆ, ಯಾವ ರೀತಿ ಅವರನ್ನು ಸ್ಥಳಾಂತರ ಮಾಡಿದ್ದಾರೆ, ಅದೇ ರೀತಿಯಲ್ಲಿ ತಾವು ಮಾಡುವಂಥ ಯೋಜನೆಯನ್ನು ಆದಷ್ಟು ಬೇಗನೆ ಜಾರಿಗೆ ತರಬೇಕು. ಅದರ ಜೊತೆಗೆ, ಅಥಣಿ ಕ್ಷೇತ್ರದಲ್ಲಿರತಕ್ಕಂಥ 40–50 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ನಮ್ಮ ಘನವೆತ್ತ ಸರ್ಕಾರ ಸುಮಾರು 30 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ 3 multi village schemeಗಳನ್ನು ಪ್ರಾರಂಭ ಮಾಡಿದ್ದಾರೆ. ನಾವು ಆ ಭಾಗದ ಜನರಿಗೆ ಮತ್ತು ರೈತರಿಗೆ ಕೇವಲ ಕುಡಿಯುವ ನೀರನ್ನು ಕೊಟ್ಟರೆ ಅವರು ಬದುಕಲಿಕ್ಕೆ ಸಾಧ್ಯವಿಲ್ಲ. ಆ ಭಾಗದ ರೈತರ ಬದುಕಬೇಕಾದರೆ, ಸ್ವಾವಲಂಬಿಯಾಗಿ ತನ್ನ ಕಾಲ ಮೇಲೆ ತಾನು ನಿಲ್ಲಬೇಕಾದರೆ ನಾವು ಅವನಿಗೆ ಮೂಲಭೂತವಾದಂಥ ಸೌಕರ್ಯಗಳನ್ನು ಕೊಡಬೇಕು. ಕೃಷ್ಣಾ ನದಿ ಹರಿಯತಕ್ಕಂಥ ಅಥಣಿಯಲ್ಲಿ 12 T.M.C. ನೀರನ್ನು ಬಳಸಿಕೊಂಡು ಆ ಭಾಗದಲ್ಲಿ

ನೀರಾವರಿ ಮಾಡುತ್ತಿದ್ದಾರೆ. "A" Schemeನಲ್ಲಿ ನೀರಾವರಿಯಾಗುತ್ತಿರುವ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಭಾಗಕ್ಕೆ ಬಳಸಿಕೊಂಡಿದ್ದೇ ಆದರೆ ಮಹಾರಾಷ್ಟ್ರದ ಗಡಿ ಭಾಗದಲ್ಲಿರತಕ್ಕಂಥ ಸುಮಾರು 30 ಹಳ್ಳಿಗಳವರು ನಮ್ಮನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಿ, ಈ ಭಾಗದಲ್ಲಿ ನಾವು ಉಳಿಯಲಿಕ್ಕೆ ಸಾಧ್ಯವಿಲ್ಲ, ನಮಗೆ ಮೂಲಭೂತ ಸೌಲಭ್ಯವಿಲ್ಲ ಎನ್ನತಕ್ಕಂಥ ಕೂಗನ್ನು ಅಳಿಸಿಹಾಕಬಹುದು. ಜೊತೆಗೆ, ಈ ಕೂಗನ್ನು ನಾವು ಅಳಿಸಿಹಾಕಬೇಕಾದರೆ, ಅಥಣಿ ತಾಲ್ಲೂಕಿನಲ್ಲಿರುವಂಥ ಸುಮಾರು 50 ಹಳ್ಳಿಗಳಿಗೆ ಶಾಶ್ವತವಾದ ನೀರಾವರಿ ಯೋಜನೆಯನ್ನು ಕಲ್ಪಿಸಬೇಕು ಎನ್ನುವಂಥ ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ, ಬಸವೇಶ್ವರ ಏತನೀರಾವರಿ, ಸುಮಾರು 28 ಹಳ್ಳಿಗಳಿಗೆ ಶಾಶ್ವತವಾದಂಥ ನೀರಾವರಿ ಕೊಡಬೇಕಾದರೆ, B Schemeನಲ್ಲಿ 6 T.M.C. ನೀರನ್ನು ಬಳಸಿಕೊಳ್ಳಬೇಕು ಎನ್ನುವ ಸರ್ಕಾರದ ಯೋಜನೆ ಏನಿದೆ, ಅದರ ಪ್ರಕಾರ, Central Tribunal ಆದೇಶವಾಗುವವರೆಗೆ ಕಾಯದೆ ಕೂಡಲೇ ಒಂದು ಕಾಮಗಾರಿಯನ್ನು ಪ್ರಾರಂಭ ಮಾಡಿ, ಆ ಭಾಗಕ್ಕೆ ಬರುವ B Scheme ನ ನೀರನ್ನು ಆದೇಶವಾದ ಮೇಲೆ ಬಳಸಿಕೊಂಡಿದ್ದೇ ಆದರೆ ಆದಷ್ಟು ಬೇಗನೆ ಆ ರೈತರು ಸ್ವಾವಲಂಬಿಯಾಗಿ ಬದುಕಲು ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಈ ಸರ್ಕಾರದ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ನಾನು ಒಂದೇ ಒಂದು ಮಾತನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಕಾಗವಾಡ ಭಾಗದಲ್ಲಿರತಕ್ಕಂಥ 28 ಹಳ್ಳಿಗಳಿಗೆ ಸಂಪೂರ್ಣವಾಗಿ ಪುನರ್ವಸತಿ ಕಲ್ಪಿಸಬೇಕು ಮತ್ತು ಅಥಣಿ ಕ್ಷೇತ್ರದಲ್ಲಿರತಕ್ಕಂಥ ಎಲ್ಲಾ ಹಳ್ಳಿಗಳವರು ಸುಮಾರು 5–6 ವರ್ಷಗಳಿಂದ ಬರಗಾಲದ ದವಡೆಯಲ್ಲಿ ತತ್ತರಿಸಿದ್ದಾರೆ, ಅವರಿಗೆ ನಿಜವಾಗಿ ಶಕ್ತಿ ಕೊಡಬೇಕಾದರೆ ಆ ಭಾಗದಲ್ಲಿನ ನೀರಾವರಿ ಯೋಜನೆಯನ್ನು ತ್ವರಿತವಾಗಿ ಮುಗಿಸಬೇಕು, ಆ ಯೋಜನೆಯನ್ನು ಮುಗಿಸಿದ್ದಾದರೆ ಆ ಭಾಗದ ರೈತರು ತಮ್ಮ ಕಾಲಮೇಲೆ ತಾವು ನಿಲ್ಲಲು ಸಾಧ್ಯವಿದೆ ಎನ್ನುವಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ, ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಅಭಯ ಪಾಟೀಲ್‌ರವರು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ನಾನು ಎರಡು ದಿವಸಗಳಿಂದ ತಮ್ಮನ್ನು ಕೇಳುತ್ತಿದ್ದೇನೆ. ನನಗೆ ಅವಕಾಶ ಕೊಡಿ, ನಾನು 5 ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಅಭಯ ಪಾಟೀಲ್: ಮಾನ್ಯ ಹುಕ್ಕೇರಿ ಸಾಹೇಬರೇ, ನೀವು 5 ವರ್ಷ ಮಾತನಾಡಿದ್ದೀರಿ, ಈಗ ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ನಾನು ನಿನ್ನೆಯಿಂದ ಕೇಳುತ್ತಿದ್ದೇನೆ, 5 ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಅಭಯ ಪಾಟೀಲ್: ನನಗೆ ಮೂರೂವರೆಗೆ C.M. ಜೊತೆಗೆ ಒಂದು function ಇದೆ, ನೀವು ಒಂದ್ಯೆದು ನಿಮಿಷ ಕುಳಿತುಕೊಳ್ಳಿ.

ಅಧ್ಯಕ್ಷರು: ಅವರದ್ದು ಆದಮೇಲೆ ಮಾತನಾಡಿದರೆ ಏನೂ ತಪ್ಪಿಲ್ಲ, ಅವರದ್ದು ಆದಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ಈಗ ನೀವು ಕುಳಿತುಕೊಳ್ಳಿ.

ಶ್ರೀ ಅಭಯ ಪಾಟೀಲ್ (ಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಅಧಿವೇಶನ ಮಾಡುತ್ತಿರುವಂಥ ಈ ಘನ ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತಾ, ವಿಶೇಷವಾಗಿ ಈ ಅಧಿವೇಶನ ಯಶಸ್ವಿಯಾಗಲು ಕಾರಣರಾದಂಥ ಜಿಲ್ಲಾ ಉಸ್ತುವಾರಿ ಸಚಿವರು, ವಿಧಾನ ಪರಿಷತ್ತಿನ ಹಂಗಾಮಿ ಸಭಾಪತಿಗಳಾದಂಥ ಸಚ್ಚಿದಾನಂದ ಖೋತರವರು, ಕೋರೆಯವರು, ಬಾಲಚಂದ್ರ ಜಾರಕಿಹೊಳಿಯವರು, ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ಸ್ಥಳೀಯ ಜಿಲ್ಲಾಡಳಿತಕ್ಕೆ ಧನ್ಯವಾದವನ್ನು ಹೇಳುತ್ತೇನೆ. ಬೆಳಗಾವಿಯ ಸಮಸ್ಯೆಗಳ ಬಗ್ಗೆ ಅನೇಕ ವಿಚಾರಗಳನ್ನು ಹೇಳಲು ನಾನು 2-3 ದಿವಸಗಳಿಂದ ಅವಕಾಶವನ್ನು ಕೇಳುತ್ತಿದ್ದೆ. ಇಲ್ಲಿರುವಂಥ ಅನೇಕ ಶಾಸಕರು ತಮ್ಮ ಮುಖಾಂತರ ಬೆಳಗಾವಿಯ ವಿಷಯದ ಬಗ್ಗೆ ಬಹಳ ಮಾತನಾಡಿದರು. ಸ್ಥಳೀಯ ಶಾಸಕನಾದ ನಾನಾಗಲೀ, ಮಾನ್ಯ ರಮೇಶ್ ಕುಡಚಿಯವರಾಗಲೀ, ಮನೋಹರ್ ಕಿನೇಕರ್ ರವರಾಗಲೀ, ನಾವುಗಳು 3 ಬೇರೆ ಬೇರೆ ಪಕ್ಷದ ಸದಸ್ಯರುಗಳಿರಬಹುದು. ಒಂದು ಮಾತನ್ನು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಚೆಪಡುತ್ತಿದ್ದೇನೆ, ಇಲ್ಲಿಗೆ ಬಂದಿರುವಂಥ ಅನೇಕ ಶಾಸಕರು ಬೆಳಗಾವಿಯ ಬಗ್ಗೆ ಬಹಳ ಮಾತನಾಡಿದರು. ಆದರೆ ಎಷ್ಟು ಮಂದಿ ಬೆಳಗಾವಿಯನ್ನು ನೋಡಿ, ಇಲ್ಲಿರುವಂಥ ಸಮಸ್ಯೆಗಳ ಬಗ್ಗೆ ಅರ್ಥಮಾಡಿಕೊಂಡರು? ಬರೀ ಅದನ್ನು ತೆಗೆಯಬೇಕು, ಇದನ್ನು ಹಚ್ಚಬೇಕು ಎಂದು ಹೇಳುವುದಲ್ಲ. ನಾನು ಮಾನ್ಯ ಸೋಮಣ್ಣನವರ ಜೊತೆಗೆ ಮಾತನಾಡಿದಾಗ ಅವರು ಹೇಳಿದರು, ನಾನು city ಒಳಗೆ ಹೋಗಿದ್ದೆ, ಅಲ್ಲಿ ಇನ್ನೂ ಎಷ್ಟು ಸಮಸ್ಯೆಗಳಿವೆ, ಸರಿಯಾದಂಥ roadಗಳಿಲ್ಲ ಎಂದು ಹೇಳಿದರು. ನಾವು ಮತ್ತು ಮಾನ್ಯ ಕುಡಚಿಯವರು ಬೇರೆ ಬೇರೆ ಪಕ್ಷದವರಾಗಿರಬಹುದು, ಆದರೆ ಇಲ್ಲಿಯ ಅಭಿವೃದ್ಧಿಗೋಸ್ಕರ ನಾವೆಲ್ಲರೂ ಕೂಡಿಕೊಂಡು ಕೆಲಸ ಮಾಡುತ್ತಿದ್ದೇವೆ. ಮುಖ್ಯವಾಗಿ ಬೆಳಗಾವಿ ಸಮಸ್ಯೆ ಎಂದರೆ

ಒಂದೇ ವಿಷಯಕ್ಕೆ ಸೀಮಿತವಾಗುತ್ತದೆ. ಆದರೆ ಇಲ್ಲಿರುವಂಥ ಮೂಲಭೂತ ಸಮಸ್ಯೆಗಳ ಬಗ್ಗೆ ಮಾನ್ಯ ಎ.ಬಿ. ಪಾಟೀಲ್‌ರವರೂ ಹೇಳಿದರು, ಸವದಿಯವರೂ ಹೇಳಿದರು. ಗಡಿಯಲ್ಲಿರುವಂಥ ಸಮಸ್ಯೆಗಳ ಬಗ್ಗೆ ಜನರಲ್ಲಿ ಯಾವ ರೀತಿಯ ಭಾವನೆ ಬಂದಿದೆ ಎನ್ನುವುದನ್ನು ಅವರು ಹೇಳಿದರು. ಒಂದು ಮಾತನ್ನು ತಮ್ಮ ಮುಖಾಂತರ ಎಲ್ಲಾ ಸದಸ್ಯರಿಗೆ ಹೇಳುತ್ತೇನೆ, ಈ ಅಧಿವೇಶನದಿಂದ ಕನ್ನಡಿಗರು ಮತ್ತು ಮರಾಠಿಗರ ನಡುವೆ ಸಾಮರಸ್ಯ ನಿರ್ಮಾಣವಾಗಬೇಕೇ ವಿನಃ ಅವರಲ್ಲಿ ಅಂತರ ಉಂಟಾಗಬಾರದು. ಅನೇಕ ಘಟನೆಗಳನ್ನು ನಾವು 2–3 ದಿವಸಗಳಿಂದ ನೋಡುತ್ತಿದ್ದೇವೆ. ಅದಕ್ಕೆ ನಾನು ಹೇಳುವುದೇನೆಂದರೆ, ಇಲ್ಲಿ ಅನೇಕ ಭಾವನೆಗಳನ್ನು ವ್ಯಕ್ತ ಮಾಡಿದಂಥ ನಮ್ಮ ಸದಸ್ಯರು 2–3 ದಿವಸ ಬೆಳಗಾವಿಯನ್ನು ಅಡ್ಡಾಡಿ ನೋಡಿ ಬರಬಹುದಿತ್ತು. ಮಾನ್ಯ ಪುಟ್ಟೇಗೌಡರು ಮತ್ತು ನಾನು ಎರಡು ದಿವಸಗಳಿಂದ ಹೋಗಿ, ಇಲ್ಲಿ ಅನೇಕ ಜನರನ್ನು ಸಂಪರ್ಕ ಮಾಡಿ ಅವರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ಹೇಳಿದರು. ಅನೇಕ ಜನರು ಹಾಗೆ ಅರ್ಥ ಮಾಡಿಕೊಳ್ಳದೇ ಇಲ್ಲಿ ಬಂದು ಜನರ ಭಾವನೆಗಳನ್ನು ಕೆರಳಿಸುವಂಥ ಮಾತುಗಳನ್ನಾಡಿದ್ದಾರೆ. ಈ ರೀತಿ ಆಗಬಾರದು. ಇಲ್ಲಿರುವ ನಮ್ಮ ಎಲ್ಲಾ ಸಮಸ್ಯೆಗಳ ಬಗ್ಗೆ, ಅದು ರಸ್ತೆಯಾಗಲೀ, ನೀರಿನ ಸಮಸ್ಯೆಯಾಗಲೀ ನಾವು ಎಲ್ಲಾ ಶಾಸಕರು ಹಾಗೂ ಸಂಸದರು ಕುಳಿತುಕೊಂಡು ಈ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಆದರೂ ಸಮಸ್ಯೆ ಬಗೆಹರಿಯುತ್ತಿಲ್ಲ. ವಿಶೇಷವಾಗಿ ನಮ್ಮ ತಾಲ್ಲೂಕಿನಲ್ಲಿ ಗಡಿ ಭಾಗದ ಹಳ್ಳಿಗಳು ಬರುವುದರಿಂದ, ರಸ್ತೆ, ನೀರಿನ ಸಮಸ್ಯೆ ಬಗ್ಗೆ ಗಂಭೀರ ಚಿಂತನೆಯಾಗಬೇಕಾಗಿದೆ. ಅದೇ ರೀತಿ, ಬೆಳಗಾವಿ ತಾಲ್ಲೂಕಿನ ಅನೇಕ ಮಹನೀಯ ವ್ಯಕ್ತಿಗಳ ಬಗ್ಗೆ ತಮ್ಮ ಭಾಷಣದಲ್ಲಾಗಲೀ ರಾಜ್ಯಪಾಲರ ಭಾಷಣದಲ್ಲಾಗಲೀ ಉಲ್ಲೇಖವಿರಬೇಕಾಗಿತ್ತು. ಕಿತ್ತೂರು ರಾಣಿ ಚೆನ್ನಮ್ಮನವರು ಹುಟ್ಟಿದ ಊರು ಕಾಕತಿ. ಕುಮಾರ ಗಂಧರ್ವರು ಬೆಳಗಾಂನ ಸೂಳಿಬಾವಿಯಲ್ಲಿ ಹುಟ್ಟಿದವರು. ಆ ಊರಿನಲ್ಲಿ ಹುಟ್ಟಿದ್ದಾರೆಯೋ, ಏನೋ? ಆ ಊರಿದೆಯೋ, ಏನೋ ಎಂದು ಗುರುತಿರಲಾರದ ಪ್ರಸಂಗ ನಿರ್ಮಾಣವಾಗಿದೆ. ಅದಕ್ಕೆ ಅವರ ಬಗ್ಗೆ ಒಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ. ಅದೇ ರೀತಿ ಇನ್ನೊಂದು ವಿಷಯ ಬಹಳ ಜನರಿಗೆ ಗುರುತಿಸಲಾರದೆ ಇರಬಹುದು. ಸ್ವರ್ಗೀಯ ಮಾಧವರಾವ್ ಸಿಂಧಿಯಾ ಮತ್ತು ರಾಜ ಮಾತಾ ಅವರ ತಂದೆ ಜಿಯಾಜಿರಾವ್ ಸಿಂಧಿಯಾ ರವರು ಬೆಳಗಾಂ ತಾಲ್ಲೂಕಿನ ಕೋಳಿಕೊಪ್ಪ ಗ್ರಾಮದವರು. ಅವರ ತಂದೆ ಇಲ್ಲೇ ಜನಿಸಿದರೆಂಬುದು ಬಹಳ ಜನರಿಗೆ ಗೊತ್ತಿಲ್ಲ. ಇಂಥ ಮಹಾ ಪುರುಷರನ್ನು ನೀಡಿದ

ಬೆಳಗಾವಿ ತಾಲ್ಲೂಕಿನಲ್ಲಿ ಅನೇಕ ವರ್ಷಗಳಿಂದ ಅಭಿವೃದ್ಧಿಯಾಗಿಲ್ಲ. ಇದೀಗ ಮಾನ್ಯ ಲಕ್ಷ್ಮಣ ಸವದಿಯವರು ಹೇಳುತ್ತಿದ್ದರು, ಏಕೆ ಈ ಭಾವನೆ ನಿರ್ಮಾಣವಾಗಿದೆ ಎಂದರೆ, ಅಭಿವೃದ್ಧಿ ಇಲ್ಲ. ಮಲತಾಯಿ ಧೋರಣೆಯಿಂದ ಈ ಭಾವನೆ ಈ ಭಾಗದಲ್ಲಿ ಬಂದಿದೆ. ಅದೂ ವಿಶೇಷವಾಗಿ ನಾನು ಯಾರ ಹೆಸರನ್ನೂ ಎತ್ತದೆ ಮಾತನಾಡುತ್ತಿದ್ದೇನೆ. ನಮಗೆ ಅಭಿವೃದ್ಧಿ ಬೇಕಾಗಿದೆ. ಅದಕ್ಕೆ ದಯಮಾಡಿ, ಅಭಿವೃದ್ಧಿಯ ಕೆಲಸದಲ್ಲಿ ಈ ಅಡೆತಡೆಗಳನ್ನು ನಿವಾರಣೆ ಮಾಡುವಂಥ ಕೆಲಸವಾಗಬೇಕು. ವಿಶೇಷವಾಗಿ, ಉದ್ಯೋಗ ದೃಷ್ಟಿಯಿಂದ ಬೆಂಗಳೂರು ರಾಜ್ಯದಲ್ಲಿ ಅತಿ ಹೆಚ್ಚಿನ export ಅನ್ನು ಮಾಡುತ್ತದೆ. ಅದಾದ ನಂತರ, 2ನೇ number ಬೆಳಗಾಂ ಇದೆ. Highest export ಮಾಡುವ ಯಾವುದಾದರೂ ಜಿಲ್ಲೆ ಬೆಂಗಳೂರು ನಂತರ ಇದ್ದರೆ ಅದು ಬೆಳಗಾಂ ಜಿಲ್ಲೆ. ಆದರೆ, ನಮ್ಮಲ್ಲಿ industry ಗೆ ಏನು scope ಇದೆ? ಏನೂ ಕೊಟ್ಟಿಲ್ಲ. ಇಲ್ಲಿರುವಂಥ ಸ್ಥಳೀಯ ಮಾಲೀಕರೇ ತಮ್ಮ ಸ್ವಂತ ಬಲದಿಂದ ಇಲ್ಲಿ industry ಯನ್ನು ನಿರ್ಮಾಣ ಮಾಡಿದ್ದಾರೆ. ಮತ್ತೊಂದು ವಿಷಯವನ್ನು ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ, foundry ಉದ್ಯೋಗ ಇಡೀ ದೇಶದಲ್ಲಿ number 5 ರೊಳಗೆ ಬೆಳಗಾಂ ಬಂದಿದೆ. ಅಂದರೆ, ಈ ರೀತಿಯ ಉದ್ಯೋಗದಲ್ಲಿ ಬೆಳಗಾವಿಗೆ ಹಿರಿಮೆ ಇದೆ. ಅದಕ್ಕೆ ನಾನು ಇವತ್ತು ಮಾನ್ಯ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳನ್ನು, ವಿಶೇಷವಾಗಿ Industry Minister ರವರನ್ನು ಆಗ್ರಹ ಮಾಡುತ್ತಿದ್ದೇನೆ, Special Economic Zone ನಲ್ಲಿ ಸುಮಾರು 5,200 ಎಕರೆಯನ್ನು ನಾವು ಈಗಾಗಲೇ identify ಮಾಡಿ ಸರ್ಕಾರಕ್ಕೆ ಜಿಲ್ಲಾಡಳಿತದ ಮೂಲಕ ಪ್ರಸ್ತಾವನೆ ಸಲ್ಲಿಸಿದ್ದೇವೆ. ಅದರ ಬಗ್ಗೆ ಅವರು ಇವತ್ತು ಹೇಳಿಕೆ ಕೊಡಬೇಕಾಗಿದೆ. ಇಲ್ಲಿರುವ ಅನೇಕ ಜನ Special Economic Zone ಬಗ್ಗೆ ಆಸಕ್ತಿ ನಿರ್ಮಾಣ ಮಾಡಿದ್ದಾರೆ. ಆ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ಯಾವಾಗ ಮಂಜೂರು ಮಾಡುತ್ತೀರಿ ಅಥವಾ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿ ಅದರ ಮಂಜೂರಾತಿಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಮಾನ್ಯ ಉದ್ಯೋಗ ಮಂತ್ರಿಗಳು ಇವತ್ತು ನಮಗೆ ಹೇಳಬೇಕೆನ್ನುವಂಥ ಮಾತನ್ನು ಹೇಳುತ್ತೇನೆ. ಏಕೆಂದರೆ, ಈ ಭಾಗದ ಬಹು ಜನರ ಬೇಡಿಕೆಯಾದಂಥ ವಿಶೇಷ ಆರ್ಥಿಕ ವಲಯ ನಿರ್ಮಾಣವಾಗಬೇಕೆಂದರೆ, ಸುಮಾರು 1 ಲಕ್ಷ 50 ಸಾವಿರ ಜನರಿಗೆ ಉದ್ಯೋಗ ನಿರ್ಮಾಣವಾಗುತ್ತದೆ. ಈ 1 ಲಕ್ಷ 50 ಸಾವಿರ ಉದ್ಯೋಗ ನಿರ್ಮಾಣವಾದರೆ, ಇಲ್ಲಿರುವಂಥ ಸಮಸ್ಯೆಗಳು ತನ್ನಂತಾನೇ ಪರಿಹಾರವಾಗುತ್ತವೆ ಎನ್ನುವಂಥ ಮಾತನ್ನು ಹೇಳುತ್ತೇನೆ. ನಮ್ಮಲ್ಲಿ ಇನ್ನೂ ಅನೇಕ

ವಿಚಾರಗಳಿವೆ. Foundry ಆಗಲಿ, Hydraulics ಆಗಲಿ machining ಆಗಲಿ ಇಡೀ ದೇಶದಲ್ಲಿ ಅತಿ ಹೆಚ್ಚಿನ ಗುಣಮಟ್ಟದ ಕೈಗಾರಿಕೆಗಳು ಬೆಳಗಾಂನಲ್ಲಿ ಕಾರ್ಯನಿರತವಾಗಿವೆ. ನೀವು export ನಲ್ಲಿ ತೆಗೆದುಕೊಳ್ಳಿ. Hydraulics ನಲ್ಲಿಯೂ ಸಹ ಇಡೀ ದೇಶದಲ್ಲಿ ಮೊದಲ 10ರೊಳಗೆ ಬೆಳಗಾಂನ ಕಾರ್ಖಾನೆಗಳು ಬರುತ್ತವೆ. ಈಗಾಗಲೇ ನೀವು ಉದ್ಯೋಗಕ್ಕಾಗಿ ಅನೇಕ package ಗಳನ್ನು ಘೋಷಣೆ ಮಾಡಿದ್ದೀರಿ. ಆದರೆ, ವಿಶೇಷವಾಗಿ ಗಡಿ ಭಾಗದಲ್ಲಿರುವ ಬೆಳಗಾಂನಲ್ಲಿ package ಘೋಷಣೆ ಮಾಡದೇ ಇಲ್ಲಿರುವ ಉದ್ಯೋಗಕ್ಕೆ ರಿಯಾಯಿತಿಯನ್ನು power sector ನಲ್ಲಾದರೂ ಕೊಡಬೇಕೆಂದು ಮಾನ್ಯ ಉದ್ಯೋಗ ಮಂತ್ರಿಗಳನ್ನು ಅದೇ ರೀತಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳನ್ನು ಹಿಂದೆ ಕೇಳಿಕೊಂಡಿದ್ದೆವು. ಆದರೆ, ಆಶ್ವಾಸನೆಯಾಗಬಾರದು. ಈ ಅಧಿವೇಶನದ ಮುಖಾಂತರ ಒಂದು ಸಂದೇಶ ಹೋಗಬೇಕು. ಆ ಭಾಗದಲ್ಲಿ ಸ್ಥಾಪಿಸುವ ಉದ್ಯೋಗಕ್ಕೇನಾದರೂ ರಿಯಾಯಿತಿ ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಉದ್ಯೋಗ ಮಂತ್ರಿಗಳು ಹೇಳಬೇಕು. ಇನ್ನೂ ಅನೇಕ ವಿಚಾರಗಳಿವೆ. ನಿನ್ನೆ ಮಾತನಾಡುತ್ತಾ ರಾಜು ಕಾಗೆಯವರು ಹೇಳಿದರು. ಮೂರು ವಿಷಯಗಳನ್ನು ನಾವು ಎಲ್ಲಾ ಶಾಸಕರು ಕೂಡಿ ಒತ್ತಾಯ ಮಾಡಿ, ಅನೇಕ ದಿವಸಗಳಿಂದ ಆಗ್ರಹ ಮಾಡುತ್ತಿದ್ದೇವೆ. ಬೆಳಗಾವಿ Medical College ಗೆ ರಾಣಿ ಚೆನ್ನಮ್ಮನವರ ಹೆಸರಿಡಬೇಕೆಂದು ನಾವೆಲ್ಲಾ ಶಾಸಕರೂ ಮಾನ್ಯ ಧರ್ಮಸಿಂಗ್ ಸಾಹೇಬರು ಅಧಿಕಾರದಲ್ಲಿದ್ದಾಗ ಸಹಿ ಮಾಡಿಕೊಟ್ಟಿದ್ದೇವೆ. ಎರಡನೆಯದು, APMC ಗೆ ಛತ್ರಪತಿ ಶಿವಾಜಿ ಮಹಾರಾಜರ ಹೆಸರಿಡಬೇಕೆಂದು ಕೊಟ್ಟಿದ್ದೇವೆ. ಮೂರನೆಯದು, ಬೆಳಗಾವಿ Bus Stand ಗೆ ಸಂಗೊಳ್ಳಿ ರಾಯಣ್ಣನವರ ಹೆಸರಿಡಬೇಕೆಂದು ಮನವಿ ಕೊಟ್ಟಿದ್ದೇವೆ. ಇವತ್ತೂ ಸಹ ಈ ಅಧಿವೇಶನದ ಮುಖಾಂತರ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ. ಈ ಭಾಗದ ಅಭಿವೃದ್ಧಿಗೆ ಏನು ತೆಗೆಯಬೇಕು, ಏನು ಹಾಕಬೇಕೆಂಬುದು ಮುಖ್ಯವಲ್ಲ. ಇಲ್ಲಿರುವ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ನಾವು ಕೆಲಸ ಮಾಡಿದರೆ ಬಹುತೇಕ ಇಲ್ಲಿನ ಸಮಸ್ಯೆ ಬಗೆಹರಿಯುತ್ತವೆ. ನಾನು ಯಾರನ್ನೂ ಟೀಕೆ ಮಾಡುತ್ತಿಲ್ಲ. ಮರಾಠಿಗರ ವಿಚಾರ ಇರಲಿ, ನೀವು ಕನ್ನಡಿಗರ ಸಮಸ್ಯೆ ಏನು ಎಂಬುದನ್ನೇ ನೆಟ್ಟಿಗೆ ಕೇಳುವ ಸೌಜನ್ಯ ತೋರಿಸುತ್ತಿಲ್ಲ ಮತ್ತು ಇವತ್ತು ಬಂದು ನೀವು ಈ ಮಾತುಗಳನ್ನು ಆಡುತ್ತಿದ್ದೀರಿ. ಅದಕ್ಕೆ ನನಗೆ ಖೇದವೆನಿಸುತ್ತದೆ. ನಮ್ಮಲ್ಲಿರುವ ಕನ್ನಡಿಗರ, ಮರಾಠಿಗರ ಸಮಸ್ಯೆಗಳನ್ನು ಅರಿತುಕೊಂಡು ಅದರ ಮೂಲವನ್ನು ಅರಿತುಕೊಂಡು ನೀವು ಕೆಲಸ

ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ): ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಅವಕಾಶ ಕೊಟ್ಟ ಸಲುವಾಗಿ ತಮ್ಮನ್ನು ಮೊದಲನೆಯದಾಗಿ ನಾನು ಅಭಿನಂದಿಸುತ್ತೇನೆ. ಈಗಾಗಲೇ ನಮ್ಮ ಬೆಳಗಾಂ ಜಿಲ್ಲೆಯ ಶಾಸಕರಾದ ಮಾನ್ಯ ಲಕ್ಷ್ಮಣ ಸವದಿ ಹಾಗೂ ರಾಜು ಕಾಗೆಯವರು ಈ ಪ್ರವಾಹದ ಬಗ್ಗೆ ಮಾತನಾಡಿದ್ದಾರೆ. ಈಗ ವಿಶೇಷವಾಗಿ ಈ ವರ್ಷ ಪ್ರವಾಹ ಹೇಗೆ ಬಂತೋ ಅದೇ ಪ್ರಕಾರ ಹೋದ ವರ್ಷ ಇಷ್ಟೇ ಪ್ರಮಾಣದಲ್ಲಿ ಪ್ರವಾಹ ಬಂದಿತ್ತು. ಆ ವೇಳೆಯಲ್ಲಿ ನಮ್ಮೆಲ್ಲರ ನಾಯಕರಾದ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು ಬೆಳಗಾಂ ಜಿಲ್ಲೆಗೆ 154 ಕೋಟಿ ರೂಪಾಯಿಗಳ ಪರಿಹಾರವನ್ನು ತಕ್ಷಣ ಕೊಟ್ಟರು. ಆ ಪರಿಹಾರವನ್ನು ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿ ಮೊಟ್ಟಮೊದಲಿಗೆ ಅಥಣಿ ತಾಲ್ಲೂಕಿಗೆ 20 ಕೋಟಿ 84 ಲಕ್ಷ ರೂಪಾಯಿಗಳನ್ನು ಕೊಟ್ಟೆ. 24 ಸಾವಿರ ಜನರಿಗೆ ಒಂದು ಸಾವಿರ ರೂಪಾಯಿಗಳಂತೆ relief fund ಕೊಟ್ಟಿದ್ದೇವೆ. Free distribution food grains ಕೊಟ್ಟಿದ್ದೇವೆ. ಆಮೇಲೆ ಅರ್ಧ ಮನೆಗಳೇನು ಬಿದ್ದಿದ್ದವು ಅಥವಾ ಪೂರ್ತಿ ಮನೆಗಳೇನು ಬಿದ್ದಿದ್ದವು, crop compensation ಈ ತರಹದ್ದಕ್ಕೆ 20 ಕೋಟಿ ರೂಪಾಯಿಗಳನ್ನು ಧರ್ಮಸಿಂಗ್ ಸರ್ಕಾರದವರು ತಕ್ಷಣ ಬಿಡುಗಡೆ ಮಾಡಿದರು. ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದ ಹಾಗೆ, ಈ ಸಲ ಸ್ವಲ್ಪ ಕೂಡ ದುಡ್ಡು ಬಂದಿಲ್ಲ. ಅದರ ಬಗ್ಗೆ ಅವರು ಹೇಳುತ್ತಿಲ್ಲ. ನಾನು phone ನಲ್ಲಿ ಮಾತನಾಡಿದ ತಕ್ಷಣ ಆ ಜಾಗದಲ್ಲಿ 154 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಕೊಂಡು 20 ಕೋಟಿ ರೂಪಾಯಿಗಳನ್ನು ಅಲ್ಲಿ ನಾವು ಒಂದು ಸಭೆಯನ್ನು ಮಾಡಿ ಕೊಟ್ಟಿದ್ದೇವೆ. ಅದೇ ಪ್ರಕಾರ, ರಾಯಭಾಗ ತಾಲ್ಲೂಕಿಗೆ 6 ಕೋಟಿ 91 ಲಕ್ಷ, ಚಿಕ್ಕೋಡಿ ತಾಲ್ಲೂಕಿಗೆ 15 ಕೋಟಿ, ಗೋಕಾಕ್ ತಾಲ್ಲೂಕಿಗೆ 4 ಕೋಟಿ 95 ಲಕ್ಷ ರೂಪಾಯಿಗಳು ಈ ತರಹ 154 ಕೋಟಿ ರೂಪಾಯಿಗಳನ್ನು ಪ್ರವಾಹಪೀಡಿತರಾದ ಎಲ್ಲಾ ಜನರಿಗೆ ಇವತ್ತು ಬೆಳೆ ಪರಿಹಾರವಿರಬಹುದು ಅಥವಾ ಬಿದ್ದ ಮನೆಗಳಿಗಿರಬಹುದು ಅಥವಾ ಪ್ರತಿಯೊಂದು ಕುಟುಂಬಕ್ಕೂ ಒಂದೊಂದು ಸಾವಿರ ರೂಪಾಯಿಗಳಂತೆ ಹಾಗೂ free food grain ಅನ್ನು ನಾವು ಕೊಟ್ಟಿದ್ದೇವೆ. ಈಗಾಗಲೇ ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಹಂಚಿಕೆ ಮಾಡಿದ್ದರೂ ಕೂಡ ಮಾನ್ಯ ಲಕ್ಷ್ಮಣ ಸವದಿಯವರು ನಮ್ಮ ಕನಸು ನನಸಾಗಿಲ್ಲವೆಂದು ಹೇಳಿದರು. ನಾವು ಅವರಿಗೆ ಇದಕ್ಕಿಂತ ಏನು ಜಾಸ್ತಿ

ಮಾಡುವುದಕ್ಕಾಗುತ್ತದೆ? ನಾನು ಮೊನ್ನೆ ಕರ್ನಾಟಕ ಸರ್ಕಾರದಿಂದ ಒಂದು GO ತರಿಸಿದೆ. 22/9ಕ್ಕೆ ಬೆಳಗಾಂ ಜಿಲ್ಲೆಗೆ ಪ್ರವಾಹ ಪೀಡಿತ ಪ್ರದೇಶಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ನಾವು ಅತ್ಯಂತ ಕಷ್ಟದಲ್ಲಿದ್ದೇವೆ. ಚಿಕ್ಕೋಡಿ, ರಾಯಭಾಗ ಮತ್ತು ಅಥಣಿ ತಾಲ್ಲೂಕುಗಳ ಜನ ಭಾರೀ ಕಷ್ಟದಲ್ಲಿದ್ದಾರೆ. ಈಗಾಗಲೇ ಕಬ್ಬು ಎಲ್ಲಾ ಸಂಪೂರ್ಣವಾಗಿ ನಾಶವಾಗಿದೆ. ಮಾನ್ಯ ಜಗದೀಶ್‌ಶೆಟ್ಟರ್‌ರವರು ಇಲ್ಲಿದ್ದಾರೆ. ದಯವಿಟ್ಟು, ತಕ್ಷಣ ನಮ್ಮ ಜಿಲ್ಲೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮೊದಲನೆಯದಾಗಿ, ಬೆಳಗಾವಿಯಲ್ಲಿ ಅಧಿವೇಶನ ಮಾಡಿದ ಸಲುವಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಉಪ ಮುಖ್ಯಮಂತ್ರಿಗಳಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಬಹಳ ದಿವಸಗಳಿಂದ, ಜೆ.ಹೆಚ್.ಪಟೇಲರ ಕಾಲದಿಂದಲೂ ಕೂಡ ಬೆಳಗಾಂ ಜಿಲ್ಲೆಯನ್ನು ವಿಭಾಗ ಮಾಡಿ ಒಂದು ಚಿಕ್ಕೋಡಿ ಜಿಲ್ಲೆ ಮಾಡಬೇಕು ಮತ್ತು ಒಂದು ಬೆಳಗಾಂ ಜಿಲ್ಲೆ ಇರಬೇಕು ಎಂದು ಆ ತರಹ ನಾವು ಕೇಳಿದ್ದೇವೆ. ಆ ಚಿಕ್ಕೋಡಿ ಜಿಲ್ಲೆ ಆಗುವ ಸಲುವಾಗಿ ನಾನು ಜಿಲ್ಲಾ ಉಸ್ತುವಾರಿ ಸಚಿವನಾದ ಮೇಲೆ ಯಾವ ಯಾವ office ಗಳು ಬೇಕು, RTO office ಇರಬಹುದು, KEB office ಇರಬಹುದು, ಭಾರೀ ನೀರಾವರಿ ಇರಬಹುದು, ಜಿಲ್ಲಾ ಪಂಚಾಯತ್ ಇರಬಹುದು, ಜಿಲ್ಲೆಯಲ್ಲಿ ಏನೇನು office ಗಳು ಬೇಕು ಆ ಎಲ್ಲಾ office ಗಳನ್ನು ನಾವು ಈಗಾಗಲೇ ಚಿಕ್ಕೋಡಿಯಲ್ಲಿ ಧರ್ಮಸಿಂಗ್‌ರವರ ಸರ್ಕಾರದ ಕಾಲದಲ್ಲಿ ತಂದಿದ್ದೇವೆ. ನಾನು ಉಪ ಮುಖ್ಯಮಂತ್ರಿಗಳಲ್ಲಿ ಮತ್ತು ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ, ಈ ಸದನ ಮುಗಿಯುವುದರೊಳಗಾಗಿ ಚಿಕ್ಕೋಡಿ ಜಿಲ್ಲೆಯನ್ನು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿಕ್ಕೋಡಿ, ಅಥಣಿ, ರಾಯಭಾಗ ಮತ್ತು ಹುಕ್ಕೇರಿ ಶಾಸಕರುಗಳ ಪರವಾಗಿ ಅವರಲ್ಲಿ ನಾನು ಇವತ್ತು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಸಕ್ಕರೆ ಸಚಿವರಿದ್ದಾರೆ. ನಮ್ಮ ಕರ್ನಾಟಕದ ಗಡಿಭಾಗದಿಂದ ಸುಮಾರು 12 ಲಕ್ಷ ಟನ್ ಕಬ್ಬು ಮಹಾರಾಷ್ಟ್ರಕ್ಕೆ ಹೋಗಿದೆ. ಅಥಣಿ ಚಿಕ್ಕೋಡಿ ಅಥವಾ ರಾಯಭಾಗ ತಾಲ್ಲೂಕುಗಳಿರಬಹುದು ಸುಮಾರು 12ಲಕ್ಷ ಟನ್ ಕಬ್ಬನ್ನು ಕರ್ನಾಟಕದಿಂದ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗೆ ಕಳುಹಿಸಿದ್ದೇವೆ. ಅವರು ಇವತ್ತು 1600, 1700 ರೂಪಾಯಿ ಹಿಡಿದುಕೊಂಡು, ಇವತ್ತು 1375 ರವರೆಗೆ ನಮಗೆ ದರ ಕೊಟ್ಟಿದ್ದಾರೆ. ಕರ್ನಾಟಕದಿಂದ ಯಾವ ರೈತರು ಕಬ್ಬು ಪೂರೈಸಿದ್ದಾರೆ, ನಮ್ಮ ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಗಳಿಗೆ ಗಡಿ ಭಾಗದಲ್ಲಿ ಏನು ಕಬ್ಬು ಪೂರೈಸಿದ್ದಾರೆ, ಅವರಿಗೆ ಇವತ್ತು 48

ಕೋಟಿ ರೂಪಾಯಿಗಳು ಸಿಕ್ಕಿದೆ. ಆದರೆ ಇವತ್ತು ಮೇಲಿಂದ ಮೇಲೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮೇಲೆ ನಾವು ಏನೂ ಮಾಡುತ್ತಿಲ್ಲವೆನ್ನುವ ವಿಚಾರವನ್ನು ದಯಮಾಡಿ ನಮ್ಮ ಸಕ್ಕರೆ ಸಚಿವರು ಹೇಳಬಾರದು. ಇವತ್ತು ಈ ಜಿಲ್ಲೆಯ ಪರಿಸ್ಥಿತಿಯನ್ನು ನೋಡಿಕೊಂಡು ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಯ ಇಳುವರಿ 13 ಇದ್ದರೂ ಕೂಡ ಕರ್ನಾಟಕದಲ್ಲಿ ನಮ್ಮ ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಯ ಇಳುವರಿ ಕೂಡ 13 ಇದೆ. ಆದ್ದರಿಂದ ನಾನು ಅವರಿಗೆ ಈ ಒಂದು ಪತ್ರವನ್ನು ಕಳುಹಿಸಿದ್ದೆ. ಉದಾಹರಣೆಗೆ ಜವಾಹರ ಸಕ್ಕರೆ ಕಾರ್ಖಾನೆಗೆ ಕರ್ನಾಟಕದಿಂದ 4 ಲಕ್ಷ 62 ಸಾವಿರ ಟನ್ ಕಬ್ಬು ಹೋಗಿದೆ. ಅದೇ ಪ್ರಕಾರ ದತ್ತ ಕಾರ್ಖಾನೆಗೆ ಕರ್ನಾಟಕದಿಂದ 2.63 ಲಕ್ಷ ಟನ್ ಕಬ್ಬು ಹೋಗಿದೆ. ಈ ರೀತಿಯಾಗಿ ಸುಮಾರು 7 ಸಕ್ಕರೆ ಕಾರ್ಖಾನೆಗಳಿಗೆ 12 ಲಕ್ಷ ಟನ್ ಕಬ್ಬು ಹೋಗಿದೆ. ಅವರೆಲ್ಲರೂ 1600 ರಿಂದ 1375 ರೂಪಾಯಿಗಳವರೆಗೆ ದರವನ್ನು ಕೊಟ್ಟಿದ್ದಾರೆ. ಅಂದರೆ ಸುಮಾರು 48 ಕೋಟಿ ರೂಪಾಯಿಗಳು ನಮ್ಮ ಗಡಿ ಭಾಗದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಮಾನ್ಯ ಸಕ್ಕರೆ ಸಚಿವರು ಮೊನ್ನೆ ಚಿಕ್ಕೋಡಿ ತಾಲ್ಲೂಕಿಗೆ ಭೇಟಿ ಕೊಟ್ಟಿದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಯಾರು ಬರೆದುಕೊಳ್ಳುತ್ತಿದ್ದಾರೆ? ಮಾನ್ಯ ಸಕ್ಕರೆ ಸಚಿವರು ಇಲ್ಲ. ಯಾರಾದರೂ ಬರೆದುಕೊಳ್ಳುತ್ತಿದ್ದಾರೆಯೆ?

ಶ್ರೀ ಜಗದೀಶ್ ಶೆಟ್ಟರ್: ನಾನು ಇದ್ದೇನೆ, ಮಾನ್ಯ ಉಪ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಲ್ಲಿಯೇ ಇದ್ದೀರಿ. ಏನು ಮಾಡುತ್ತಿದ್ದಾರೆ ಎನ್ನುವುದನ್ನು ಹೇಳುತ್ತೇನೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್: ಸಂಬಂಧಪಟ್ಟ ಸಚಿವರುಗಳು ಇಲ್ಲಿಯೇ ಇದ್ದೇವೆ. ಏಕೆ ಹೇಳುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈಗ ಯಾರ್‍ಯಾರು ಎಲ್ಲೆಲ್ಲಿ ಇದ್ದಾರೆಂದು ನೋಡಿದೆ. ಜಗದೀಶ್ ಶೆಟ್ಟರ್‌ವರು ಮಾನ್ಯ ಲಾಡ್‌ರವರ ಜೊತೆಯಲ್ಲಿ strategy ಮಾಡುವುದರಲ್ಲಿ ಮಗ್ನವಾಗಿದ್ದಾರೆ. ಉಳಿದ ಮಂತ್ರಿಗಳು ಪತ್ತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ.

Sri J.C. Madhuswamy: Strategy ಅಲ್ಲ ಇವರು ಮಾಹಿತಿ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಅಲ್ಲ ನಿಮ್ಮಿಬ್ಬರ strategy ಏನು ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಯಾರು ಪರ ಇದ್ದಾರೆ ಅವರನ್ನು ಒಲಿಸಿಕೊಳ್ಳುವುದಕ್ಕೆ ಅವರು ಅಲ್ಲಿ ಹೋಗುತ್ತಿದ್ದಾರೆ. ಆದರೆ ಇಲ್ಲಿ ಜಗದೀಶ್ ಶೆಟ್ಟರ್ ರವರು ಅವರ ಜೊತೆಯಲ್ಲಿ ಮಾತನಾಡಿಕೊಂಡು ಅವರು ಕುಳಿತಿದ್ದಾರೆ. ಪಾಪ ಅವರ ಗೋಳು ಯಾರು ಕೇಳುವವರು?

ಶ್ರೀ ಜಗದೀಶ್ ಶೆಟ್ಟರ್: ಯಾವ strategy ಎಂಬುದು ಅರ್ಥವಾಗಲಿಲ್ಲ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಎರಡು ನಿಮಿಷದಲ್ಲಿ ನಾನು ಮುಗಿಸಿಬಿಡುತ್ತೇನೆ.

(ಅಡಚಣೆ)

ಅಧ್ಯಕ್ಷರು: ಆಯಿತು. ಬೇಗನೆ ಮುಗಿಸಿಬಿಡಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ...

ಶ್ರೀ ಹೆಚ್. ಆಂಜನೇಯ: ಸಾಕು ಬಿಡಿ ಮಾನ್ಯ ಹುಕ್ಕೇರಿಯವರೇ,

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಮಾನ್ಯ ಶಶಿಕಾಂತ ನಾಯ್ಕರನ್ನು ಕೊಟ್ಟಿದ್ದೀರಿ. ಅವರು ರೈತರ ಪ್ರತಿನಿಧಿ. ರೈತರ ಪರವಾಗಿ ಹೋರಾಟ ಮಾಡಿ ಬಂದವರು. ಈ ಕಠಿಣ ಸಮಸ್ಯೆಗಳನ್ನು ಸಾಕಷ್ಟು ಸಲ ಅವರ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ, meeting ಮಾಡುತ್ತೇನೆ ಎಂದು ಕುರ್ಚಿ ಸಿಕ್ಕ ಮೇಲೆ ಎಲ್ಲವನ್ನೂ ಮರೆತುಬಿಡುತ್ತಾರೆ. ಕುರ್ಚಿ ಸಿಕ್ಕಿತೆಂದರೆ ರೈತರನ್ನೂ ಮರೆತು ಬಿಡುತ್ತಾರೆ, ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿಯನ್ನೂ ಅವರು ಮರೆಯುತ್ತಿದ್ದಾರೆ. ಆ ದೃಷ್ಟಿಯಿಂದ ಅವರು ಮರೆಯಬಾರದು. ರೈತರ ಪರವಾಗಿ ಹೋರಾಟ ಮಾಡಿ ಬಂದಿದ್ದಾರೆ. ರೈತರ ಕಷ್ಟ ನಷ್ಟ ಅವರಿಗೆ ಗೊತ್ತಿದೆ. ದಯವಿಟ್ಟು ನಾನು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶಶಿಕಾಂತ ನಾಯ್ಕರವರಲ್ಲಿ ಮತ್ತು ಸಕ್ಕರೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಬರೇ meeting ಮಾಡುತ್ತೇವೆ, ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಎಂಬ ಈ ರೀತಿಯ ಹೇಳಿಕೆಯನ್ನು ಕೊಡದೆ ತಕ್ಷಣ ನಾಳೆ ಏನು ಕಾರ್ಖಾನೆಗಳು ಪ್ರಾರಂಭವಾಗಲಿವೆ ಅದಕ್ಕೆ ಮುಂಚಿತವಾಗಿಯೇ ರೈತರಿಗೆ ಯೋಗ್ಯವಾದ ಕಬ್ಬಿನ ದರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿ 1600 ರೂಪಾಯಿಗಳನ್ನು ಕೊಟ್ಟಿದ್ದರೆ ಇಲ್ಲಿ ಕನಿಷ್ಟ ಪಕ್ಷ 1400ರೂಪಾಯಿಗಳ ದರವನ್ನು ಕೊಟ್ಟು ರೈತರ ಆರ್ಥಿಕ ಪರಿಸ್ಥಿತಿಯನ್ನು ಮೇಲೆತ್ತುವ ಕಾರ್ಯವನ್ನು ಮಾಡಬೇಕೆಂದು ಸಕ್ಕರೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮರಿಯಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು): ಮಾನ್ಯ ಅಧ್ಯಕ್ಷರೆ, ಬೆಳಗಾವಿಯ ಈ ಐತಿಹಾಸಿಕ ಅಧಿವೇಶನಕ್ಕೆ ಸ್ವಾಗತವನ್ನು ಕೋರುತ್ತಾ ನನ್ನ ಮತ ಕ್ಷೇತ್ರಕ್ಕೆ ವಿಶೇಷ ಕೊಡುಗೆಯಾಗಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ರಚನೆ ಮತ್ತು ಗಂಗಾಂಬಿಕೆ ಸ್ಮಾರಕ ಮಂಟಪ ನಿರ್ಮಾಣ ಈ ಕಾರ್ಯವನ್ನು ಮಾಡಿರುವುದಾಗಿ ಈ ಐತಿಹಾಸಿಕ ಅಧಿವೇಶನದಲ್ಲೇ ಸರ್ಕಾರವು ಘೋಷಣೆ ಮಾಡಿದ್ದಕ್ಕೆ ನಾನು ಮತ್ತು ಕಿತ್ತೂರು ನಾಡಿನ ಸಮಸ್ತ ಜನರ ಪರವಾಗಿ ಅಭಿನಂದಿಸುತ್ತೇನೆ. ನನ್ನ ಮತಕ್ಷೇತ್ರದಲ್ಲಿ ನೀರಾವರಿ ಇರುವುದಿಲ್ಲ. ಮಲಪ್ರಭಾ ನದಿ ಹರಿಯುತ್ತಿದೆ. ಆ ನದಿಯಿಂದ life irrigation ಮುಖಾಂತರ 50 ಕೆರೆಗಳನ್ನು ತುಂಬಿಸುವಂಥಹ ವ್ಯವಸ್ಥೆಯನ್ನು ಮಾಡಿದರೆ, ನಮ್ಮ ಭಾಗದ ರೈತರಿಗೆ ಬಹಳ ಅನುಕೂಲ ಆಗುತ್ತದೆ. ಅದೇ ರೀತಿ ಈ ವಿಶೇಷ ಅಧಿವೇಶನದಲ್ಲಿ, ಈ ಐತಿಹಾಸಿಕ ಕಿತ್ತೂರಿಗೆ B.E.O. office ಆಗಬೇಕು, Sub-registrar office ಆಗಬೇಕು ಮತ್ತು ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಣೆ ಮಾಡಬೇಕು ಎನ್ನುವಂಥದ್ದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ಕಿತ್ತೂರಿನ ಉತ್ಸವವನ್ನು ಅಕ್ಟೋಬರ್ 23, 24ನೇ ತಾರೀಖಿಗೆ ಆಚರಣೆಯನ್ನು ಮಾಡುತ್ತಾರೆ. ಹಂಪಿ ಮತ್ತು ಕದಂಬ ಉತ್ಸವದ ರೀತಿಯಲ್ಲಿ ರಾಜ್ಯ ಮಟ್ಟದ ಉತ್ಸವವನ್ನಾಗಿ ಈ ಕಿತ್ತೂರು ಉತ್ಸವವನ್ನು ಆಚರಿಸಬೇಕೆಂದು ಕೇಳಿಕೊಂಡು, ಈ ಅಧಿವೇಶನದಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಾಮನಿ ವಿಶ್ವನಾಥ ಕರಿಬಸವಪ್ಪ(ಪರಸಗಡ): ಮಾನ್ಯ ಸಭಾಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತಾ, ಐತಿಹಾಸಿಕವಾಗಿರತಕ್ಕ ಈ ಅಧಿವೇಶನ ನಾಡಿನುದ್ದಕ್ಕೂ ಎಲ್ಲರಿಗೂ ಸಂತೋಷವನ್ನು ಉಂಟು ಮಾಡಿದೆ. ನಾನು ತಾಲ್ಲೂಕಿಗೆ ಸೀಮಿತವಾಗಿ ನಾಲ್ಕು ಮಾತುಗಳ್ನು ಹೇಳುವುದಕ್ಕೆ ಬಯಸುತ್ತೇನೆ. ಮಲಪ್ರಭ damಅನ್ನು ಕಟ್ಟಿ 30 ವರ್ಷವಾಯಿತು. ಸುಮಾರು 85 ಸಾವಿರ ಹೆಕ್ಟೇರ್ ಭೂಮಿಯನ್ನು ನೀರಾವರಿಗೊಳಿಸತಕ್ಕ ಈ dam 30 ವರ್ಷದ ಹಿಂದೆ ಕಟ್ಟಿದ ಮೇಲೆ ಆನಂತರ ರಿಪೇರಿಗೆ ಹಣವೇ ಇಲ್ಲ. ಎಲ್ಲಾ canalಗಳು ಮುಚ್ಚಿ ಹೋಗಿವೆ. ಸುಮಾರು 50% ಭೂಮಿಗೆ ಆ ನೀರು ಹೋಗುವುದಿಲ್ಲ. 11 life irrigation scheme ಗಳು ಇವೆ. ಆದರೆ ಈ 11 lift irrigation schemeಗಳಲ್ಲಿ remodeling work ತೆಗೆದುಕೊಂಡರೆ ಮಾತ್ರ ಆ ರೈತರ ಭೂಮಿಗೆ ನೀರು ಹೋಗುವಂಥ ಕಾರ್ಯ ಆಗುತ್ತದೆ. ಈಗಾಗಲೇ ನೀರಾವರಿ ಸಚಿವರಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಸುಮಾರು 24 ಕೋಟಿ

ರೂಪಾಯಿಗಳನ್ನು special repair ಗಾಗಿ ಕೊಟ್ಟರೆ ಮಾತ್ರ ಅಲ್ಲಿ ಅನುಕೂಲವಾಗುತ್ತದೆ ಎಂಬುದನ್ನು ತಮ್ಮ ಮುಖಾಂತರ ಹೇಳಲು ಬಯಸುತ್ತೇನೆ. ಈಗಾಗಲೇ ಕಳಸಾ ಬಂಡೂರಿ ನಾಲೆಯನ್ನು ಜೋಡಿಸುತ್ತೇವೆ ಎಂಬ ಸುದ್ದಿ ಎಲ್ಲರಿಗೂ ಸಂತೋಷವನ್ನು ಉಂಟು ಮಾಡುತ್ತಿದೆ. ಸುಮಾರು 7.5 tmc ಯಷ್ಟು ನೀರು ಮಲಪ್ರಭಾ ನದಿಯಿಂದ ಹರಿದು ಬಂದರೂ ಕೂಡ, ಅಲ್ಲಿ 50% ಇದ್ದಂಥ ನೀರೂ ಕೂಡ ಸದ್ಬಳಕೆಯಾಗುತ್ತಿಲ್ಲ. ನೀರು ಪೋಲಾಗಿ ಹೋಗುತ್ತಿದೆ. ಅದನ್ನು ತಡೆಗಟ್ಟುವಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವಂಥದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ರೇಣುಕಾ ಎಲ್ಲಮ್ಮನ ದೇವಸ್ಥಾನದ ಬಗ್ಗೆ. ಇದು ಬಹಳ ವಿಶೇಷವಾಗಿರತಕ್ಕಂಥದ್ದು ಮತ್ತು ಶಕ್ತಿ ಪೀಠವಾಗಿರತಕ್ಕಂಥದ್ದು. ಆ ದೇವಸ್ಥಾನಕ್ಕೆ ಒಂದು ಪ್ರಾಧಿಕಾರದ ರಚನೆ ಆಗಬೇಕಾಗಿದೆ. ಸುಮಾರು 10 ಲಕ್ಷ ಜನ ನಾಡಿನ ಉದ್ದಗಲದಿಂದ ಬಂದು ಹೋಗುತ್ತಾರೆ. ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ. ದಯವಿಟ್ಟು ಆ ಪ್ರಾಧಿಕಾರ ರಚನೆಯಾಗಬೇಕೆಂದು ನಾನು ಈಗಾಗಲೇ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಈಗಲೂ ಮಾಡುತ್ತಿದ್ದೇನೆ. ಈಗಾಗಲೇ ನಾನು ಅವರಿಗೆ ತಿಳಿಸಿದ್ದೇನೆ. ಅವರೂ ಕೂಡ ಮೊನ್ನೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಬಹಳಷ್ಟು ಜನ ಅಲ್ಲಿ ಸೇರುತ್ತಾರೆ. ಆದರೆ, ಮೂಲಭೂತ ಸೌಕರ್ಯಗಳಿಲ್ಲ, ದಯವಿಟ್ಟು ಯಲ್ಲಮ್ಮ ದೇವಸ್ಥಾನದ ಪ್ರಾಧಿಕಾರದ ರಚನೆಯಾಗಿ ಸಕಲ ಸದ್ಭಕ್ತರಿಗೆ ಅನುಕೂಲವಾಗುವ ರೀತಿಯಲ್ಲಿ ಅಲ್ಲಿ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೀದ್ದೇನೆ. ಅದಲ್ಲದೆ ಈಗಾಗಲೇ ಈ ಜಿಲ್ಲೆಗೆ ಸಾಕಷ್ಟು ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಆದರೆ ಹೈಸ್ಕೂಲ್‌ನಲ್ಲಿ ಕಲಿಸತಕ್ಕಂಥ ಗುರುಗಳ ಕೊರತೆ ಬಹಳಷ್ಟು ಇದೆ. ಯಾವ ಹೈಸ್ಕೂಲ್‌ಗಳಲ್ಲೂ ಇವತ್ತು Head masters ಇಲ್ಲ. ಇವತ್ತೇನು ಸರ್ಕಾರಿ ಹೈಸ್ಕೂಲ್ ಆಯಿತು, ಬಹಳಷ್ಟು ಜನರಿಗೆ ಅಲ್ಲಿ ಸಂತೋಷವನ್ನು ಉಂಟು ಮಾಡಿದರೂ ಅಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಸತಕ್ಕಂಥ ಗುರುಗಳ ಕೊರತೆ ಎದ್ದು ಕಾಣುತ್ತಿದೆ, ಅದನ್ನೂ ಕೂಡ ನೀಗಿಸುವಂತ ರೀತಿಯಲ್ಲಿ ಕೆಲಸ ಮಾಡಬೇಕು. ಇನ್ನು ರಸ್ತೆಗಳ ಬಗ್ಗೆ, ಯಾವ ರಸ್ತೆಗಳು ಸರಿಯಿಲ್ಲ, ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ನನ್ನ ತಾಲ್ಲೂಕುಗಳಲ್ಲಿ ಇರಿಗೇಷನ್ ರೋಡ್ ಆಗಿರಬಹುದು, ಆರ್‌ಡಿಪಿಆರ್ ರೋಡ್ ಆಗಿರಬಹುದು, ಪಿಡಬ್ಲ್ಯೂಡಿ ರೋಡ್ ಆಗಿರಬಹುದು, ಯಾವ ರೋಡ್ ಸರಿಯಿಲ್ಲ. ಕಿಲೋಮೀಟರ್ ಮೇಲೆ ಅಲ್ಲಿ ರಿಪೇರಿಗಾಗಿ ಹಣವನ್ನು ಕೊಡಬೇಕಾಗಿದೆ. ಆರ್‌ಡಿಪಿಅರ್ ರಸ್ತೆ ಕಿಲೋಮೀಟರ್

4.00 ಪಿಎಂ

ಮೇಲೆ ರಸ್ತೆ ರಿಪೇರಿಗಾಗಿ ಹಣವನ್ನು ಕೊಡಬೇಕು, ಇದರಲ್ಲಿ ತಾರತಮ್ಯ ಕೂಡ ಆಗಿದೆ. ನಾನು ಬಹಳ ವಿಷಾದದಿಂದ ಹೇಳುವುದೇನೆಂದರೆ, ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಶಾಸಕರುಗಳಿಗೆ ಮಾತ್ರ ಹಣವನ್ನು ತಾವು ಬಿಡುಗಡೆ ಮಾಡಿದ್ದೀರಿ, ಉಳಿದಂಥ ಶಾಸಕರುಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ನೀವೇನು 30 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೀರಿ, ಅದು ಎಲ್ಲಾ ಶಾಸಕರುಗಳಿಗೆ ದಕ್ಕಬೇಕಾಗಿತ್ತು. ಆ 30 ಲಕ್ಷ ಸಾಲದಂಥ ಸ್ಥಿತಿಯಲ್ಲಿ ನಮಗೆ ಹಣ ಬಂದಿಲ್ಲ. ನನ್ನ ತಾಲ್ಲೂಕಿನಲ್ಲಿ ಎಲ್ಲಾ ರಸ್ತೆಗಳೂ ಕೆಟ್ಟಿವೆ. ರೈತರ ಸಂಪರ್ಕ ರಸ್ತೆಗಳಿಗೆ ಹೋಗುವುದಕ್ಕೆ ಅನಾನುಕೂಲತೆ ಬಹಳಷ್ಟು ಇದೆ. ಇದು ಎಷ್ಟು ಕಿ.ಮೀ. ಇದೆ ಅಷ್ಟಕ್ಕೆ ತಾವು ರಿಪೇರಿಗೆಂದು ಹಣ ಕೊಡದಿದ್ದರೆ ಬಹಳಷ್ಟು ತೊಂದರೆಯಾಗುತ್ತದೆ. ಆ ರಸ್ತೆಗಳು ಇರಿಗೇಷನ್, ಪಿ.ಡಬ್ಲ್ಯೂ.ಡಿ, ಆರ್.ಡಿ.ಪಿ.ಆರ್. ಆಗಿರಬಹುದು, ಈ ಎಲ್ಲಾ ರಸ್ತೆಗಳ ರಿಪೇರಿಗಾಗಿ ಹಣವನ್ನು ಕೊಡಬೇಕೆಂದು ವಿನಂತಿ ಮಾಡಿಕೊಂಡು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಸ್ಪಷ್ಟತೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಬರ, ನೆರೆಗೆ ಸಂಬಂಧಪಟ್ಟಂತೆ ಚರ್ಚೆ ಇದೆಯೋ ಅಥವಾ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಚರ್ಚೆ ಇದೆಯೋ ಅಥವಾ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿದೆಯೋ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಬೆಳಗಾಂ ಜಿಲ್ಲೆಯ ಶಾಸಕರು ಯಾರ್‍ಯಾರು ಹೆಸರು ಕೊಟ್ಟಿದ್ದಾರೋ ಅವರಿಗೆ ಮೊದಲ ಆದ್ಯತೆ ಕೊಟ್ಟು ಉಳಿದಂಥವರಿಗೆ ಅನಂತರ ಅವಕಾಶ ಕೊಡುತ್ತೇನೆ.

ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ: ಮಾನ್ಯ ಅಧ್ಯಕ್ಷರೆ, ನಾವು ಕೇವಲ ಬರಗಾಲದ ಬಗ್ಗೆ ಮಾತನಾಡುತ್ತಿಲ್ಲ. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇವೆ. ಬರ ಅಷ್ಟೇ ಅಲ್ಲದೆ ಸಮಗ್ರ ಅಭಿವೃದ್ಧಿ ಆಗಲೆಂಬ ದೃಷ್ಟಿಯಿಂದ ಮತ್ತು ಪ್ರಾಧಿಕಾರ ರಚನೆ ಬಗ್ಗೆ ಕೇಳಿಕೊಂಡಿದ್ದೇವೆ. ದಯವಿಟ್ಟು ಇವುಗಳನ್ನೂ ಕೂಡ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸರೀಕಾರ್ ಭೀಮಪ್ಪ ಚೆನ್ನಪ್ಪ (ರಾಯಭಾಗ್): ಮಾನ್ಯ ಅಧ್ಯಕ್ಷರೆ, ಈ ಸುವರ್ಣ ಕರ್ನಾಟಕದ ಈ ವಿಧಾನ ಸಭೆ ಅಧಿವೇಶನವನ್ನು ಬೆಂಗಳೂರು ಬಿಟ್ಟು ಬೆಳಗಾವಿಯಲ್ಲಿ ಈ ಒಂದು ಐತಿಹಾಸಿಕ ಅಧಿವೇಶನಕ್ಕೆ ಬಂದಂಥ ಎಲ್ಲಾ ಶಾಸಕರು,

ಮಂತ್ರಿಗಳು ಹಾಗೂ ಅಧಿಕಾರಿಗಳು, ಪತ್ರಕರ್ತರು ಹಾಗೂ ಮೀಡಿಯಾದವರಿಗೆ ನನ್ನ ರಾಯಭಾಗ ತಾಲ್ಲೂಕಿನ ಸಮಸ್ತ ಜನರ ಪರವಾಗಿ ಸ್ವಾಗತ ಕೋರಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೂ ಕೂಡ ಧನ್ಯವಾದಗಳನ್ನರ್ಪಿಸಿ ನನ್ನ ರಾಯಭಾಗ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎರಡು ವರ್ಷಗಳಿಂದ ರಾಯಭಾಗ ತಾಲ್ಲೂಕಿನ ಜನರು ಪ್ರವಾಹಕ್ಕೆ ಸಿಲುಕಿ ಕಷ್ಟಕ್ಕೀಡಾಗಿದ್ದಾರೆ. ಕಳೆದ ಸಲ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸರ್ಕಾರ ಇದ್ದಾಗ ಮಾನ್ಯ ಧರ್ಮಸಿಂಗ್ ಸಾಹೇಬರು ನಮ್ಮ ತಾಲ್ಲೂಕಿಗೆ ರಸ್ತೆಗಳಿಗೋಸ್ಕರ ಹಣ ಬಿಡುಗಡೆ ಮಾಡಿದ್ದರು. ನಮ್ಮ ರಾಯಭಾಗ ತಾಲ್ಲೂಕಿಗೆ ಕಳೆದ ಐವತ್ತು ವರ್ಷಗಳಿಂದ ಬಂದಂಥ ಯಾವುದೇ ಶಾಸಕರು ಈ ಕೆಲಸವನ್ನು ಮಾಡಿರುವುದಿಲ್ಲ. ನಾನು ಬಂದ ಮೇಲೆ ಮಾನ್ಯ ಧರ್ಮಸಿಂಗ್ ಅವರ ಹತ್ತಿರ ಹೋಗಿ ಕೇಳಿಕೊಂಡಾಗ ಅವರು ನನಗೆ ಒಳ್ಳೆಯ ಸಹಕಾರ ಮಾಡಿದರು. ಮತ್ತೆ, ಬರಗಾಲ ಪೀಡಿತವಾದ ನಂತರ ಇಪ್ಪತ್ತು ಕೋಟಿ ರೂಪಾಯಿಗಳನ್ನು ನನ್ನ ರಾಯಭಾಗ ತಾಲ್ಲೂಕಿನಿಂದ ವಾಪಸ್ ತೆಗೆದುಕೊಂಡಿದ್ದರಿಂದ ರಸ್ತೆಗಳ ಕೆಲಸ ಅರ್ಧಕ್ಕೆ ನಿಂತು ಹೋಯಿತು. ಈ ಸರ್ಕಾರಕ್ಕೆ ನಾನು ಮನವಿ ಮಾಡಿಕೊಂಡು ಬರಗಾಲ ಪೀಡಿತ ರಸ್ತೆಗಳನ್ನು ಸರಿಯಾಗಿ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಅವರು ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಈಗ ನನಗೆ ತಿಳಿದುಬಂದಿದೆ. ನಮ್ಮ ರಾಯಭಾಗ ತಾಲ್ಲೂಕಿನ 12 ಗ್ರಾಮಗಳು ಪ್ರವಾಹದ ನೀರಿನಿಂದ ಸಂಪೂರ್ಣವಾಗಿ ಮುಳುಗಡೆಯಾಗಿವೆ. ಇದರಲ್ಲಿ ಐದು ಗ್ರಾಮಗಳಾದ ಹಳೆಯ ದಿಗ್ಗೇವಾಡಿ, ಚಂಬಲಾಪುರ, ಸಿದ್ದಾಪುರ, ಗುಂಡವಾಡ, ಸಿರಿಗೂರು ಇವು ಐದು ಹಳ್ಳಿಗಳನ್ನು ಶಿಫ್ಟ್ ಮಾಡುವುದಕ್ಕೋಸ್ಕರ ಸರ್ಕಾರದವರು ಭರವಸೆ ಕೊಟ್ಟಿದ್ದರು, ಆದರೆ ಅದು ಆಗಲಿಲ್ಲ. ಈ ಸಾರಿ ಪ್ರವಾಹ ಬಂದು ಅದೇ ರೀತಿಯ ಪರಿಸ್ಥಿತಿ ಉಂಟಾಗಿದೆ. ಈ ಹಳ್ಳಿಗಳನ್ನು ಶಿಫ್ಟ್ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೂ ಸಹ ನಾನು ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಡೆ ಆಗಿರತಕ್ಕಂಥ ಈ ಐದು ಗ್ರಾಮಗಳನ್ನು ಬಿಜಾಪುರದ ಹಿಪ್ಪರಗಿ ಡ್ಯಾಂ ಪರಿಹಾರದ ಪ್ರಕಾರ ಅವರನ್ನು ಶಿಫ್ಟ್ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಮತ್ತೆ ಏಳು ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗಿರುವುದಿಲ್ಲ. ಆದರೆ ಅದಕ್ಕೂ ಸಹ ಪರಿಹಾರವನ್ನು ಕೊಡಬೇಕಾಗಿರುತ್ತದೆ. ಇಡೀ ಬೆಳಗಾಂ ಜಿಲ್ಲೆಗೆ 15 ಕೋಟಿ ರೂಪಾಯಿಗಳನ್ನು ಸರ್ಕಾರದವರು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಹಣವನ್ನು ಜಮೀನು

ಖರೀದಿ ಮಾಡುವುದಕ್ಕೆ ನೀಡುತ್ತಿದ್ದು ಈ 15 ಕೋಟಿ ರೂಪಾಯಿ ಈ ಒಂದು ಕಾರ್ಯಕ್ಕೆ ಸಾಕಾಗುವುದಿಲ್ಲ. ಈಗಾಗಲೇ ಮಾನ್ಯ ಭರಮಗೌಡ ಅಲಗೌಡ (ರಾಜು) ಕಾಗೆ ಮತ್ತು ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಅವರು ಹಾಗೂ ಲಕ್ಷ್ಮಣ ಸವದಿಯವರು ಮಾತನಾಡುತ್ತಾ, ಈ 15 ಕೋಟಿ ರೂಪಾಯಿಗಳು ಸಾಕಾಗುತ್ತಿಲ್ಲವೆಂದು ಹೇಳಿದರು. ಏಕೆಂದರೆ ಒಂದು ಜಮೀನಿನ ಕಿಮ್ಮತ್ತು, ಒಂದು ಎಕರೆ ಜಮೀನನ್ನು ಖರೀದಿ ಮಾಡಬೇಕಾದರೆ ಐದರಿಂದ ಆರು ಲಕ್ಷ ರೂಪಾಯಿಗಳಾಗುತ್ತದೆ. ಇವರು ಒಂದೊಂದು ಲಕ್ಷದ ರೀತಿಯಲ್ಲಿ ಕೊಟ್ಟರೆ ಸಾಕಾಗುವುದಿಲ್ಲ. ಆದ್ದರಿಂದ ಇದಕ್ಕಾಗಿ ಸರ್ಕಾರದವರು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನಮ್ಮ ರಾಯಭಾಗ ತಾಲ್ಲೂಕಿಗೆ sufficient ಆಗಿ ಹಣವನ್ನು ತಾವು ಕೊಡುತ್ತೀರೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಪ್ರವಾಸೋದ್ಯಮ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಚಿಂಚಲಿ ಗ್ರಾಮದ ಮಾಯಕಾದೇವಿ ಜಾತ್ರೆಯು ಅತಿ ವಿಜೃಂಭಣೆಯಿಂದ ನಡೆಯುತ್ತದೆ. ಇಲ್ಲಿ ನಡೆಯತಕ್ಕಂಥ ಎಂಟು ದಿವಸದ ಜಾತ್ರೆಗೆ ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಜನ ಬರುತ್ತಾರೆ. ಆದುದರಿಂದ ಪ್ರವಾಸೋದ್ಯಮ ಇಲಾಖೆಯಿಂದ ಇಲ್ಲಿಗೆ ಒಳ್ಳೆಯ ಸೌಕರ್ಯವನ್ನು ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಮಹಾರಾಷ್ಟ್ರದ ಗಡಿಭಾಗದಲ್ಲಿರತಕ್ಕಂಥ ಜನರು ಇಲ್ಲಿನ ಜಾತ್ರೆಗೆ ಬಂದಾಗ ಅವರಿಗೆ ಶೌಚಾಲಯವಾಗಲಿ ಮತ್ತು ಸ್ನಾನ ಮಾಡುವುದಕ್ಕೆ ಕೋಣೆಗಳಿಲ್ಲ. ಅವರು ಪಡತಕ್ಕಂಥ ಕಷ್ಟವನ್ನು ನೋಡಿದರೆ, ನಿಜವಾಗಿಯೂ ಅದೊಂದು ಕಷ್ಟಕರವಾಗಿರುತ್ತದೆ. ಆದ್ದರಿಂದ ಮಾನ್ಯ ಪ್ರವಾಸೋದ್ಯಮ ಸಚಿವರಾಗಲಿ, ಮಾನ್ಯ ಉಪ ಮುಖ್ಯಮಂತ್ರಿಯವರಾಗಲಿ, ಮಾನ್ಯ ಮುಖ್ಯಮಂತ್ರಿಯವರಾಗಲಿ ಇದಕ್ಕೊಂದು ಸಹಕಾರ ಮಾಡಿ ಮಾಯಕಾದೇವಿ ಜಾತ್ರೆಯ ಸಂದರ್ಭದಲ್ಲಿ ಈ ಎಲ್ಲಾ ಸೌಕರ್ಯವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಗಡಿ ಭಾಗದಲ್ಲಿರತಕ್ಕಂಥ ರೈತರ ಬೆಳೆದಂಥ ಕಬ್ಬು ಬೆಳೆ ಹಾಳಾಗಿರುವುದರಿಂದ, ನಮ್ಮ ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಏಕೆಂದರೆ, ಮಹಾರಾಷ್ಟ್ರದಲ್ಲಿ ಒಂದು ಟನ್‌ಗೆ 1700 ರೂಪಾಯಿ ಕೊಡುತ್ತಾರೆ. ಕಳೆದ ಸಲ ನಮ್ಮ ಸರ್ಕಾರದವರು ಕೇವಲ 1200 ರೂಪಾಯಿ ಮಾತ್ರ ಕೊಟ್ಟಿದ್ದರು. ಗಡಿ ಭಾಗದಲ್ಲಿ ರೈತರು ಬೆಳೆದಂಥ ಕಬ್ಬನ್ನು ಮಹಾರಾಷ್ಟ್ರಕ್ಕೆ ಕಳುಹಿಸಿ ಕೊಡುತ್ತಿದ್ದಾರೆ. ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರ ಕೂಡ ಒಂದು ಟನ್‌ಗೆ 1700 ರೂಪಾಯಿ ಕೊಟ್ಟರೆ ಒಳ್ಳೆಯದು. ಏಕೆಂದರೆ ಬೆಳಗಾಂ ಜಿಲ್ಲೆ ಸಕ್ಕರೆ ಕಾರ್ಖಾನೆಯ ಇರುವಂಥದರಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವನ್ನು ಸೃಷ್ಟಿ ಮಾಡಿದೆ.

ಆದ್ದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆಯತಕ್ಕಂಥ ಕಬ್ಬನ್ನು ಇಲ್ಲಿನ ಕಾರ್ಖಾನೆಗಳಿಗೆ ರೈತರು ಕೊಡಬೇಕಾದರೆ ಸರ್ಕಾರ ನಮ್ಮ ರೈತ ಬಾಂಧವರಿಗೆ 1700 ರೂಪಾಯಿಗಳನ್ನು ಒಂದು ಟನ್ ಕಬ್ಬಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನ ಹಳೆದವಾಡಿಯಲ್ಲಿ ಒಂದು ಹೊಸ ಸಕ್ಕರೆ ಕಾರ್ಖಾನೆಗೆ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆಂದು ನಾನು ನೆನ್ನೆ ದಿವಸ ಪತ್ರಿಕೆಯಲ್ಲಿ ಓದಿದ್ದೇನೆ. ಇದು ನನಗೆ ಮೊದಲು ಗೊತ್ತಿರಲಿಲ್ಲ. ನಮ್ಮ ರಾಯಭಾಗ್ ತಾಲ್ಲೂಕಿಗೆ ಇನ್ನೂ ನಾಲ್ಕು ಹೊಸ ಸಕ್ಕರೆ ಕಾರ್ಖಾನೆ ಕೊಟ್ಟರೂ ನಡೆಯುತ್ತದೆಂದು ಸರ್ಕಾರದ ಗಮನಗೆ ತರುವುದಕ್ಕೆ ಇಷ್ಟಪಡುತ್ತೇನೆ. ಐದಾರು ವರ್ಷದಿಂದ ಬಿದ್ದಿರುವ ನಮ್ಮ ರಾಯಭಾಗ್ ಸಕ್ಕರೆ ಕಾರ್ಖಾನೆಯನ್ನು ಯಾರಿಗಾದರೂ ಕೊಟ್ಟು ಅದನ್ನು ನಡೆಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ಕಳೆದ ನಾಲ್ಕು ತಿಂಗಳಿಂದ ಡಿ.ಸಿ. ಕಛೇರಿ ಹತ್ತಿರ ಕಾರ್ಮಿಕರು ಉಪವಾಸ ಸತ್ಯಾಗ್ರಹ ಮಾಡುತ್ತಾ ಸ್ಟ್ರೈಕ್ ಮಾಡುತ್ತಿದ್ದಾರೆ. ಅವರು ಹೆಂಡತಿ ಮಕ್ಕಳು ಊರಿನಲ್ಲಿ ಉಪವಾಸದಿಂದ ನರಳುತ್ತಿದ್ದಾರೆ. ಆದ್ದರಿಂದ ಮಾನ್ಯ ಸಕ್ಕರೆ ಸಚಿವರಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಉಪ ಮುಖ್ಯಮಂತ್ರಿಗಳಾಗಲಿ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವವರ ಪರಿಹಾರದ ಸಲುವಾಗಿ ಅವರಿಗೆ ಏನಾದರೊಂದು ಡಿಸಿಷನ್ ಕೊಡಬೇಕೆಂದು ನಾನು ತಮ್ಮಲ್ಲಿ ಮತ್ತು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಸಲ್ಲಿಸಿ ಮತ್ತು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ

ಅಧ್ಯಕ್ಷರು: ಮಾನ್ಯ ರಮೇಶ್ ಜಾರಕಿ ಹೋಳಿಯವರು ಈಗ ಮಾತನಾಡಲಿ. ಅವರು ಇಲ್ಲವೇ ಹಾಗಾದರೆ, ಮಾನ್ಯ ರಮೇಶ್ ಕುಡಚಿರವರು ಮಾತನಾಡಿ.

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ (ಬೆಳಗಾಂ): ಸನ್ಮಾನ್ಯ ಅಧ್ಯಕ್ಷರೆ, ನಾನು ಬೆಳಗಾವಿ ಕ್ಷೇತ್ರವನ್ನು ಪ್ರತಿನಿಧಿಸಿದ್ದೇನೆ. ಈ ವಿಧಾನ ಸಭೆಗೆ ಆರಿಸಿ ಬಂದಂಥ 224 ಶಾಸಕರಲ್ಲಿ 21 ಶಾಸಕರಿಗೆ ರಾಜ್ಯ ಸರ್ಕಾರದಿಂದ ಸಿಗಬೇಕಾಗಿರತಕ್ಕಂಥ ಅನೇಕ ಸೌಲಭ್ಯಗಳು ವಂಚಿತವಾಗಿವೆ. ನಗರ ಪ್ರದೇಶದಲ್ಲಿರತಕ್ಕಂಥ ಶಾಸಕರಿಗೆ ಈ ರೀತಿಯಾಗಿದೆ. ಮಹಾನಗರ ಪಾಲಿಕೆ ಎಲ್ಲೆಲ್ಲಿ ಅಸ್ಥಿತ್ವದಲ್ಲಿದೆ, ಈ ಭಾಗದ ನಗರ ಪ್ರದೇಶದ ಶಾಸಕರುಗಳಿಗೆ ರಾಜ್ಯ ಸರ್ಕಾರದಿಂದ ಬರಬೇಕಾಗಿರತಕ್ಕಂಥ ಮುಖ್ಯ ಮಂತ್ರಿಗಳ ಅಥವಾ ಪ್ರಧಾನ ಮಂತ್ರಿಗಳ ಸಡಕ್ ಯೋಜನೆಯಿಂದ ಅಥವಾ ಜಿಲ್ಲಾ ಪಂಚಾಯತ್‌ಗೆ ಸರ್ಕಾರ ಕೊಡುತ್ತಿರುವ ಅನುದಾನ ಬೆಳಗಾವಿ ಅಥವಾ ಯಾವುದೇ

ನಗರ ಪಾಲಿಕೆಗೆ ಬರುತ್ತಿಲ್ಲ. ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 16 ಜನ ಶಾಸಕರು ಬರುತ್ತಾರೆ. ಬೆಂಗಳೂರು ರಾಜಧಾನಿಯಾಗಿರುವುದರಿಂದ, ಅವರಿಗೆ ಸಿಗಬೇಕಾಗಿರತಕ್ಕಂಥ ಸೌಲಭ್ಯಗಳು ಸಿಗುತ್ತಿರಬಹುದು. ಆದರೆ 8 ಜನರಿಗೆ ಮಾತ್ರ ರಾಜ್ಯ ಸರ್ಕಾರದಿಂದ ಬರಬೇಕಾಗಿರತಕ್ಕಂಥ ಏನು ಯೋಜನೆಗಳಿವೆ, ಈ ಎಲ್ಲಾ ಯೋಜನೆಗಳಿಂದ ವಂಚಿತರಾಗಿರತಕ್ಕಂಥ ಶಾಸಕರ ಪೈಕಿಯಲ್ಲಿ ನಾನೂ ಕೂಡ ಒಬ್ಬ ಇದ್ದೇನೆ. ನಾನು ಈ ಸಂದಂರ್ಭದಲ್ಲಿ ಹೇಳುವುದೇನೆಂದರೆ, ಈ ಬೆಳಗಾವಿ ನಗರವನ್ನು ಪ್ರತಿನಿಧಿಸುತ್ತಿದ್ದು, ನನ್ನ ಕ್ಷೇತ್ರದ ವ್ಯಾಪ್ತಿ 95.05 sq. km. ಇದೆ. ಈ ಬೆಳಗಾವಿ ನಗರದಲ್ಲಿ 431 km. ರಸ್ತೆಗಳಿವೆ. ಮಹಾರಾಷ್ಟ್ರದಿಂದ ಬಂದಂಥ ಪ್ರವಾಹ ದಿಂದ ಅಥಣಿ, ರಾಯಭಾಗ್, ಚಿಕ್ಕೋಡಿ ತಾಲ್ಲೂಕಿನ ಪ್ರದೇಶಗಳು ನೀರಿನಿಂದ ಅವೃತವಾಗಿದ್ದವು. ಅತೀವೃಷ್ಟಿಯಾದಂಥ ಈ ಬೆಳಗಾವಿ ನಗರದಲ್ಲಿರುವ ಎಲ್ಲಾ ರಸ್ತೆಗಳು ಹಾಳಾಗಿರುವಂಥ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ಮತ್ತೆ ಬೆಳಗಾವಿ ಮಹಾನಗರ ಸಭೆಯ ಆರ್ಥಿಕ ಪರಿಸ್ಥಿತಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕು ಹಾಗೂ ಈ ಬೆಳಗಾವಿ ನಗರಕ್ಕೆ ಸಿಗಬೇಕಾಗಿರತಕ್ಕಂತ ಮೂಲಭೂತ ಸೌಲಭ್ಯಗಳನ್ನು ನಾವೇ ಮಾಡಬೇಕಾಗಿದೆ. ಏಕೆಂದರೆ ಈ ಎಲ್ಲಾ ಸೌಲಭ್ಯಗಳಿಂದ ಈ ನಗರ ವಂಚಿತವಾಗಿದೆ. ನಮ್ಮ ಬೆಳಗಾವಿ ನಗರಕ್ಕೆ ಸಿಗಬೇಕಾದ ಮೂಲಭೂತ ಸೌಲಭ್ಯಗಳಿಂದ ವಂಚಿತವಾದಂಥ ನಗರವಾಗಿದೆ. ಏಕೆಂದರೆ 1956 ರಿಂದ ಭಾಷಾವಾರು ಪ್ರಾಂತ್ಯಗಳು ರಚನೆಯಾದ ನಂತರ 1999 ರವರೆಗೆ ಯಾವ MES ದಿಂದ ಆರಿಸಿ ಬಂದಂಥ ಶಾಸಕರು ಈ ಬೆಳಗಾವಿ ನಗರಕ್ಕೆ ಯಾವುದೇ ತರಹದ ಯೋಜನೆಗಳನ್ನು ತಂದಿರಲಿಲ್ಲ. ಅದಕ್ಕೆ ಈ ಬೆಳಗಾವಿ ನಗರ ಹಿಂದೆ ಬಿದ್ದಿರುವುದರಿಂದ 1999 ರಿಂದ ಇಲ್ಲಿಯವರೆಗೆ ಹಿಂದಿನ ಮುಖ್ಯಮಂತ್ರಿಗಳಾದಂಥ ಮಾನ್ಯ ಎಸ್.ಎಂ.ಕೃಷ್ಣರವರು ಇರಬಹುದು. ನಮ್ಮ ಹಿಂದಿನ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರು ಕೊಟ್ಟಂಥ ಅವರ ಪ್ರಯತ್ನದಿಂದ ಅನೇಕ ಹಣಕಾಸಿನ ಸಹಾಯದಿಂದ ಇವತ್ತು ಈ ಬೆಳಗಾವಿ ನಗರದಲ್ಲಿ ಕೆಲವೊಂದು ರೋಡ್‌ಗಳನ್ನು ನಾವು ಕಂಡಿದ್ದೇವೆ. ಆ ದೃಷ್ಟಿಯಿಂದ ನಾನು ಇವತ್ತು ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ ಅತಿವೃಷ್ಟಿಯಾಗಿರುವ ಈ ಬೆಳಗಾವಿ ನಗರಕ್ಕೆ ಇವತ್ತು ಅನೇಕ ಯೋಜನೆಗಳು ಇರಬಹುದು. ಅವುಗಳನ್ನೆಲ್ಲಾ ಜಾರಿಗೆ ತರಬೇಕು. Slum Clearance Board ನಿಂದ ಈಗಾಗಲೇ ನಾವು 11 ಉಪನಗರಗಳಿಗೆ ಈ ಬೋರ್ಡಿನಿಂದ ಏನು ಹಣ ಕೊಡಬೇಕಾಗಿತ್ತು, ಏನು ಅದು ಟೆಂಡರ್ ಆಗಿದೆ, ಅದು ಇನ್ನೂ finalise ಮಾಡದೆ ಹಾಗೆ ಉಳಿದಿರುವುದರಿಂದ, ಅನೇಕ ಉಪ

ನಗರಗಳಿಗೆ ಇವತ್ತು ಆ ಮೂಲಭೂತ ಸೌಕರ್ಯಗಳನ್ನು ಕೊಡಿಸಿ ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಇದರ ಹಿನ್ನೆಲೆಯ ಜೊತೆಗೆ ನಾವು border area development grant ಎಂದು ಕೊಡುತ್ತೇವೆ. ಒಂದು ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳು ಬರುತ್ತದೆ. ಈಗಾಗಲೇ ಮಾನ್ಯ ಅಭಯ ಪಾಟೀಲ್‌ರವರು ಹೇಳಿದ ಹಾಗೆ ನಾನು ಅಭಯ ಪಾಟೀಲ್ ಹಾಗೂ ಮನೋಹರ್ ಕಿಣೇಕರ್ ಈ 5 ಲಕ್ಷ ರೂಪಾಯಿಗಳಲ್ಲಿ border area development grant ಎಂದು ಏನು ಕೊಡುತ್ತಿರಿ, 5 ಲಕ್ಷ ರೂಪಾಯಿಗಳಲ್ಲಿ ಮೂರು ಜನರು ಹಂಚಿಕೊಳ್ಳಬೇಕು. ಒಂದು ರೋಡ್ ಸಹ ಆಗುವುದಿಲ್ಲ. ಈ ಪರಿಸ್ಥಿತಿ ನನ್ನದೊಂದೇ ಅಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಗಡಿ ಭಾಗದಲ್ಲಿರುವಂಥ ಪ್ರದೇಶಗಳಿಗೆ ಏನು ಗ್ರಾಂಟ್ ಬರುತ್ತಿದೆ, ಒಂದೊಂದು ತಾಲ್ಲೂಕಿಗೆ ನೀವು 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಹೇಗೆ ಸಾಧ್ಯವಾಗುತ್ತದೆ? ಇವತ್ತು ನಾವು ಕೇಳುತ್ತೇವೆ. ಇವತ್ತು ಮುಖ್ಯ ಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಎಲ್ಲಿಗೆ ಹೋದರೂ ಸಹ 50,40,10 ಕೋಟಿ ರೂಪಾಯಿಗಳವರೆಗೆ ಕೊಡುವಾಗ, border area development grant ಗೆ ಕೊಡಬೇಕಾದಂಥದ್ದು ಒಂದು ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಹೇಗೇ? ಇವತ್ತು ನನ್ನದು ಅಷ್ಟೇ ಅಲ್ಲ. ಪ್ರತಿ ತಾಲ್ಲೂಕಿನಲ್ಲಿ ಇದೇ ಸಮಸ್ಯೆ ಇದೆ. ಈ ಸಮಸ್ಯೆಗೆ ಪರಿಹಾರವನ್ನು ಕೊಡಬೇಕಾದರೆ ಹೇಗೆ ನೀವು ಒಂದು ಕ್ಷೇತ್ರಕ್ಕೆ ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡುತ್ತಿದ್ದೀರಿ, ಅದೇ ರೀತಿಯಾಗಿ ನಮಗೂ ಕೊಡಬೇಕು. ಯಾವ ಗಡಿಭಾಗದಲ್ಲಿ ಈ ಅಧಿವೇಶನವಾಗುತ್ತಿದೆ ನಾನು ನಿಮಗೆ ಇಲ್ಲಿ ಕೇಳ ಬಯಸುತ್ತೇನೆ ಯಾವ ಗಡಿಭಾಗದ ಬಗ್ಗೆ ಇಡೀ ಕರ್ನಾಟಕದ ಜನರು ನೋಡುತ್ತಿರುವಾಗ, ಈ ಕರ್ನಾಟಕ ಸರ್ಕಾರ ನೋಡುತ್ತಿರುವಾಗ, ಈ ದಿಶೆಯಲ್ಲಿ ನೀವು ಕಾರ್ಯಪ್ರವೃತ್ತರಾಗಿರುವಾಗ, ನಾನು ತಮಗೆ ಇಷ್ಟೇ ಕೇಳುತ್ತೇನೆ. ಈ ಗಡಿಭಾಗದಲ್ಲಿ border area development grant ನಲ್ಲಿ ಏನು 5 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ, ಅದನ್ನು 5 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದರೆ ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬರಿಗೆ 50–50ಲಕ್ಷ ರೂಪಾಯಿಗಳು ಬಂದರೆ ಸಾಕಷ್ಟು ಸೌಲಭ್ಯಗಳನ್ನು ಕೊಡಿಸುವಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಆದರೆ ಕಳೆದ 4 ತಿಂಗಳುಗಳಿಂದ ಈ ADB ಯೋಜನೆಯಡಿಯಲ್ಲಿ 9 ಕೋಟಿ ರೂಪಾಯಿಗಳ ಹಣ ಬಿಡುಗಡೆಯಾಗಬೇಕಾಗಿದೆ, ಇನ್ನೂ ನೀವು finalise ಮಾಡದೇ ಇರುವುದರಿಂದ, ಇವತ್ತು ಆ ಹಣ ಅಲ್ಲಿಯೇ ಉಳಿದಿದೆ. ಬೆಳಗಾವಿ ನಗರಕ್ಕೆ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಧರ್ಮಸಿಂಗ್ ಹಾಗೂ ಮಾನ್ಯ

ಎಸ್.ಎಂ. ಕೃಷ್ಣರವರು 3ನೇ ಹಂತದ ನೀರಿನ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದಿಂದ ಬರಬೇಕಾಗಿರುವಂಥ 11.64 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ ನಂತರ ಇನ್ನೂ ಆ filter unit ಅಗದೇ ಇರುವುದರಿಂದ ಇವತ್ತು ಬೆಳಗಾವಿ ನಗರದ ಜನರಿಗೆ ನೀರು ಬಂದರೂ ಸಹ ಅವರಿಗೆ filter ಮಾಡುವ ವ್ಯವಸ್ಥೆ ಇಲ್ಲದಿರುವುದರಿಂದ ಆ ಹಣ ಬಿಡುಗಡೆಯಾಗಬೇಕಾಗಿದೆ. ಆದಷ್ಟು ಬೇಗನೆ ಈ ಹಣವನ್ನು ಬಿಡುಗಡೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಫೈಲ್ ನಗರಾಭಿವೃದ್ಧಿ ಇಲಾಖೆಯಲ್ಲಿ ಇದೆ. ಅದಕ್ಕೆ ಬೇಗನೆ approval ಕೊಟ್ಟರೆ, ಅದು ಆಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಆ ಪ್ರಕಾರವಾಗಿ ಇವತ್ತು IT park ನ ಸಲುವಾಗಿ ಇವತ್ತು ಈಗಾಗಲೇ ಕಂದಾಯ ಸಚಿವರಲ್ಲಿ file ಇದೆ. ಅದರ ಬಗ್ಗೆ ನಮ್ಮ ಜಿಲ್ಲಾ ಮಂತ್ರಿಗಳಾದ ಮಾನ್ಯ ಶಶಿಕಾಂತ ಅಕ್ಕಪ್ಪ ನಾಯ್ಕ ಮತ್ತು ಸಂಸದರಾದಂಥ ಮಾನ್ಯ ಸುರೇಶ ಅಂಗಡಿಯವರು ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಈ ಜಾಗವನ್ನು ಮಂಜೂರು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ನಿನ್ನೆಯ ದಿವಸ Railway over bridge ಆಗಲಿ road under bridge ಆಗಲಿ ಅಥವಾ ನೀರಿನ ವ್ಯವಸ್ಥೆಗಾಗಲಿ ಅಥವಾ IT park ಗೆ ಆಗಲಿ ಜಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ದಿಶೆಯಲ್ಲಿ ಅವರು ಕಾರ್ಯಪ್ರವೃತ್ತರಾಗಬೇಕು. ಜಿಲ್ಲಾ ಮಂತ್ರಿಗಳು ಅದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಿ ಈ ಬೆಳಗಾವಿ ನಗರದಲ್ಲಿ ಅಧಿವೇಶನವಾಗುವಾಗ ಬೆಳಗಾವಿ ನಗರದ ಒಂದು ಕನಸು ಇಲ್ಲಿಯ ಕನ್ನಡಿಗರ ಕನಸು ನನಸಾಗಬೇಕಾದರೆ ಈ ಎಲ್ಲಾ ರೀತಿಯಲ್ಲಿ ತಾವು ಈ ಸರ್ಕಾರದ ಮುಖ್ಯಮಂತ್ರಿಗಳಾಗಲಿ ಮತ್ತು ಉಪ ಮುಖ್ಯಮಂತ್ರಿಗಳಾಗಲಿ ಅಥವಾ ಕಂದಾಯ ಸಚಿವರಾಗಲಿ ಹೇಳಿದ ರೀತಿಯಲ್ಲಿ ಮಾಡಿಕೊಟ್ಟರೆ ಮಾತ್ರ ಇದು ಸಾಧ್ಯವಾಗುತ್ತದೆ. ಆ ದಿಶೆಯಲ್ಲಿ ನಾನು ತಮ್ಮಲ್ಲಿ ಅವರ ಪರವಾಗಿ ವಿನಂತಿ ಮಾಡಿಕೊಳ್ಳುತ್ತಾ ಕೇಳಿಕೊಳ್ಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ (ತೋಟಗಾರಿಕೆ ಸಚಿವರು): ಈಗಾಗಲೇ ಸ್ಥಳ ಪರಿಶೀಲನೆಯಾಗಿ ಅವರ ಅಧ್ಯಕ್ಷತೆಯಲ್ಲಿ ಇವತ್ತಿನ ದಿವಸ ಒಂದು ಕಾರ್ಯಕ್ರಮವಿದೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಬರ ಪರಿಹಾರದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಗಳು.

ದಯಮಾಡಿ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. Finance Minister ಇದ್ದರೆ ಅನುಕೂಲವಾಗುತ್ತಿತ್ತು. ದಯಮಾಡಿ ಅವರನ್ನು ಸಭೆಗೆ ಕರೆಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವರ್ಷ ಕರ್ನಾಟಕದಲ್ಲಿ ಅತ್ಯಂತ ಭೀಕರವಾದಂಥ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಬಹಳ ದುರಾದೃಷ್ಟಕರವಾದ ದಿನಗಳು. ಕಳೆದ ವರ್ಷ ಜನ ಏನು ಮಾತನಾಡುತ್ತಿದ್ದರೆಂದು ನಾನು ಹೇಳುತ್ತೇನೆ. 2004–05, 2005–06 ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ಧರ್ಮರಾಯರ ಕಾಲ ಇದ್ದ ಹಾಗೆ ಇದೆ ಮಳೆ ಬಹಳವಾಯಿತು. ಎಲ್ಲರೂ ಸುಖವಾಗಿ ಎರಡು ವರ್ಷ ಇದ್ದರು ಅಂತ. ಆದರೆ ಈಗ ಮಾನ್ಯ ಜಗದೀಶ್ ಶೆಟ್ಟರವರು ಮಾನ್ಯ ಯಡಿಯೂರಪ್ಪನವರು ಈ ಎಡಭಾಗದಿಂದ ಬಲಭಾಗಕ್ಕೆ ಹೋದ ತಕ್ಷಣ ಮಳೆ ಕಡಿಮೆಯಾಗಿದೆ. ಇದನ್ನು ನಾನು ಸಾಮಾನ್ಯವಾಗಿ ಜನ ಮಾತನಾಡುತ್ತಾರೆಂದು ಹೇಳುತ್ತೇನೆ. ಅದು ಇರಲಿ, ಏನು ನೂತನ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಬರ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅದಕ್ಕೆ ನಾನು ಅಂಕಿ ಸಂಖ್ಯೆಗಳನ್ನು ಕೊಡುತ್ತೇನೆ. ಅಷ್ಟೇ ಅಲ್ಲ; ಈವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು ತಮಗೆ ಗೊತ್ತಿದೆಯಾ? ಅದನ್ನು ನಾನು ಹೇಳುತ್ತೇನೆ. ಒಂದು ರೂಪಾಯಿ ಅನ್ನೂ ಕೂಡ ರಾಜ್ಯ ಸರ್ಕಾರ ಕೊಟ್ಟಿಲ್ಲ. ಇವತ್ತು ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಟ್ಟಿದೆ; ಇವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆನ್ನುವ ವಿವರವನ್ನು ನಾನು ಹೇಳುತ್ತೇನೆ. ಬಹಳ ಗಂಭೀರವಾದ ವಿಚಾರವನ್ನು ಈ ಸಭೆಯಲ್ಲಿ ನಾನು ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದೇನೂ ಬರ ಮೊದಲನೇ ಸಲ ಅಲ್ಲ. ಹಿಂದೆ 1972ರಲ್ಲಿ ತೀವ್ರವಾದಂಥ ಬರ ಬಂದಂಥ ಸಂದರ್ಭದಲ್ಲಿ ಅಂದಿನ ದೇವರಾಜ್ ಅರಸುರವರ ಸರ್ಕಾರ ಸಮರೋಪಾಯವಾಗಿ ಕೆಲಸವನ್ನು ತೆಗೆದುಕೊಂಡಿತು. ಅದೇ ತರಹ 1984–85ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಹಾಗೂ ಎಸ್.ಎಂ.ಕೃಷ್ಣರವರ ಸರ್ಕಾರ ಇದ್ದಂಥ ಕಾಲದಲ್ಲಿ ಭೀಕರವಾದ ಬರಗಾಲ ಬಂದಂಥ ಸಂದರ್ಭದಲ್ಲಿ ಯುದ್ಧೋಪಾದಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡರು. ಜನರಿಗೆ ಅನುಕೂಲತೆಯನ್ನು ಮಾಡಿಕೊಟ್ಟರು. ಆದರೆ ಈಗ ರಾಜ್ಯದಲ್ಲಿ ಬರ ಪರಿಹಾರವನ್ನು ತೆಗೆದುಕೊಳ್ಳುವುದರಲ್ಲಿ ಸಂಪೂರ್ಣವಾಗಿ ಏಕೆ ವಿಫಲವಾಗಿದೆನ್ನುವಂತಹ ಮಾತನ್ನು ಹೇಳುತ್ತೇನೆ. ಸುಮಾರು 119 ತಾಲ್ಲೂಕು ಮೊದಲು 102, ಈಗ 16 ಅಥವಾ 17 ಎಂದು ಕಾಣುತ್ತದೆ. ಸುಮಾರು 120 ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ ಸಂತೋಷ. ಆದರೆ ನನ್ನ ಪ್ರಕಾರ

ತೆಗೆದುಕೊಂಡರೆ ನನಗೆ ಬಂದಿರುವಂತಹ ಮಾಹಿತಿಯ ಪ್ರಕಾರ ಸುಮಾರು 150 ತಾಲ್ಲೂಕುಗಳು ತೀವ್ರವಾದಂತಹ ಬರಗಾಲವನ್ನು ಎದುರಿಸುತ್ತಿದೆ ರಾಜ್ಯ ಸರ್ಕಾರ ಕೂಲಿಕಾರರಿಗೆ ಉದ್ಯೋಗಗಳನ್ನು ಕಲ್ಪಿಸುವುದು, ಜಾನುವಾರುಗಳಿಗೆ ಗೋಶಾಲೆ ಮತ್ತು ಮೇವುಗಳ ಪೂರೈಕೆ, ಕೆಲವು ಕಡೆ ಕುಡಿಯುವ ನೀರಿನ ತೊಂದರೆ ಸಲುವಾಗಿ ಕುಡಿಯುವ ನೀರಿನ ಪೂರೈಕೆ ಮಾಡುವುದು, ರೈತರಿಗೆ ಮುಂದಿನ ವರ್ಷಕ್ಕಾಗಿ ಉಚಿತವಾಗಿ ಬೀಜ ಮತ್ತು ಗೊಬ್ಬರವನ್ನು ಕೊಡುವುದರ ಬಗ್ಗೆ ಮತ್ತು 60 ವಯಸ್ಸಿಗಿಂತ ಹೆಚ್ಚಾಗಿರುವಂಥವರಿಗೆ ಕೆಲವು ಕಡೆ ಗಂಜಿ ಕೇಂದ್ರಗಳನ್ನು ತೆಗೆಯುವುದಾಗಲಿ ಈ ಎಲ್ಲಾ ಬರ ಪರಿಹಾರ ಕಾಮಗಾರಿಗಳನ್ನು ಸರ್ಕಾರ ಪರಿಣಾಮಕಾರಿಯಾಗಿ ತೆಗೆದುಕೊಂಡಿಲ್ಲ. ನಾನು ಈಗಾಗಲೇ ಹೇಳಿದಂತೆ ರಾಜ್ಯದಲ್ಲಿ ಸುಮಾರು 151 ತಾಲ್ಲೂಕುಗಳಲ್ಲಿ ಏನು ಬರಗಾಲ ಇದೆ, ಅದರ ಪ್ರಕಾರ ನೋಡಿದರೆ ನಮ್ಮ ರಾಜ್ಯದಲ್ಲಿ 65 ಲಕ್ಷ ಕೂಲಿ ಕಾರ್ಮಿಕರು ಈ ತಾಲ್ಲೂಕಿನಲ್ಲಿ ಇದ್ದಾರೆ. ಅವರಿಗೆ ಪ್ರತಿ ದಿವಸ 69 ರೂಪಾಯಿಗಳನ್ನು ನಾವು ಕೂಲಿ ಕೊಡಬೇಕಾಗುತ್ತದೆ. ಕೊನೆಯ ಪಕ್ಷ 20 ದಿವಸಗಳ ಕಾಲ ಒಂದು ತಿಂಗಳಲ್ಲಿ ಕೂಲಿ ಕೊಡಬೇಕು. ಇದು ರಾಜ್ಯ ಸರ್ಕಾರದ ಆದ್ಯಕರ್ತವ್ಯ. It is the moral duty of the State Government. ಈ ಜನಗಳಿಗೆ ಕೂಲಿಯನ್ನು ಕೊಡಬೇಕಾಗಿದ್ದರೆ 65 ಲಕ್ಷ ಜನರಿಗೆ ಪ್ರತಿ ತಿಂಗಳಿಗೆ 900 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸುಮಾರು 1 ಕೋಟಿ 10 ಲಕ್ಷ ಜಾನುವಾರುಗಳು ಈ ಬರಪೀಡಿತ ಪ್ರದೇಶಗಳಲ್ಲಿ ಇವೆ. ಒಂದು ಜಾನುವಾರಿಗೆ ಪ್ರತಿದಿವಸ ಕನಿಷ್ಟ ಪಕ್ಷ 5 ಕೆ.ಜಿ. ಮೇವು ಬೇಕಾಗುತ್ತದೆ. ಆ ರೀತಿಯಾಗಿ 5 ಕೆ.ಜಿ. ಮೇವನ್ನು ನೀಡಿದರೆ ಸುಮಾರು ಒಂದು ದಿವಸಕ್ಕೆ 10 ಸಾವಿರ ಟನ್ ಮೇವು ಬೇಕಾಗುತ್ತದೆ. ಇದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಇವತ್ತು ರಾಜ್ಯ ಸರ್ಕಾರ ತಯಾರು ಮಾಡಿಲ್ಲ. ಎಲ್ಲಿದೆ ಮೇವು? ನೀವು ಮೇವನ್ನು ಎಲ್ಲಿಂದ ತರಿಸುತ್ತೀರಿ? ನಮ್ಮ ರಾಜ್ಯದಲ್ಲಿ ಮೇವು ಎಲ್ಲಿಯೂ ಇಲ್ಲ. ಅದಕ್ಕೆ ಈಗ ನೀವು ಪಂಜಾಬ್ ಮತ್ತು ಹರಿಯಾಣದಿಂದ ಮತ್ತು ಉತ್ತರ ಪ್ರದೇಶದ ಕೆಲವು ಭಾಗಗಳಿಂದ ನೀವು ಮೇವನ್ನು ತರಿಸಬೇಕಾಗುತ್ತದೆ. ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ, ಹಾಗೂ ದೇವರಾಜ್ ಅರಸ್‌ರವರ ಕಾಲದಲ್ಲಿ ತೀವ್ರವಾದಂತಹ ಬರಗಾಲ ಬಂದಾಗ ಹರಿಯಾಣ ಮತ್ತು ಪಂಜಾಬ್‌ನಿಂದ ಮೇವನ್ನು ತರಿಸಿದ್ದಾರೆ. ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ ರೈಲ್ವೆ ವ್ಯಾಗನ್‌ಗಳಲ್ಲಿ ಒಂದೊಂದು rake 53 ಬೋಗಿಗಳು ಇರುವಂತಹದ್ದಕ್ಕೆ ಒಂದು rake ಎಂದು ಹೇಳುತ್ತಾರೆ. ದೊಡ್ಡ ದೊಡ್ಡ ಸರಕುಗಳನ್ನು ಹೊತ್ತು ಗೋಶಾಲೆಯ ಮೇವನ್ನುತರಿಸಿದ್ದಾರೆ. ಆದರೆ

ಇವತ್ತಿನವರೆವಿಗೂ ರಾಜ್ಯ ಸರ್ಕಾರ ಜಾನುವಾರುಗಳ ಸಂರಕ್ಷಣೆಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಉದ್ಯೋಗ ಸೃಷ್ಟಿ ಆಗದೇ ಇರುವುದರಿಂದ ನಮ್ಮ ರಾಜ್ಯದಲ್ಲಿ ಸುಮಾರು 50 ಲಕ್ಷಕ್ಕಿಂತ ಹೆಚ್ಚು ಜನರು ಇವತ್ತು ಗುಳೆ ಹೋಗಿದ್ದಾರೆ. ಇದು ಬಹಳ ನಾಚಿಕೆಗೇಡಿನ ಸಂಗತಿ. ನಮ್ಮ ರಾಜ್ಯದಲ್ಲಿ ಇದು ಕೂಲಿಕಾರರ ಮತ್ತು ಜಾನುವಾರರ ಸಮಸ್ಯೆಯಾದರೆ ನಮ್ಮ ರಾಜ್ಯದಲ್ಲಿ ಕಳೆದ 10 ತಿಂಗಳಲ್ಲಿ ಸುಮಾರು 1160 ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇನ್ನು 700 ಕ್ಕಿಂತ ಹೆಚ್ಚಿನ ರೈತರಿಗೆ ಪರಿಹಾರವನ್ನು ಈ ರಾಜ್ಯ ಸರ್ಕಾರ ಕೊಟ್ಟಿಲ್ಲ. ಇವತ್ತಿನ ದಿವಸ ಈ ಪ್ರವಾಹ ಬಂದಿರುವಂಥ ಪ್ರದೇಶಗಳಾದ ಬೆಳಗಾಂ, ಗುಲ್ಬರ್ಗಾ ರಾಯಚೂರು ಇಲ್ಲಿ ಪ್ರವಾಹವಾಗಿರುವುದು ನಮ್ಮ ರಾಜ್ಯದಲ್ಲಿ ಆಗಿರುವ ಮಳೆಯಿಂದ ಅಲ್ಲ. ಅವೆಲ್ಲವೂ ಗೊತ್ತಿದೆ. ನಾನು ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಹಾರಾಷ್ಟ್ರ ಸರ್ಕಾರ ಹೆಚ್ಚು ನೀರನ್ನು ಕೃಷ್ಣಾ ನದಿಯಲ್ಲಿ ಹಾಗೂ ಭೀಮಾ ನದಿಯಲ್ಲಿ ಬಿಟ್ಟಿದ್ದರಿಂದ, ಪ್ರವಾಹ ಬಂದಿತು. ಆ ಪ್ರವಾಹ ಪೀಡಿತ ಜನರಿಗೆ ಇನ್ನೂ ಕೂಡ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ದಯಮಾಡಿ ಬೆಳಗಾಂ ಜಿಲ್ಲೆಯಲ್ಲಿರುವ ರಾಯಭಾಗ ತಾಲ್ಲೂಕು ಕಡೆ ಹೋಗಿ ಬನ್ನಿ. ಹಿಪ್ಪರಗಿ ಬ್ಯಾರೇಜಿನ ಹಿಂಭಾಗದ 29 ಹಳ್ಳಿಗಳ ದುಸ್ಥಿತಿಯನ್ನು ನೋಡಿ. ಅಥಣಿ ತಾಲ್ಲೂಕಿನಲ್ಲಿ ನೋಡಿ. ರಾಯಚೂರು ಜಿಲ್ಲೆಯಲ್ಲಿ ನೋಡಿ. ಇದರ ಬಗ್ಗೆ ತಮಗೆ ಗೊತ್ತಾಗುತ್ತದೆ. ಬಿಜಾಪುರದ ಕೆಲವು ಪ್ರದೇಶಗಳನ್ನು ನೋಡಿ; ತಮಗೆ ಗೊತ್ತಾಗುತ್ತದೆ. ಅದರ ಬಗ್ಗೆ ಇವರೆವಿಗೂ ಕೂಡ ಸರ್ಕಾರ ಗಮನವನ್ನು ಹರಿಸಿಲ್ಲ. ಇವತ್ತಿನ ದಿವಸ ಏನು ಬರ ಪರಿಹಾರವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾಗಿತ್ತು, ಒಂದು ರೂಪಾಯಿ ಹಣವನ್ನು ಇವತ್ತಿನವರೆವಿಗೂ ನಿಮ್ಮ ಬೊಕ್ಕಸದಿಂದ state exchequer ನಿಂದ ಬಿಡುಗಡೆ ಮಾಡಿಲ್ಲ. I will resign and get out, ಅವರು ತೋರಿಸಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆಂದು ನಾನು ಬೇಕಾದರೆ ತಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ. ಅವರು ತೋರಿಸಲಿ ನಾನು ರಾಜೀನಾಮೆ ಕೊಡುವುದಕ್ಕೂ ತಯಾರಿದ್ದೇನೆ. I stand by my word ನಾನೇನೂ ಮೊದಲನೆ ಸಾರಿ M.L.A. ಅಲ್ಲ, ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ.

ಅಧ್ಯಕ್ಷರು: ದಯಮಾಡಿ ಎಲ್ಲಾ ಶಾಸಕರು ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ: ಅದಕ್ಕಿಂತ ಇನ್ನೂ 100 ಕೋಟಿ ರೂಪಾಯಿಗಳು ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಕೇಂದ್ರ ಸರ್ಕಾರ ಇವರೆವಿಗೆ ರಾಜ್ಯಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ ನೋಡಿ. sofor

under C.R.F. under 12th finance commission recommendation ಪ್ರಕಾರ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಈ ವರ್ಷ ನಿಗದಿ ಪಡಿಸಿದ ಹಣ 90.28 ಕೋಟಿ ರೂಪಾಯಿಗಳು 75:25 ರೇಷಿಯೋ, ಪ್ರಕಾರ ಎಂಬುದು ಮಾನ್ಯ ಕಂದಾಯ ಮಂತ್ರಿಗಳಿಗೆ ಗೊತ್ತಿದೆ. ಅಂದರೆ ಈ ವರ್ಷ ರಾಜ್ಯ ಸರ್ಕಾರ 25% ಹಣವನ್ನು ನೀಡಿದರೆ ನಮ್ಮ ಕರ್ನಾಟಕಕ್ಕೆ C.R.F. ನಲ್ಲಿ ಒದಗಿಸಿರುವಂಥ ಹಣ 120 ಕೋಟಿ ರೂಪಾಯಿಗಳು ಅದರಲ್ಲಿ ಕೇಂದ್ರ ಸರ್ಕಾರ 90 ಕೋಟಿ ರೂಪಾಯಿಗಳನ್ನು ಕೊಡುತ್ತದೆ. 75% ಈಗಾಗಲೇ ಕೇಂದ್ರ ಸರ್ಕಾರ C.R.F. ನಲ್ಲಿ 90.28 ಕೋಟಿ ರೂಪಾಯಿಗಳು ಸಂಪೂರ್ಣ ರಿಲೀಸ್ ಮಾಡಿದೆ. ನೀವು ಉಳಿದ ಹಣವನ್ನು ರಿಲೀಸ್ ಮಾಡಬೇಕು. 25% ಸೇರಿದರೆ ಅದನ್ನು ಮಾಡಬೇಕಾಗುತ್ತದೆ. 90 ಕೋಟಿ ರೂಪಾಯಿಗಳು ಅಲ್ಲಿ ಆಯಿತು. ಇನ್ನು ಆಹಾರ ಧಾನ್ಯದ ಬಗ್ಗೆ ಹೇಳುವುದಾದರೆ ಆಹಾರಧಾನ್ಯ 1,80.000 ಟನ್ ಕೇಂದ್ರ ಸರ್ಕಾರ ಮೇ ತಿಂಗಳಲ್ಲಿ ಬಿಡುಗಡೆ ಮಾಡಿದೆ. ಅದನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರದ ಆದೇಶವನ್ನು ನಾನು ಇಲ್ಲಿ ತೋರಿಸುತ್ತಿದ್ದೇನೆ. It is worth Rs. 112 crores. It is a free food grain given by the Government of India, to be distributed at Rs. 6.25 per kg. ಒಟ್ಟು 112 ಕೋಟಿ ರೂಪಾಯಿಗಳು 1,80,000 ಟನ್‌ಗೆ ಬಿಡುಗಡೆಯನ್ನು ವಿವಿಧ ಜಿಲ್ಲೆಗಳಿಗೆ ಇವರೂ ಕೂಡ ಮಾಡಿದ್ದಾರೆ. ಅದರ ಜೊತೆಗೆ ಮೊನ್ನೆ C.R.F. ನಲ್ಲಿ ಬಿಡುಗಡೆಯಾದರೆ ಈ ಬರಗಾಲ ಬಂದ ಮೇಲೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕಂದಾಯ ಸಚಿವರು ಮತ್ತು ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮೇಲ್ಮನೆಯ ನಾಯಕರು ಮಾನ್ಯ ಖರ್ಗೆಯವರನ್ನು ಕರೆದುಕೊಂಡು ಏನು ಕೇಂದ್ರ ಸರ್ಕಾರಕ್ಕೆ ತಾವು ಮೊನ್ನೆ ಮನವಿಯನ್ನು ಸಲ್ಲಿಸಿದ್ದೀರಿ ಅದರನ್ವಯ ಕೇಂದ್ರ ಸರ್ಕಾರ ನಮ್ಮ ಗೃಹ ಮಂತ್ರಿಗಳಾದ ಮಾನ್ಯ ಶಿವರಾಜ್ ಪಾಟೀಲ್‌ರವರು ಕರ್ನಾಟಕ ರಾಜ್ಯಕ್ಕೆ ಬಂದು NCCF ನಲ್ಲಿ ನಮ್ಮ ರಾಜ್ಯಕ್ಕೆ 226.30 ಕೋಟಿ ರೂಪಾಯಿಗಳನ್ನು ಈಗಾಗಲೇ ರಿಲೀಸ್ ಮಾಡಿದ್ದಾರೆ. ರಿಲೀಸ್ ಆಗಿ ತ್ವರಿತವಾಗಿ ನಮ್ಮ ರಾಜ್ಯಕ್ಕೆ ಕ್ರೆಡಿಟ್ ಆಗಿದೆ. ಅಷ್ಟೆ ಅಲ್ಲ, 234 ಕೋಟಿ ರೂಪಾಯಿಗಳ ಅಲ್ಲದೆ ಕೇಂದ್ರ ಸರ್ಕಾರದ CRF ನಲ್ಲಿ ಮತ್ತೆ ಮುಂದಿನ ವರ್ಷದ ಅಂದರೆ 2007–08ನೇ ಸಾಲಿನ ಹಣದಲ್ಲಿ ಈಗಲೇ ಅಡ್ವಾನ್ಸ್ ಆಗಿ 23.70 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಇದೂ ಕೂಡ ಜಮಾ ಆಗಿ ಬಿಟ್ಟಿದೆ. ಅಂದರೆ ಈಗ ಭಾರತ ಸರ್ಕಾರ ಇವತ್ತಿನವರೆಗೆ ಈ

ಮೂರು ತಿಂಗಳಲ್ಲಿ ಒಟ್ಟು 452.28 ಕೋಟಿ ರೂಪಾಯಿಗಳು, ಅದರಲ್ಲಿ 112 ಕೋಟಿ ರೂಪಾಯಿ ಆಹಾರಧಾನ್ಯವನ್ನು ಸೇರಿಸಿ ನಾನು ಹೇಳುತ್ತಿರುವುದು.

ಶ್ರೀ ಹೆಚ್.ಆಂಜನೇಯ: ಸಾಕು ಬಿಡಿ.

4.30 ಪಿಎಂ

ಶ್ರೀ ಬಸವರಾಜ ರಾಯರೆಡ್ಡಿ: ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದು ಎಷ್ಟು? CRF ನಲ್ಲಿ 100.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಅಂದರೆ, NCCF ಬರುವುದಕ್ಕಿಂತ ಮುಂಚೆ ಬಿಡುಗಡೆ ಮಾಡಿದಿರಿ. ಅದರ G.O. ಕಾಪಿ ಇಲ್ಲಿದೆ. ಕೊಡುತ್ತೇನೆ. ಅದು ಆದ ಮೇಲೆ ಶ್ರೀ ಶಿವರಾಜ ಪಾಟೀಲ್ ಮಾನ್ಯ ಕೇಂದ್ರ ಗೃಹ ಮಂತ್ರಿಗಳು ರಾಜ್ಯಕ್ಕೆ ಬಂದ ಮೇಲೆ ಇವತ್ತು 3 ದಿವಸಗಳ ಹಿಂದೆ 131 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ನೀವು ಏನು ಬಿಡುಗಡೆ ಮಾಡಿದ್ದೀರಿ, ಇನ್ನೂ ರಾಜ್ಯ ಖಜಾನೆಯಿಂದ ಜಿಲ್ಲಾ ಖಜಾನೆಗೆ ಒಂದು ವಾರವಾದರೂ ಕೂಡ ಅದು ತಲುಪಿಲ್ಲ. 112 ಕೋಟಿ ರೂಪಾಯಿಗಳು food grains ಅಂದರೆ, Total released 343.50 ಕೋಟಿ ರೂಪಾಯಿಗಳು, as on today. Government of India sofar ರಿಲೀಸ್ಡ್ 452.28 ಲಕ್ಷ ರೂಪಾಯಿಗಳು. ಇನ್ನೊಂದು ನನಗೆ ಗೊತ್ತಿದೆ. ನಿನ್ನೆ ಪೂರಕ ಅಂದಾಜಿನಲ್ಲಿ ಅರ್ಥಮಂತ್ರಿಗಳು 60.00 ಕೋಟಿ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಸಿಷನ್‌ಗಾಗಿ ಒಪ್ಪಿಗೆ ತೆಗೆದುಕೊಂಡಿದ್ದಾರೆ. ಆದರೆ ಅದು ಬಿಡುಗಡೆ ಆಗಬೇಕು. ಆ 60.00 ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿದರೂ ಕೂಡ, ಇನ್ನೂ ನಿಮಗೆ 45.00 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ ಹಣ ತಮ್ಮ ಹತ್ತಿರ ಇದೆ, ಆ 60.00 ಕೋಟಿ ರೂಪಾಯಿಗಳನ್ನು ಹಿಡಿದರೂ ಕೂಡ ಈವರೆಗೆ ರಾಜ್ಯದ ಬೊಕ್ಕಸದಿಂದ ಒಂದು ರೂಪಾಯಿಗಳನ್ನೂ ಕೊಟ್ಟಿಲ್ಲ. ಇದು ನನ್ನ ಆಪಾದನೆ, ಕೇಂದ್ರ ಸರ್ಕಾರದ ಹಣದಲ್ಲಿ ನೀವು ನಾವು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಅದು ಸರ್ವಥಾ ಸರಿಯಲ್ಲ. ಈ ಸರ್ಕಾರಕ್ಕೆ ಬರಗಾಲದ ಜನರ ಶಾಪ ತಟ್ಟುತ್ತದೆ. ದಯಮಾಡಿ ಕಂದಾಯ ಮಂತ್ರಿಗಳೇ, ಸುಮಾರು 2 ಸಾವಿರ ಕೋಟಿ ರೂಪಾಯಿಗಳನ್ನು ಮುಂದಿನ 4–5 ತಿಂಗಳ ಬರವನ್ನು ಪರಿಹಾರಕ್ಕಾಗಿ ತಾವು ಕಾಯ್ದಿರಿಸಿರುತ್ತೀರಿ. ಪೂರಕ ಅಂದಾಜಿನಲ್ಲಿ ಒಂದು ರೂಪಾಯಿಯನ್ನೂ ಬರ ಪರಿಹಾರಕ್ಕೆ ಕಾಯ್ದಿರಿಸಿಲ್ಲ. ಅದಕ್ಕಾಗಿ ನಾನು ಚಾಲೆಂಜ್ ಮಾಡಿದ್ದು. 452.28 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟರೂ ಕೂಡ 343.50 ಲಕ್ಷ ರೂಪಾಯಿಗಳು, ಕೊಟ್ಟಿದ್ದೀರಿ. 60.00 ಕೋಟಿ ರೂಪಾಯಿಗಳನ್ನು ಹಿಡಿದರೆ ಇನ್ನೂ

40.00 ಕೋಟಿ ರೂಪಾಯಿ ಹಣ ನಿಮ್ಮ ಜೇಬಿನಲ್ಲಿ ಇದೆ. ನಿಮ್ಮ ಬೊಕ್ಕಸದಲ್ಲಿ ಇದೆ, ನಾನು ಹೇಳಿದ್ದರಲ್ಲಿ ತಪ್ಪಿದ್ದರೆ ಹೇಳಿ, ಅದಕ್ಕೆ ಸರ್ಕಾರದ ನೈತಿಕವಾಗಿ ಆಡಳಿತ ಮಾಡುವಂತಹ ಹಕ್ಕಿಲ್ಲ. ತತಕ್ಷಣವೇ ಈ ಸರ್ಕಾರ ರಾಜೀನಾಮೆ ಕೊಡಬೇಕಾಗುತ್ತದೆ. I demand ಈ ಸರ್ಕಾರ ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಅಷ್ಟೇ ಅಲ್ಲ ಇವರು ಕೆಲಸವನ್ನು ಮಾಡುವುದಿಲ್ಲ. ಅದಕ್ಕಾಗಿ ನಾನು ಸ್ಪಷ್ಟಪಡಿಸುತ್ತೇನೆ. ರಾಷ್ಟ್ರಪತಿಯವರ ಆಡಳಿತವನ್ನು ಜಾರಿ ಮಾಡಿ ವಿಧಾನಸಭೆಯನ್ನು ವಿಸರ್ಜಿಸಬೇಕು. ಇಲ್ಲದಿದ್ದರೆ ಈ ಕೆಲಸಗಳಾಗುವುದಿಲ್ಲ. ಇದಕ್ಕಾಗಿ ತ್ವರಿತವಾಗಿ ವಿಧಾನಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತದಲ್ಲಿ ಕೆಲಸ ಆಗಬೇಕಾಗಿದೆ. ಅದಕ್ಕಾಗಿ ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆ ಕೊಡಿ. 2 ಸಾವಿರ ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಏನು ಮಾಡಿದ್ದೀರಿ, ಅದರಲ್ಲಿ ಕೆಲವು ಕೆಲಸಗಳನ್ನು ನಿಲ್ಲಿಸಿ ಕೆಲವು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ರಾಜೀನಾಮೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಎಂ.ಎಸ್. ಯಾದವಾಡರವರು ಮಾತನಾಡಿ.

ಶ್ರೀ ಎಂ.ಎಸ್. ಯಾದವಾಡ(ರಾಮದುರ್ಗ): ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಬೆಳಗಾವಿ ಐತಿಹಾಸಿಕ ಅಧಿವೇಶನಕ್ಕೆ ಸ್ವಾಗತ ಮಾಡುತ್ತೇನೆ. ಈ ಒಂದು ಬೆಳಗಾವಿ ಜಿಲ್ಲೆಯ ನನ್ನ ರಾಮದುರ್ಗ ತಾಲ್ಲೂಕಿನ ನನ್ನ ಮತಕ್ಷೇತ್ರದ ಹಿಂದುಳಿದ ಪ್ರದೇಶವಾಗಿದ್ದ ಬರಗಾಲಕ್ಕೆ ಮೇಲಿಂದ ಮೇಲೆ ತುತ್ತಾಗಿರುವ 20–25 ಗ್ರಾಮಗಳಿಗೆ ಕುಡಿಯುವ ನೀರು ಸಮಸ್ಯೆ ಇರುತ್ತದೆ. 15 ಗ್ರಾಮಗಳಲ್ಲಿ ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ಹಲವಾರು ಗ್ರಾಮಗಳಿಗೆ ಸುಮಾರು 600–700 ಕೊಳವೆ ಬಾವಿಗಳು ಕೊರೆದರೂ ನೀರು ಲಭ್ಯವಾಗುತ್ತಿಲ್ಲ. ಕೆಲವು ಗ್ರಾಮಗಳಲ್ಲಿ ಕಪ್ಪುಮಿಶ್ರಿತ ಮಣ್ಣಿನ ಪ್ರದೇಶವಿರುವುದರಿಂದ, ಕೊಳವೆ ಬಾವಿಗಳಲ್ಲಿ ರಾಸಾಯನಿಕ ನೀರಿನಲ್ಲಿ ಕಲೆತು ಬರುತ್ತಿರುವುದರಿಂದ ಕುಡಿಯುವ ನೀರು ಯೋಗ್ಯವಿರುವುದಿಲ್ಲ. ಈ ಗ್ರಾಮಗಳಿಗೆ ಮಲಪ್ರಭಾ ಅಥವಾ ಘಟಪ್ರಭಾ ನದಿಯಿಂದ ನೀರು ಪೈಪ್‌ಗಳ ಮೂಲಕ ಸರಬರಾಜು ಮಾಡುವ ಯೋಜನೆ ರೂಪಿಸಲು ಬಹುಗ್ರಾಮ ನೀರು ಸರಬರಾಜು ಯೋಜನೆಯಡಿಯಲ್ಲಿ ಪ್ರಸ್ತಾಪ ಸಲ್ಲಿಸಲಾಗಿದೆ. ಅದರಂತೆ ತಾಲ್ಲೂಕಿನ ಮಳೆಪೀಡಿತ ಪ್ರದೇಶಗಳಿಗೆ ಮಲಪ್ರಭಾ ನದಿಗೆ ಅಡ್ಡಲಾಗಿ ಕಟ್ಟಿದ ನವಿಲುತೀರ್ಥ ಗ್ರಾಮದ ಹೆಚ್ಚಿನ ಪ್ರಮಾಣ ನದಿಗೆ ನೀರನ್ನು ಹರಿಸುವುದರಿಂದ, ತಾಲ್ಲೂಕಿಗೆ ನೆರೆ ಹಾವಳಿ ಉಂಟಾಗಿರುತ್ತದೆ. ನದಿಯ ದಂಡೆಯ ಮೇಲೆ ನನ್ನ ಮತ ಕ್ಷೇತ್ರದ 32 ಹಳ್ಳಿಗಳಲ್ಲಿ ಬರುತ್ತಿರುವ ರಾಮದುರ್ಗ ಪಟ್ಟಣ ಸೇರಿ ಪ್ರತಿಸಾರಿ ನದಿಯ ದಂಡೆಯ 11 ಗ್ರಾಮಗಳಿಗೆ ನುಗ್ಗಿ ಸಾಕಷ್ಟು ಹಾನಿ ಉಂಟಾಗಿದೆ. ಗ್ರಾಮಗಳಲ್ಲಿ ಸ್ಥಳಾಂತರಿಸ

ಬೇಕಾದ ಗ್ರಾಮಗಳ ಸಂಪರ್ಕ ರಸ್ತೆಯ ಸೇತುವೆ ಮತ್ತು ಕಟ್ಟಡಗಳು ಹಾಳಾಗಿದ್ದು ಪರಿಹಾರ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ಈ ಒಂದು ನನ್ನ ತಾಲ್ಲೂಕು ಸತತ ಬರಗಾಲ ಪ್ರದೇಶವಾಗಿದೆ, ಈಗಾಗಲೇ ಕುಡಿಯುವ ನೀರಿಗೆ ಸಾಕಷ್ಟು ತೊಂದರೆ ಆಗಿದೆ. ಹಾಗಾಗಿ ಸೇತುವೆಗಳಿಗೆ ಪರಿಹಾರ ನಿಧಿಯನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಸಾಕಷ್ಟು ಮಹಾರಾಷ್ಟ್ರದಲ್ಲಿ ಮಳೆಯಾಗಿದೆ, ಕರ್ನಾಟಕದಿಂದ ಹರಿದು ಹೋಗುತ್ತಿದೆ, ಆಂಧ್ರಪ್ರದೇಶದವರು ಪರಿಹಾರ ಕೊಟ್ಟಿದ್ದಾರೆ. ಮಹಾರಾಷ್ಟ್ರದವರು ಪರಿಹಾರ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಪರಿಹಾರ ಕೊಟ್ಟಿಲ್ಲ. ಕರ್ನಾಟಕದಿಂದ ಬಿಡುಗಡೆ ಮಾಡಿ ಎಂದು ಪ್ರಕಾಶ್ ಹುಕ್ಕೇರಿ ಅವರು ಹೇಳಿದ್ದಾರೆ, ಕೇಂದ್ರ ಸರ್ಕಾರ ಇನ್ನೂ ಹೆಚ್ಚಿನ ಪರಿಹಾರ ಕೊಡಬೇಕೆಂದು ಕೇಳಿಕೊಂಡು ನನ್ನ ಬರಗಾಲ ಪೀಡಿತ ಪ್ರದೇಶವಾದ ರಾಮದುರ್ಗ ತಾಲ್ಲೂಕಿಗೆ ಪರಿಹಾರ ನಿಧಿಯನ್ನು ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರು ಮಾತನಾಡಿ.

ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೆ, 15 ನಿಮಿಷಗಳ ಕಾಲ ಮಾತನಾಡುತ್ತೇನೆ.

ಅಧ್ಯಕ್ಷರು: 10 ನಿಮಿಷ ಮಾತನಾಡಿ. ಈಗ ಅರ್ಧ ಮಾಡಿಕೊಳ್ಳಿ.

ಶ್ರೀ ಕೆ.ಶ್ರೀನಿವಾಸಗೌಡ(ಕೋಲಾರ): ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಇವತ್ತು ಬರ ನೆರೆ, ಪ್ರಾದೇಶಿಕ ಅಸಮಾನತೆ, ಬೆಳಗಾವಿಯಲ್ಲಿ ವಿಧಾನ ಸಭೆಯನ್ನು ಕರೆದಿರುವುದರಿಂದ ಮೊದಲಿಗೆ ನೆರೆ ಹಾವಳಿ ಮತ್ತು ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತನಾಡಿ, ಆಮೇಲೆ ಬರದ ಬಗ್ಗೆ ಮಾತನಾಡುತ್ತೇನೆ, ಅದಕ್ಕೆ 15 ನಿಮಿಷ ಮಾತನಾಡುತ್ತೇನೆ. ಹಾಗಾಗಿ ನನಗೆ 15 ನಿಮಿಷ ಕೊಡಿ ಎಂದು ಮೊದಲನೆಯದಾಗಿ ಪ್ರಾರ್ಥನೆ ಮಾಡುತ್ತೇನೆ. ಹೆಚ್ಚು ಜನ ನೆರೆ ಹಾವಳಿ ವಿಷಯದ ಬಗ್ಗೆ ಮಾತನಾಡಿದ್ದಾರೆ. ಇದಕ್ಕೆ ಶಾಶ್ವತವಾದ ಒಂದು ಪರಿಹಾರವನ್ನು ನಾವು ಕಂಡು ಹಿಡಿಯಬೇಕು. ಯಾವಾಗಲೂ ಕೂಡ ಬಾಂಬೆಯಲ್ಲಿ ಮಳೆ ಜಾಸ್ತಿಯಾದರೆ ಕೃಷ್ಣ, ಭೀಮ ನದಿಗಳು ಮಹಾರಾಷ್ಟ್ರದಲ್ಲಿ ಉಕ್ಕಿ ಹರಿಯುತ್ತದೆ. ಹಾಗಾಗಿ ಪ್ರತಿಸಾರಿ ನಮ್ಮ ಭಾಗದ ನಾಲ್ಕೈದು ಜಿಲ್ಲೆಗಳು ಬೆಳಗಾವಿ ಜಿಲ್ಲೆಯಿರಬಹುದು, ಬಿಜಾಪುರ, ರಾಯಚೂರು ಜಿಲ್ಲೆಯಿರಬಹುದು, ಇವು ಈ ನೆರೆ ಹಾವಳಿಗೆ ತುತ್ತಾಗುತ್ತಿವೆ. ಇದಕ್ಕೆ ಮೂಲಭೂತವಾಗಿ ನಾನು ಹೋದವರ್ಷ ಇದೇ ತರಹ ನೆರೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಕಳುಹಿಸಿದ್ದರು, ಈ ನೆರೆ ಹಾವಳಿ ಯಾವ ಕಾರಣದಿಂದ ಹೀಗಾಗುತ್ತಿದೆ. ಏನೇನು ಮಾಡಲಿಕ್ಕೆ ಅವಕಾಶವಿದೆ. ಇದರ ಬಗ್ಗೆ ಸ್ಟಡಿ ಮಾಡಿ

ಹೇಳಲಿಕ್ಕೆ ಹೇಳಿದ್ದರು, ನಾನು ಬಂದು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೆ. ಬಹಳ ಮುಖ್ಯವಾಗಿ ಈ ನೆರೆ ಹಾವಳಿಗೆ ಏನು ಕಾಲುವೆಗಳು ಇವೆ, ಇವೆಲ್ಲಾ ಒತ್ತುವರಿಯಾಗಿವೆ. ಆಗ ಪ್ರಕಾಶ್ ಹುಕ್ಕೇರಿಯವರು ನನ್ನ ಜೊತೆಯಲ್ಲಿದ್ದರು. ಕ್ಷಮಿಸಬೇಕು, ನೆರೆ ಹಾವಳಿಯಲ್ಲಿ ಕಾಲುವೆಗಳು ಸರಾಗವಾಗಿ ದೊಡ್ಡದೊಡ್ಡ ಅಗಲವಾಗಿದ್ದ ಆ ದಿನಗಳನ್ನು ಎಲ್ಲಾ ರೈತರುಗಳೂ ಕೂಡ ಬಹಳ ಒತ್ತುವರಿ ಮಾಡಿಕೊಂಡು ಬಹಳ ಸಣ್ಣದಾಗಿ ಮಾಡಿದ್ದಾರೆ. ನದಿ ನೀರು ಹರಿಯುವ ಜಾಗದಲ್ಲಿ ಒತ್ತುವರಿ ಮಾಡಿರುವುದು ಮೊದಲನೇ ದೊಡ್ಡ ತಪ್ಪು ಆಗಿದೆ. ಇದನ್ನು ಸರ್ವೆ ಮಾಡಿಸಬೇಕು. ಎಲ್ಲಿಂದ ಶುರುವಾಗುತ್ತದೋ, ಅಲ್ಲಿಂದ ಸರ್ವೆ ಮಾಡಿ ರೈತರಿಗೆ ಒಪ್ಪಿಸಿ ಮುಲಾಜಿಲ್ಲದೆ ಕಟ್ಟೆಗೆಗಳನ್ನು ಎರಡೂ ಬದಿಗಳಿಗೆ ಹಾಕಿದರೆ, ಈ ನೆರೆ ಹಾವಳಿಯನ್ನು ತಪ್ಪಿಸಬಹುದು. ಎರಡನೆಯದಾಗಿ ಯಾವ್ಯಾವ ಹಳ್ಳಿಗಳಲ್ಲಿ ಈ ನೆರೆ ಹಾವಳಿ ಹೋಗುತ್ತದೆ, ಈ ನೆರೆ ಹಾವಳಿಯಿಂದ ನಷ್ಟಕ್ಕೆ ಈಡಾಗುತ್ತಿದೆ, ಈ ಊರುಗಳನ್ನು ಶಾಶ್ವತವಾಗಿ ದಿಣ್ಣೆಗಳಿರುವ ಪ್ರದೇಶಗಳಿಗೆ ಬದಲಾಯಿಸಬೇಕು. ಇವು ಬಹಳ ಮುಖ್ಯವಾದಂಥ ವಿಷಯ. ಈಗಾಗಲೇ ಮಾನ್ಯ ರಾಜುಕಾಗೆಯವರು ಮಾತನಾಡುವಾಗ ಕೇಳುತ್ತಿದ್ದೆ. ಈ ಜಮೀನುಗಳನ್ನು ಈ ಮನೆಗಳನ್ನು ಕಟ್ಟಲಿಕ್ಕೆ ಅಕ್ವಿಸಿಷನ್ ಮಾಡಿಕೊಂಡು ಬಹಳ ಕಡಿಮೆ ಹಣವನ್ನು ಕೊಡುತ್ತಿದ್ದಾರೆ, ಆದ್ದರಿಂದ ರೈತರು ಮುಂದಕ್ಕೆ ಬರುತ್ತಿಲ್ಲ. ಹೋದಸಾರಿ ನಾನು ಬಂದಾಗ ನಮ್ಮ ರಾಜ್ಯದ ಒಬ್ಬ ಅಧಿಕಾರಿಯ ಪ್ರತಿಕೃತಿಯನ್ನು ಇಟ್ಟುಕೊಂಡು ಸುಡುತ್ತಿದ್ದರು. ಅವರು ಒಳ್ಳೆಯ ಅಧಿಕಾರಿ, ಬೆಂಗಳೂರಿನಲ್ಲಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾರೆ. ಯಾವ ಊರಿಗೆ ಹೋದರೂ ಕೂಡ, ಅವರ ಪ್ರತಿಕೃತಿಯಲ್ಲಿ ಸುಡುತ್ತಿದ್ದರು. ಏನು ಕಾರಣವೆಂದರೆ ಅವರು ರಿಪೋರ್ಟ್ ಕೊಟ್ಟು ನಮ್ಮನ್ನು ಈ ರೀತಿ ಮಾಡಿದರು, ಇವರು ನಮ್ಮನ್ನು ಹಾಳು ಮಾಡಿದರು ಅಂತ. ಅವರೂ ಈ ಭಾಗದ ಉತ್ತರ ಕರ್ನಾಟಕದ ಒಬ್ಬ ದೊಡ್ಡ ಅಧಿಕಾರಿ. ನನಗೆ ಆಗ ಅನ್ನಿಸಲಿಲ್ಲ. ಏಕೆ ಇವರು ಬಹಳ ತಪ್ಪು ಮಾಡುವವರು ಅಲ್ಲವೇ ಅಂತ. ಆದರೆ ನನ್ನ ಕ್ಷೇತ್ರದಲ್ಲಿ ತೊಂದರೆಯಾದಾಗ ನನಗೆ ಗೊತ್ತಾಯಿತು. ಏಕೆ ಎಂದರೆ, ಅವರಿಗೆ ರೈತರು ಎನ್ನುವಂತಹ ಭಾವನೆ ಇಲ್ಲ, ಒಳ್ಳೆಯತನವಿಲ್ಲ. ರೈತರಿಗೆ ಏಕೆ ಕೊಡಬೇಕೆಂಬ ಒಂದು ತರಹ ಸ್ಯಾಡಿಸ್ಟ್ ಮನೋಭಾವ ಇದೆ. ಈ ತರಹದ ಭಾವನೆ ಇರುವಂತಹ ಅಧಿಕಾರಿ ಬಗ್ಗೆ ಅದರಲ್ಲೂ ಕೃಷ್ಣಾ ಮತ್ತು ಭೀಮಾ ನದಿ ನೀರಿನ ಹೋರಾಟದ ನೇತೃತ್ವ ವಹಿಸುವ ಸಂಬಂಧ ಅವರನ್ನು ಮುಖ್ಯಸ್ಥರನ್ನಾಗಿ ಮಾಡಿದ್ದರಿಂದ, ಇವೊತ್ತಿನವರೆಗೂ ಅದರ ಪಾಪ ಆ ಭಾಗದ ರೈತರಿಗೆ ಹರಿಯುತ್ತಿದೆಯೆಂಬುದು ನನ್ನ ಭಾವನೆಯಾಗಿದೆ. ಅದಕ್ಕೆ ಉದಾಹರಣೆ ಸಮೇತ ನಾನು ಹೇಳಬಯಸುತ್ತೇನೆ. ನನ್ನ ತಾಲ್ಲೂಕಿನಲ್ಲಿ

ಕೂಡ 518 ಎಕರೆ acquisition ಆಯಿತು. ಒಂದು ಎಕರೆಗೆ ಎಷ್ಟು ಮಾಡಿದ್ದಾರೆ ಎಂದರೆ, 26 ಸಾವಿರ ರೂಪಾಯಿಗಳು. ಯಾವ ಅಧಿಕಾರಿಯ effigy ಸುಟ್ಟರೋ, ಅವೊತ್ತು ಏಕೆ ಇಂತಹ ಅಧಿಕಾರ ಹೀಗೆ ಮಾಡುತ್ತಾರೆನ್ನುವ ಭಾವನೆ, ಚಿಂತನೆ ನನಗೆ ಇತ್ತು, ಅವೊತ್ತು ನನ್ನ ಕ್ಷೇತ್ರದಲ್ಲಿ 518 ಎಕರೆಗಳಷ್ಟು ಎಕರೆಗೆ 26 ಸಾವಿರ ರೂಪಾಯಿಗಳಂತೆ. acquisition ಮಾಡಿದರು. ಇದು ಕೋಲಾರ ಮತ್ತು ಬೆಂಗಳೂರಿಗೆ ಕೇವಲ 70 ಕಿಲೋಮೀಟರ್‌ಗಳಷ್ಟು ದೂರವಿರುವುದರಿಂದ, ಇವೊತ್ತು ಎಕರೆಗೆ 30 ರಿಂದ 40 ಲಕ್ಷ ರೂಪಾಯಿಗಳಿಗೆ ಹೋಗುತ್ತಿದೆ. ರೈತರ ಗತಿ ಏನು? ನಮ್ಮ ವ್ಯವಸ್ಥೆಯಲ್ಲಿ ಜಾತಿಗೆ ಬಹಳ ಹೆಚ್ಚಾಗಿ ಒತ್ತುಕೊಡಲಾಗುತ್ತದೆ. ಇದನ್ನು ನಾವು ಬಿಡಬೇಕು. ಯಾವ ರಾಜಕಾರಣಿಯಾಗಲಿ, ಜಾತಿ ಮೇಲೆ ರಾಜಕಾರಣ ಮಾಡಿ ಅಧಿಕಾರಗಳನ್ನು ಇಟ್ಟುಕೊಳ್ಳುವುದನ್ನು ಬಿಡದಿದ್ದರೆ, ಇವೊತ್ತು ಸಮಾಜಕ್ಕೆ ಒಂದು ದೊಡ್ಡ ಅಪರಾಧವಾಗುತ್ತದೆಂಬ ಮಾತನ್ನು ನಾನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ, ಈಗಲೂ ಕೂಡ ಅದೇ ಅಧಿಕಾರಿಯನ್ನು ಹಾಕಿದ್ದೀರಿ.

ಅಧ್ಯಕ್ಷರು: ನಿಮ್ಮ ಸಲಹೆಯನ್ನು ಯಾವುದೇ ರಾಜಕಾರಣಿ ಒಪ್ಪುವುದಕ್ಕೆ ತಯಾರಿಲ್ಲ. ತಾವು ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ರೆವಿನ್ಯೂ ಮಂತ್ರಿಗಳಾದ ಜಗದೀಶ್ ಶೆಟ್ಟರ್ ರವರು ಇದನ್ನು ನೋಡಬೇಕು. ಏಕೆಂದರೆ, ರೈತರ ಚಿಂತಕರಾಗಿರುವ ಅಧಿಕಾರಿಗಳು ಬೇಕಾದಷ್ಟು ಸಂಖ್ಯೆಯಲ್ಲಿದ್ದಾರೆ.

ಅಧ್ಯಕ್ಷರು: ಅರಣ್ಯ ರೋಧನ; ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ಹೌದು, ಅರಣ್ಯ ರೋಧನವೇ ಇದು. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಒಂದು ಎಕರೆಗೆ 26 ಸಾವಿರ ರೂ. ಇವೊತ್ತು ಅದೇ ಜಮೀನು 30ರಿಂದ 40 ಲಕ್ಷ ರೂಪಾಯಿಗಳಿಗೆ ಹೋಗುತ್ತಿದೆ. ಇದಕ್ಕೇನು ಹೇಳೋಣ? ಈ ಅಧಿಕಾರಿಯನ್ನು ಛೀಮಾರಿ ಹಾಕೋಣವೇ ಅಥವಾ ಸ್ಯಾಡಿಸ್ಟ್ ಎಂದು ಹೇಳೋಣವೇ ಅಥವಾ ಇಂತಹ ಅಧಿಕಾರಿಯನ್ನು ಇಟ್ಟುಕೊಂಡಿರುವ ಸರ್ಕಾರವನ್ನು ನಾಚಿಕೆಗೇಡು ಎಂದು ಹೇಳೋಣವೇ? ಏನೆಂದು ಹೇಳಬೇಕು? ಹೇಳಿ. ಇದು ಇರುವ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಅವಲೋಕಿಸಿದಾಗ...

ಒಬ್ಬ ಮಾನ್ಯ ಸದಸ್ಯರು: ಇವೊತ್ತಲ್ಲ, ಸುಮಾರು 12 ವರ್ಷಗಳಿಂದಲೂ ಆ ಅಧಿಕಾರಿ ಇದ್ದಾರೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಅವರು ಏನು ಹೇಳುತ್ತಿದ್ದಾರೆಂದರೆ, ಅನೇಕ ಜನರು ತಪ್ಪು ಮಾಡುತ್ತಾರೆ. ಯಾರೇ ಅಧಿಕಾರಿ ಇರಲಿ, ಅಧಿಕಾರಿಗಳಿಗೆ ಯಾರು ರಕ್ಷಣೆ ಕೊಡುವುದು? ರಾಜಕಾರಣಿಗಳು, ಶಾಸಕರು, ಮಂತ್ರಿಗಳು ಅಥವಾ ಇನ್ನೊಬ್ಬರೋ ಇರುತ್ತಾರೆ. ಇಲ್ಲದಿದ್ದರೆ, ಅವರು ತಪ್ಪು ಮಾಡುತ್ತಾರೆಯೇ? ಅವರು ತಪ್ಪು ಮಾಡಿದರೆ, ತಾವು ಮನೆಗೆ ಹೋಗುತ್ತೇವೆಂಬ ಭಾವನೆ ಇದ್ದರೆ, ಅವರೇಕೆ ತಪ್ಪು ಮಾಡುತ್ತಾರೆ? ಆದುದರಿಂದ, ಈ ವ್ಯವಸ್ಥೆಯಲ್ಲಿ ನಾವು ಕಳ್ಳ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿದ್ದೇವೆ. ಅದು ತಪ್ಪದಿದ್ದರೆ, ವ್ಯವಸ್ಥೆ ಸರಿಹೋಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ನೀವೆಲ್ಲರೂ ಸಹಕರಿಸಿ, ಎಲ್ಲರೂ ಮೇಜು ಕುಟ್ಟಿರಿ. ಮಂತ್ರಿಗಳಿಗೆ ಎಚ್ಚರಿಕೆ ಕೊಡಿ.

ಶ್ರೀ ಆಲಂಗೂರು ಶ್ರೀನಿವಾಸ್: ಈಗ ಇರುವ ಎಲ್ಲಾ ಅಧಿಕಾರಿಗಳು ಅವರ ಕಾಲದಲ್ಲೂ ಇದ್ದರಲ್ಲಾ.

ಶ್ರೀ ಕೆ.ಶ್ರೀನಿವಾಸಗೌಡ: ನಾನು ಅದನ್ನೇ ಹೇಳುತ್ತಿದ್ದೇನಲ್ಲಾ, ನಮ್ಮ ಕಾಲದಲ್ಲೂ ಇದ್ದರು. ಅಂತಹ ಅಧಿಕಾರಿ ಬಗ್ಗೆ ಏನೇನೂ ಹೇಳಲಿಲ್ಲ. ನಾನು ಇಲ್ಲಿಗೆ ಬಂದಾಗ ಇದೇಕೆ ಇಂತಹ ಒಳ್ಳೆಯ ಅಧಿಕಾರಿ...

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರು ಮಾಡಿದರೂ ತಪ್ಪೇ, ಜಗದೀಶ್ ಶೆಟ್ಟರ್‌ರವರು ಮಾಡಿದರೂ ತಪ್ಪೇ, ಯಾರು ಮಾಡಿದರೂ ತಪ್ಪೇ. ಅವರು ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಏನಾಗಿದೆಯೆಂದರೆ, ಮಾನ್ಯ ಶ್ರೀನಿವಾಸ ಗೌಡರ ಮಾವನ ಕಾಲಕ್ಕೂ ಅದೇ ಅಧಿಕಾರಿ ಇದ್ದಾರೆ. ಈ ಕಾಲಕ್ಕೂ ಅದೇ ಅಧಿಕಾರಿ ಇದ್ದಾರೆ. ಭಾವ-ಮೈದುನ ಇಬ್ಬರನ್ನು ಬಿಟ್ಟು ಬೇರೆ ಅಧಿಕಾರಿಗಳಿಲ್ಲ. ಅದರ ಬಗ್ಗೆ ಏಕೆ ಹೇಳುತ್ತೀರಿ? ನಿಮ್ಮ ಕಾಲಕ್ಕೂ ಅವರೇ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಈ ಒತ್ತುವರಿ ಕುರಿತಂತೆ ಬಹಳ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ ಮತ್ತು ಎರಡೂ ಕಡೆ ಇವೊತ್ತು ಏನು ನೂರಾರು ಕೋಟಿ ರೂಪಾಯಿ ನಾವು ಇಲ್ಲಿ ಪರಿಹಾರವನ್ನು ರೈತರಿಗೆ ಕೊಡುತ್ತಿದ್ದೇವೆ, ಇದನ್ನು ಮುಂದೆ ನಿಲ್ಲಿಸಬೇಕಾದರೆ, ಎರಡೂ ಕಡೆ ದೊಡ್ಡ ದೊಡ್ಡ ಬದುಗಳನ್ನು ಹಾಕಿ ನೀರು ಸ್ಪ್ರೆಡ್ ಆಗದಂತೆ ಮಾಡಬೇಕು. ಇವೊತ್ತು ಕೂಡ ಅದನ್ನು ಕಂಟ್ರೋಲ್ ಮಾಡುವಂತಹ ಅವಕಾಶಗಳಿವೆ. ಟೆಕ್ನಿಷಿಯನ್ ಎಂದು ನಾವೇನೂ ನೇಮಕ ಮಾಡಬೇಕಾಗಿಲ್ಲ. ನೀರಾವರಿ ಇಲಾಖೆಯ ಸಂಬಂಧಪಟ್ಟ ಚೀಫ್ ಇಂಜಿನಿಯರ್‌ಗಳನ್ನು ಕಳುಹಿಸಿ, ಇದಕ್ಕೆ ಶಾಶ್ವತವಾದ ಪರಿಹಾರ ಏನು? ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವಂತಹ ಮಾಹಿತಿಯನ್ನು ನೀವು

ತೆಗೆದುಕೊಂಡು ಬೇಗನೆ ಮಾಡಬೇಕು. ಏಕೆಂದರೆ, ಮುಂದಿನ ವರ್ಷಕ್ಕೂ ಮತ್ತೆ ಇದು ರಿಪೀಟ್ ಆಗದಂತೆ ಮಾಡಿಕೊಡಬೇಕು ಎನ್ನುವಂತಹ ವಿನಂತಿಯನ್ನು ನಾನು ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ.

ಇನ್ನು ಪ್ರಾದೇಶಿಕ ಅಸಮಾನತೆ ಕುರಿತಂತೆ ಹೇಳುವುದಾದರೆ, ನಿಜ. ಪ್ರಾದೇಶಿಕ ಅಸಮಾನತೆ ವಿಷಯದಲ್ಲಿ ಮಾತನಾಡುವಾಗ ನನಗೆ ಒಂದೊಂದು ಸಲ ಆಂಧ್ರದ್ದು ಜ್ಞಾಪಕಕ್ಕೆ ಬರುತ್ತದೆ. ಆಂಧ್ರದಲ್ಲಿ ಆ ತರಹ neglect ಮಾಡಿದ್ದರಿಂದ, ತೆಲಂಗಾಣ ಸಮಸ್ಯೆ ಸೃಷ್ಟಿಯಾಗಿದೆ. ರಾಜ್ಯದಲ್ಲಿ ನಾವು ಸುವರ್ಣ ಕರ್ನಾಟಕ ಆಚರಿಸುತ್ತಿರುವಂತಹ ಈ ಸಮಯದಲ್ಲಿ ಈ ತರಹದ ಅವಕಾಶಗಳಾಗದಂತೆ, 'ನಮಗೆ ಪ್ರತ್ಯೇಕ ತೆಲಂಗಾಣ ರಾಜ್ಯ ಬೇಕು' ಎಂದು ಕೇಳುವಂತಹ ಪರಿಸ್ಥಿತಿಗೆ ಹೋಗಿರುವಂತಹ ಪಕ್ಕದ ರಾಜ್ಯವನ್ನು ನೋಡಿದಾಗ ನಾವು ನಂಜುಂಡಪ್ಪನವರ ವರದಿಯನ್ನೂ ಚಾಚೂ ತಪ್ಪದೆ 39 ತಾಲ್ಲೂಕುಗಳಿಗೆ ಏನೇನು ಕೊಡಬೇಕೋ, ಎಲ್ಲವನ್ನೂ ಕೊಡಬೇಕು. ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರು ಮಾತನಾಡುತ್ತಾ, ಸೋರಿಕೆ ಎಲ್ಲವನ್ನೂ ನಿಲ್ಲಿಸಿದ್ದೇವೆಂದು ಹೇಳುತ್ತಿದ್ದರು. ನನಗೆ ಪೂರಕ ಅಂದಾಜುಗಳ ಮೇಲೆ ಮಾತನಾಡುವುದಕ್ಕೆ ನೀವು ಅವಕಾಶ ಕೊಡಲಿಲ್ಲ. ಇವರೇನೂ ಸೋರಿಕೆಯನ್ನು ನಿಲ್ಲಿಸಲಿಲ್ಲ. ನಿನ್ನೆ ಅವರು ಮಾತನಾಡುತ್ತಾ, ಸಿಮೆಂಟ್, ಇತ್ಯಾದಿ ವಿಚಾರಗಳನ್ನು ಹೇಳುತ್ತಿದ್ದರು. ಸ್ವಾಮಿ, ಎಕ್ಸೈಸ್‌ನಲ್ಲಿ ಎಸ್.ಎಂ.ಕೃಷ್ಣರವರು ಸೆಕೆಂಡ್ಸ್, ಥರ್ಡ್ಸ್ ನಿಲ್ಲಿಸುವ ಮುಖಾಂತರ ಒಂದು ಪಾನೀಯ ನಿಗಮವನ್ನು ರಚಿಸದೇ ಇದ್ದಿದ್ದರೆ, ಇವೊತ್ತು ಯಾರೂ ಮಾಡುತ್ತಿರಲಿಲ್ಲ. ಸಿದ್ದರಾಮಯ್ಯನವರು ಬಂದ ನಂತರ ಸಾರಾಯಿ ಹರಾಜುಗಳನ್ನು ಚೇಂಜ್ ಮಾಡಿ ಇಟ್ಟಿದ್ದರಿಂದ ಇವೊತ್ತಿಗೂ ಕೂಡ ಎಕ್ಸೈಸ್‌ನಲ್ಲಿ ದುಡ್ಡು ಜಾಸ್ತಿ ಬಂತು. ಇವೊತ್ತು ಅವರು ನಮ್ಮ ಪಕ್ಷದಲ್ಲಿದ್ದಾರೆಂದು ಅವರನ್ನು ನಾನು ಹೊಗಳುವುದಿಲ್ಲ. ಆದರೆ, ಮತ್ತೆ ನೀವು ಹೇಳಿದಿರಿ. ಸ್ಟಾಂಪ್ ಡ್ಯೂಟಿಯಲ್ಲೂ ಕೂಡ 1,800 ಕೋಟಿ ರೂ. ಇದ್ದುದು, 1,400 ಕೋಟಿ ರೂಪಾಯಿಗಳೆಂದು ಹೇಳಿದಿರಿ. ಸ್ವಾಮಿ, ಬೆಂಗಳೂರು, ಕೋಲಾರ, ಮೈಸೂರು ಮತ್ತು ಮಂಡ್ಯ. ಈ ನಾಲ್ಕೂ ಜಿಲ್ಲೆಗಳನ್ನು ಬಿಟ್ಟು ಎಲ್ಲೆಲ್ಲಿ ನಿಮಗೆ ರೆವಿನ್ಯೂ ಜಾಸ್ತಿ ಬಂದಿದೆ ಎಂಬುದನ್ನು ಅವಲೋಕಿಸಬೇಕು. ಇದನ್ನು ಏಕೆ ಹೇಳುತ್ತೇನೆಂದರೆ, ಜಗದೀಶ್ ಶೆಟ್ಟರ್‌ರವರೇ, ಇವೊತ್ತು ಬೆಂಗಳೂರು ಸುತ್ತಮುತ್ತಲೂ ಜಮೀನು ಮಾಡಿರುವಂತಹ ರೈತರು ಅಲ್ಲಿ ಒಂದು ಕೋಟಿ, ಎರಡು ಕೋಟಿ ರೂಪಾಯಿಗಳಿಗೆ ಮಾರಿ ನಮ್ಮಲ್ಲಿ ಅಂದರೆ, ಕೋಲಾರ, ತುಮಕೂರು, ಮಂಡ್ಯ ಮತ್ತು ಮೈಸೂರು ಕಡೆಗಳಲ್ಲಿ 10 ಲಕ್ಷ, 20 ಲಕ್ಷ 30 ಲಕ್ಷಕ್ಕೆ ಕೊಳ್ಳುತ್ತಿದ್ದಾರೆ. ರೈತರು ಮುಂದಿನ ದಿನಗಳಲ್ಲಿ ಏನಾದರೂ ಕೂಲಿಗೆ ಹೋಗಬೇಕಾಗುತ್ತದೆಯೋ ಏನೋ

ಎಂದು ಒಂದೊಂದು ಸಲ ನನ್ನ ಮನಸ್ಸಿಗೆ ಅನ್ನಿಸುತ್ತದೆ. ಏಕೆಂದರೆ, ದುಡ್ಡು ಬಂದ ನಂತರ ಮಗ ಮೋಟಾರ್ ಸೈಕಲ್ ಕೇಳುತ್ತಾನೆ, ಮಗಳು ಬಂಗಾರದ ಡಾಬು ಕೇಳುತ್ತಾಳೆ. ಆತ ಒಂದು ಕಾರು ಬೇಕು ಎನ್ನುವಂತಹ ಭಾವನೆಯೂ ಇದೆ. ಏಕೆಂದರೆ, ಹಣ ಬಂದಾಗ ಇವೆಲ್ಲವೂ ಬರುತ್ತದೆ. ಎಷ್ಟು ದಿನ ಹಣ ಇರುತ್ತದೆ? ಇದರ ಬಗ್ಗೆ ಸಮಾಜಕ್ಕೆ ಬಹಳ ದೊಡ್ಡ ಮೆಸೇಜ್ ಹೋಗುತ್ತದೆ. ಬೆಂಗಳೂರು ಸುತ್ತಮುತ್ತ ಏನಾಗಿದೆಯೆಂದರೆ, ಎರಡು ಕೋಟಿ, ಮೂರು ಕೋಟಿ ರೂಪಾಯಿಗಳಿಗೆ ಜಮೀನುಗಳನ್ನು ಮಾರುತ್ತಾರೆ. ಅದು ಎಷ್ಟೆಷ್ಟು ಹಣಕ್ಕೆ ಹೋಗುತ್ತದೆಂದು ಮಾನ್ಯ ಹಿರಿಯ ಸಚಿವರಾದ ಸಿ.ಎಂ. ಉದಾಸಿಯವರಿಗೆ ಚೆನ್ನಾಗಿ ಗೊತ್ತಿದೆ. ಮುರ್ನಾಲ್ಕು ಕೋಟಿ ರೂಪಾಯಿಗಳಿಗೆ ಹೋಗಿರುವಂತಹ ಈ ಜಮೀನನ್ನು ಅವರು50 ಲಕ್ಷ, 60 ಲಕ್ಷ ರೂಪಾಯಿಗಳಿಗೆ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಉಳಿದ ಹಣ ಬ್ಲಾಕ್ ಮನಿ ಆಗುತ್ತದೆ. ಅದನ್ನು ಬ್ಯಾಂಕ್‌ನಲ್ಲೂ ಇಡುವುದಕ್ಕಾಗುವುದಿಲ್ಲ. ಮನೆಯಲ್ಲೂ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದು ಪರಿಸ್ಥಿತಿ. ಇದನ್ನು ನಾವು ನೋಡ ಬೇಕಾಗುತ್ತದೆ. ಇದರ ಬಗ್ಗೆ ಹೆಚ್ಚಿಗೆ ಗಮನಹರಿಸಬೇಕು.

ಡಾ: ನಂಜುಂಡಪ್ಪನವರ ವರದಿಯಲ್ಲಿ ತಿಳಿಸಿರುವಂತೆ, ನಾನು ಮೊನ್ನೆ ಸ್ಕೂಲುಗಳನ್ನು ನೋಡಿದಾಗ ಬಹಳ ನೋವಾಯಿತು. ಹೊರಟ್ಟಿಯಂತಹ ಶಿಕ್ಷಕರ ಕ್ಷೇತ್ರದಿಂದ ಐದನೇ ಸಲ ಚುನಾಯಿತರಾಗಿ ಬಂದಂಥ ಒಬ್ಬ ಮಂತ್ರಿ ಆ ಲಿಸ್ಟ್ ಮಾಡಿದ್ದಾರೆಂದು ನನಗೆ ಕೋಪ ಬಂದು ಅವರ ಮೇಲೆ ರೇಗಾಡಿದರೆ, ಅಪ್ಪಾ, ಅದನ್ನು ನಾನು ಮಾಡಲಿಲ್ಲ ಮಾರಾಯ. ದಯವಿಟ್ಟು ನನ್ನನ್ನು ಬೈಯ್ಯಬೇಡವೆಂದು ಹೇಳುತ್ತಾರೆ! ಇದು ಪರಿಸ್ಥಿತಿ. ಇದು ಸರ್ಕಾರ ನಡೆಯುತ್ತಿರುವಂತಹ ಪರಿಸ್ಥಿತಿ. ನಾವು ಯಾರಿಗೆ ಹೇಳೋಣ? ಅದನ್ನು ಅವರೇ ಹೇಳುತ್ತಾರೆ. ಹೇಳಬೇಕೆಂದರೆ, ಹೇಳುತ್ತೇನೆ. ನನಗೇನೂ ಇಲ್ಲ. ಮತ್ತೆ ನೀವು ಕೂಗಾಡಬಾರದು. ಅವರು ಏನು ಹೇಳಿದರೆಂದು ಹೇಳಿ ಎಂದರೆ, ಹೇಳುತ್ತೇನೆ. ಇದರ ಬಗ್ಗೆ ರೂಲಿಂಗ್ ಪಾರ್ಟಿಯವರು ಹೇಳಿ ಎಂದರೆ, ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸ ಗೌಡರೆ, ಮಾತನಾಡಿ. ಸುಮ್ಮನೆ ಅಡ್ಡವಾಗಿ ಏಕೆ ಮಾತನಾಡುತ್ತೀರಿ?

ಒಬ್ಬ ಮಾನ್ಯ ಸದಸ್ಯರು: ಹೋಗಲಿ, ಅವರ ಹೆಸರುಗಳನ್ನಾದರೂ ಹೇಳಿ.

ಡಾ: ಕೆ. ಅನ್ನದಾನಿ: ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಯಾವ್ಯಾವ ಮಂತ್ರಿ ಏನೇನು ಮಾಡಿದರು, ನೀವೇನು ಮಾಡಿದಿರಿ, ಅದೆಲ್ಲವನ್ನೂ ಹೇಳಿಬಿಡಿ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಇವೊತ್ತು ಬಹಳ ಮುಖ್ಯವಾಗಿ ನಾಲ್ಕು ವಿಷಯಗಳಲ್ಲಿ ನಾವು ಸಮತೋಲನ ಕಾಯ್ದುಕೊಳ್ಳಬೇಕಾಗಿದೆ. ವಿದ್ಯಾಭ್ಯಾಸ,

ಕೃಷಿ ಕಾರ್ಮಿಕರು, ಆರೋಗ್ಯ ಮತ್ತು ಲಾ ಅಂಡ್ ಆರ್ಡರ್, ಈ ನಾಲ್ಕರಲ್ಲಿ ಸಮಾನತೆ ಇಲ್ಲದಿದ್ದರೆ, ರಾಜ್ಯ ಹಿಂದುಳಿಯುತ್ತದೆ. ಇದರಲ್ಲಿ ನಾವು ಆದ್ಯತೆಗಳನ್ನು ಕೊಡವಂಥಾದ್ದು, ನನ್ನ ಕ್ಷೇತ್ರದಲ್ಲಿ ನಾಲ್ಕು ಹೈಸ್ಕೂಲುಗಳು, ಮತ್ತೊಂದು ಕ್ಷೇತ್ರದಲ್ಲಿ ಹನ್ನೊಂದು ಹೈಸ್ಕೂಲುಗಳು, ಒಂದು ಕ್ಷೇತ್ರದಲ್ಲಿ ಏನೂ ಇಲ್ಲ. ಮೂರು ಕ್ಷೇತ್ರದಲ್ಲಿ ಒಂದು ಸ್ಕೂಲು ಇಲ್ಲ. ಇದನ್ನು ಯಾವ ಸಮಾನತೆ ಎಂದು ಹೇಳೋಣ? ನಂಜುಂಡಪ್ಪನವರ ವರದಿ ಹೋಗಲಿ, ನಮಗೆ ಬೇಡ. ನಂಜುಂಡಪ್ಪನವರ ವರದಿ ಪ್ರಕಾರ ಏನು ಕೊಟ್ಟಿದ್ದೀರಿ? ಅವರ ವರದಿ ಪ್ರಕಾರ ನಮ್ಮ ಜಿಲ್ಲೆಯಲ್ಲೂ ಬಾಗೇಪಲ್ಲಿ ಇದೆ. ಅದು ನಮ್ಮ ಶ್ರೀರಾಮರೆಡ್ಡಿಯವರ ಕ್ಷೇತ್ರ, ಅವರಿಗೆ ಎಷ್ಟು ಕೊಟ್ಟಿದ್ದೀರಿ? ಬೇರೆ ಕ್ಷೇತ್ರಗಳಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ? ಇದನ್ನೆಲ್ಲಾ ಸ್ವಲ್ಪ ಹತ್ತಿರದಿಂದ ಅವಲೋಕಿಸಬೇಕು. ಏನಾಗಿದೆಯೆಂದರೆ, ಮಾನ್ಯ ಯಡಿಯೂರಪ್ಪನವರು ಈ ಕಡೆ ಇದ್ದಾಗ ಬಹಳ ಚೆನ್ನಾಗಿ ಮಾತನಾಡುತ್ತಾ ನಾಲ್ಕು ಕೋಟಿ, ಐದು ಕೋಟಿ ಜನರು ನಮ್ಮ ಕಡೆ ನೋಡುತ್ತಿದ್ದಾರೆಂದು ಹೇಳುತ್ತಿದ್ದರು. ಈಗ ಈ ಕೋಟಿ ಜನರು ಎಲ್ಲಿ ಹೋದರು ಎಂಬುದನ್ನು ಮರೆತುಹೋಗಿದ್ದಾರೆ. ಏಕೆಂದರೆ ಸರ್ಕಾರವನ್ನು ನಡೆಸಬೇಕು. ಹಾಗಾಗಿ ಆ ಮಾತುಗಳನ್ನು ಹೇಳುವುದು ನಿಂತುಹೋಗಿದೆ.

ಶ್ರೀ ಡಿ.ಆರ್. ಪಾಟೀಲ್: ಡಾ: ನಂಜುಂಡಪ್ಪನವರ ವರದಿ ಬಂದಮೇಲೆ, ಹಿಂದೆ ಎಸ್.ಎಂ. ಕೃಷ್ಣರವರ ಸರ್ಕಾರವಿದ್ದಾಗ ಶೈಕ್ಷಣಿಕವಾಗಿ ಹಿಂದುಳಿದ ಏಳು ಜಿಲ್ಲೆಗಳನ್ನು ಐಡೆಂಟಿಫೈ ಮಾಡಿ sixty present budget ಆ ಏಳು ಜಿಲ್ಲೆಗಳಿಗೇ ಮೀಸಲಾಗಿರಬೇಕೆಂದು ಆರ್ಡರ್ ಮಾಡಲಾಗಿತ್ತು. ಅದೆಲ್ಲವನ್ನೂ ಈಗ ನೀವು ಹೇಳಿದಂತೆ ಪಾಳೆಗಾರಿಕೆ ರಾಜಕೀಯ ಚಾಲೂ ಆದಮೇಲೆ ಬದಿಗಿಟ್ಟುಬಿಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ಪಾಟೀಲರೆ, ಪಾಳೆಗಾರಿಕೆ ಆರಂಭವಾಗಿ 30–40 ವರ್ಷಗಳಾಯಿತು! ಸ್ವಾತಂತ್ರ್ಯವನ್ನು ಪಡೆದವರೆಲ್ಲಾ ನಿಧನರಾದ ಮೇಲೆ ಪಾಳೆಗಾರರನ್ನು ನಂಬಿಕೊಡರೇ ಹೊರತು ಇನ್ಯಾರನ್ನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಸರಿಯಾಗಿ ಹೇಳಿದಿರಿ.

ಶ್ರೀ ಕೆ. ಶ್ರೀನಿವಾಸಗೌಡ: ಒಳ್ಳೆಯ ವಿಚಾರವನ್ನು ಹೇಳಿದಿರಿ. ಮುಂದೆ ಇದು ಪಾಳೆಗಾರರ ದೇಶಗಳಾಗುತ್ತವೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಈವತ್ತು ಪಾಳೆಗಾರಿಗೆ ಪ್ರಾರಂಭವಾಗಿದ್ದು ನಮ್ಮ ಗದಗ್ ಜಿಲ್ಲೆಯಿಂದ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ನಿಮ್ಮ ಮಂಡ್ಯ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯೊಳಗೆ ಹಿಂದೆ ನಬಾರ್ಡ್‌ನಲ್ಲಿ ತೆಗೆದುಕೊಂಡಿರುವ ಕೆಲಸವನ್ನು ಮತ್ತು ಇಡೀ ರಾಜ್ಯದಲ್ಲಿ ತೆಗೆದುಕೊಂಡಿರುವ ಕೆಲಸ

ಕಾರ್ಯಗಳನ್ನು ಮತ್ತು ಎರಡು ಜಿಲ್ಲೆಗಳಲ್ಲಿ ತೆಗೆದುಕೊಂಡಿರುವ ಕೆಲಸವನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದ್ದಂಥ ಸಂದರ್ಭದಲ್ಲಿ ಆಗಿರುವಂಥ ವ್ಯತ್ಯಾಸವನ್ನು ಹೋಲಿಕೆ ಮಾಡಿ ನೋಡಿದಾಗ, ಇಡೀ ರಾಜ್ಯಕ್ಕೆ ಹೋಲಿಕೆ ಮಾಡಿಕೊಂಡು ನೋಡಿದಾಗ ತಮಗೆ ಗೊತ್ತಾಗುತ್ತೆ, ಸುಮ್ಮನೆ ಬೇರೆಯವರ ಮೇಲೆ ಕೆಸರನ್ನು ಎರಚುವುದರ ಬದಲಾಗಿ ತಾವು ಸಲಹೆಗಳನ್ನು ಕೊಡಿ. ಯಾವ ರೀತಿಯಾಗಿ ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಅಲ್ಲಿಗೆ ಹೋದಮೇಲೆ ಏಕೆ ಏನೇನು ಹೇಳುತ್ತೀರಿ ಎಂಬುದು ನನಗೆ ಗೊತ್ತಿದೆ. ಈವತ್ತು ಫೈನಾನ್ಸ್ ಮಿನಿಸ್ಟರ್‌ರವರಿದ್ದಾರೆ. ಮೊನ್ನೆ ಸಚಿವರಾದ ಶಂಕರ್ ಮೂರ್ತಿಯವರು ಟಿಪ್ಪು ಸುಲ್ತಾನ್ ವಿಷಯದಲ್ಲಿ ಏನೋ ಹೇಳಿದರು. ಬೆಳಗಾಂ ಜಿಲ್ಲೆಯಲ್ಲಿ ಗೌರ್ನಮೆಂಟ್ ಗ್ರಾಂಟ್ ಅಡಿಯಲ್ಲಿ ಮೈನಾರಿಟಿ ಸ್ಕೂಲ್‌ಗಳನ್ನು ನಡೆಸುತ್ತಿರುವವರು ನನಗೆ ಬಂದು ಈವತ್ತು ಬೆಳಿಗ್ಗೆ ಒಂದು ಅರ್ಜಿಯನ್ನು ಕೊಟ್ಟರು. District Muslim Education Welfare Society, Hukkeri, Tippusultan Junior College, Vishalini Education Society, Belgam ಈ ಮೈನಾರಿಟಿ ಸ್ಕೂಲ್‌ಗಳಿಗೆ ಐದ್ಯೆದು ಸ್ಕೂಲ್‌ಗಳಿಗೆ ದುಡ್ಡು ಕೊಡುತ್ತಿಲ್ಲ. ಏಕೆ? ಇವರ principle ನ್ನು ಪಾಲನೆ ಮಾಡದಿರುವುದರಿಂದ ಏನಾದರೂ ಅದನ್ನು ನಿಲ್ಲಿಸಿದ್ದೀರಾ? Finance Minister ರವರು ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ಏಕೆಂದರೆ ಎಸ್.ಸಿ. ಎಸ್.ಟಿ. ಯವರಿಗೆ ಕೊಡುತ್ತಿದ್ದೀರಿ. ಇದರಿಗೇಕೆ ಕೊಡಲಿಲ್ಲ? ಈ ಭಾಗ ಅಸಮತೋಲನವೆಂದು ಒಂದು ಕಡೆ ಹೇಳುತ್ತೀರಿ. ಈ ಅಸಮತೋಲನವನ್ನು ಸರಿಮಾಡುವುದರ ಬದಲು ನೀವೇ ಇನ್ನೂ ಹೆಚ್ಚು ಅಸಮತೋಲನವನ್ನು ಮಾಡಿದರೆ, ಮುಂದಿನ ದಿನಗಳಲ್ಲಿ ಜನರು ದಂಗೆ ಏಳುತ್ತಾರೆ. ನಮ್ಮ ರಾಜಕಾರಣಿಗಳ ಮೇಲೆಲ್ಲಾ ದಂಗೆ ಏಳುತ್ತಾರೆ.

(ಅಡಚಣೆ)

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ: ನಾನೇನು ಮಾಡಲಿ? ನಾನು ಇನ್ನೂ ಮಾತನಾಡಬೇಕು.

ಶ್ರೀ ಆರಗ ಜ್ಞಾನೇಂದ್ರ: ಕಳೆದ ಹಲವಾರು ವರ್ಷದಿಂದ ಅನ್ ಏಡೆಡ್ ಕಾಲೇಜುಗಳನ್ನು ಏಡೆಡ್ ಮಾಡಲಿಲ್ಲ. ಹಳೆಯ ಸರ್ಕಾರವೂ ಮಾಡಲಿಲ್ಲ ಈ ಸರ್ಕಾರವೂ ಮಾಡಲಿಲ್ಲ. ಗೊತ್ತಿದ್ದರೂ ಮಾಡಲಿಲ್ಲ, ಇನ್ನೊಬ್ಬರು ಮಾಡಲಿಲ್ಲ ಎಂಬ

ಪ್ರಶ್ನೆಯಲ್ಲ. ಯಾರೂ ಕೂಡ ಮಾಡಲಿಲ್ಲ. ನಿಮ್ಮ ಸರ್ಕಾರವಿದ್ದಾಗ ನೀವೇಕೆ ಮಾಡಲಿಲ್ಲ?

(ಅಡಚಣೆ)

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ನೀವು 20 ನಿಮಿಷ ತೆಗೆದುಕೊಂಡಿರಿ.

ಶ್ರೀ ಕೆ. ಶ್ರೀನಿವಾಸಗೌಡ: ಬೇರೆಯವರೆಲ್ಲಾ ಐದು ಹತ್ತು ನಿಮಿಷ ಮಾತನಾಡಿದರೆ ನಾನೇನು ಮಾಡಲಿ? ನಾನು ಮಾತನಾಡಿರುವುದು ಐದೇ ನಿಮಿಷ. ಬರದ ಬಗ್ಗೆ ಮಾತನಾಡಿಬಿಡುತ್ತೇನೆ.

ಅಧ್ಯಕ್ಷರು: ಬೇಗನೆ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಆಯಿತು. ಇವರಿಗೆಲ್ಲಾ ಸುಮ್ಮನೆ ಇರಲು ಹೇಳಿ. ಆಗಲೇ ಮಾನ್ಯ ರಾಯರೆಡ್ಡಿಯವರು ಹೇಳಿದಾಗ 1972ರಲ್ಲಿ ದೇವರಾಜ್ ಅರಸುರವರು ಮುಖ್ಯಮಂತ್ರಿಗಳು, ನಾನು ವಿಧಾನಸೌಧದಲ್ಲಿ ಕುಳಿತಿದ್ದೆ. ಆವತ್ತು ಕೆ.ಜಿ.ಎಫ್.ನ ಶಾಸಕರಾದ ಆರ್ಮುಗಂರವರು ಬರದ ಮೇಲೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಎದ್ದು ಆರ್ಮುಗಂರವರಿಗೆ ನಾನು one man committee ಮಾಡುತ್ತೇನೆ, ಗುಲ್ಬರ್ಗಾಕ್ಕೆ ಹೋಗಿ ನೀವು ವರದಿಯನ್ನು ಕೊಡಿ ಎಲ್ಲವನ್ನೂ ಜಾರಿಗೆ ತರುತ್ತೇನೆಂದು ಹೇಳಿದರು. ಅವರು ಹೋಗಿ 15 ದಿವಸದಲ್ಲಿ ವರದಿಯನ್ನು ತಂದಮೇಲೆ ಅದನ್ನು ಚಾಚುತಪ್ಪದೆ ಅವರು ಕೊಟ್ಟಂಥ ವರದಿಯನ್ನು ಜಾರಿಗೆ ತಂದರು. ಆರ್ಮುಗಂರವರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಅವರ ಮಾತನ್ನು ಕೇಳಿದಾಗ ಮಾನ್ಯ ದೇವರಾಜ್ ಅರಸುರವರು ಕುಳಿತಿದ್ದವರು ಎದ್ದು ಅದನ್ನು ಹೇಳಿ ವರದಿಯನ್ನು ಮಾಡಿಸಿದರು. ಈವತ್ತು ಆ ರೀತಿ ಆಗಬೇಕು. ರಾಮಕೃಷ್ಣ ಹೆಗಡೆಯವರು ದನಕರುಗಳಿಗೂ ಮೇವಿನ ವ್ಯವಸ್ಥೆಯನ್ನು ಮಾಡಿದರು. ನಮ್ಮ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ ರಾಜ್ಯಾದ್ಯಂತ ಮಾಡಿದರು. ಈವತ್ತು ಇಷ್ಟು ಬರ ಆಗಿದೆ. ಮೊನ್ನೆ ಆಹಾರ ಸಚಿವರು ಬರ ಬಂದಂಥ ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದರು. ಒಂದು ಕೋಟಿಯಲ್ಲ ಒಂದು ರೂಪಾಯಿ ಸಹ ಬಿಡುಗಡೆಯಾಗಿಲ್ಲ, ಏಕೆ ಈ ರೀತಿ? ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಯಾವುದೋ ಪತ್ರಿಕೆಯಲ್ಲಿ ಹೆಡ್ ಲೈನ್‌ನಲ್ಲಿ ಬಂದಿತು. ಐದು ತಿಂಗಳಿನಲ್ಲಿ ಇವರು 300 ಭರವಸೆಗಳನ್ನು ಕೊಟ್ಟಿದ್ದಾರೆ. ಇವರು ಭರವಸೆಗಳನ್ನು ಕೊಡುವುದರಲ್ಲಿ ನಿಸೀಮರೇ ವಿನಹ implementation ನಲ್ಲಿ ಇವರು ಇಲ್ಲ ಎಂಬುದನ್ನು ಹೇಳಲು ಇಚ್ಚೆ ಪಡುತ್ತೇನೆ. ಹಿಂದಿನ ಸಬೆಯಲ್ಲಿ ಸಹ ನಾನು ವಿರೋಧ ಪಕ್ಷದಲ್ಲಿ ಕುಳಿತಿದ್ದೆ.

ಎಸ್.ಎಂ. ಕೃಷ್ಣರವರು ಇದ್ದಾಗ ಬರ ಬಂದಾಗ ಬೆಳೆಗಳಿಗೆ ಬೆಲೆ ಸಿಗಲಿಲ್ಲ. ನಾನು ಒಂದು ಆವರ್ತ ನಿಧಿ ಮಾಡಬೇಕೆಂದು ಆವತ್ತು ಭಾಷಣ ಮಾಡಿದೆ. ಆವತ್ತು ಸಂಜೆಯೇ ಕ್ಯಾಬಿನೆಟ್ ಮಾಡಿ 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಇಟ್ಟರು. ಆದ್ದರಿಂದ ಬರ ಮತ್ತು ನೆರೆಹಾವಳಿಗೆ ನನ್ನ ಸಲಹೆ ಏನೆಂದರೆ ಇದಕ್ಕೆ 500 ಕೋಟಿ ರೂಪಾಯಿಯನ್ನು ಇಡಬೇಕಾಗುತ್ತದೆ. ಇದು ಕಂಟಿನ್ಯೂಯಸ್ ಪ್ರೋಸೆಸ್. ಒಂದು ಸಲ ನೆರೆಯಾವಳಿಯಾಗುತ್ತದೆ ಇಲ್ಲದಿದ್ದರೆ ಬರವಾಗುತ್ತದೆ. ನಾವು ಪ್ರತಿಯೊಂದಕ್ಕೂ ಕೂಡ ಅವರನ್ನು ಕೇಳಿ, ಅವರಿಗೆ ಮುಖವನ್ನು ಹಾಕುವುದು ಬೇಡ, ಯಾವ ಸರ್ಕಾರ ಇರುತ್ತದೋ, ಯು.ಪಿ.ಎ. ಇರುತ್ತದೋ ಇನ್ನೊಂದು ಇರುತ್ತದೋ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ರಾಜ್ಯದಲ್ಲಿ ಏನು Market intervention ಆವರ್ತ ನಿಧಿಯನ್ನು ಮಾಡಿದ್ದೀರಿ, ನೇರವಾಗಿ ನೆರೆಹಾವಳಿ ಮತ್ತು ಬರಕ್ಕೆ ಆವರ್ತ ನಿಧಿಗೆ 500 ಕೋಟಿ ರೂಪಾಯಿಗಳನ್ನು ಮಾಡಿದರೆ ಈ ರೀತಿ ಬಂದಾಗ ಕೂಡಲೇ ಸ್ಪಂದಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ರೈತರಿಗೆ ನಾಲ್ಕು ಪರ್‌ಸೆಂಟ್ ಬಡ್ಡಿ ದರವನ್ನು ಘೋಷಣೆ ಮಾಡಿದರು. ಕೋಲಾರ ಜಿಲ್ಲೆಯ ಜಿಲ್ಲಾ ಬ್ಯಾಂಕ್..

(ಅಡಚಣೆ)

ಅಧ್ಯಕ್ಷರು: ದಯಮಾಡಿ ಮುಗಿಸಿ. ಅನೇಕ ಜನರು ಮಾತನಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ: ನಾಲ್ಕು ಪರ್‌ಸೆಂಟ್ ಬಡ್ಡಿ ದರದಲ್ಲಿ ಕೊಟ್ಟಿರುವುದರಿಂದ ಏನೇನೂ ಉಪಯೋಗವಾಗಿಲ್ಲ. ಧಾರವಾಡ ಜಿಲ್ಲಾ ಬ್ಯಾಂಕ್‌ಗೆ ಹೇಗೆ 25 ಕೋಟಿ ರೂಪಾಯಿ ಕೊಟ್ಟಿದ್ದೀರಿ ನಮಗೂ 30–40 ಕೋಟಿ ರೂ. ಕೊಟ್ಟರೆ ಆ ಬ್ಯಾಂಕ್ ರಿವೈವ್ ಆಗುತ್ತದೆ. ನಮ್ಮ ರೈತರಿಗೆ ನಾಲ್ಕು ಪರ್‌ಸೆಂಟ್ ಇಲ್ಲದಿದ್ದರೆ ನಮಗೆ ಒಂದು ಬಿಡಿಕಾಸು ಸಹ ಸಹಾಯವಾಗುವುದಿಲ್ಲ. ಈವತ್ತು ಕೆರೆಗಳಲ್ಲಿ ಅಂತರ್ಜಲದ ಬಗ್ಗೆ ಯಾರೋ ನೀವೇನು ಮಾಡಿದ್ದೀರಿ ಎಂದು ಹೇಳುತ್ತಿದ್ದರು. ನಾನು ಮತ್ತು ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಮತ್ತು ಆಗಿನ ಮಂತ್ರಿಗಳಾದಂಥ ಶ್ರೀನಿವಾಸ್‌ರವರು ನಮ್ಮ ಜಿಲ್ಲಾಧಿಕಾರಿಯವರನ್ನು ಕರೆಸಿ ಹೋದ ಸಲ ಒಳ್ಳೆಯ ಮಳೆಯಾಯಿತು.

ಅಧ್ಯಕ್ಷರು: ಕೆರೆಗಳ ವಿಚಾರವನ್ನು ಅನೇಕ ಸಲ ತಾವು ಹೇಳಿದ್ದೀರಿ. ಕಳೆದ ಸಲವೂ ಹೇಳಿದ್ದೀರಿ. ಅಂತರ್ಜಲದ ಬಗ್ಗೆ ತಾನೇ ನೀವು ಹೇಳುವುದು? ಅದನ್ನು ಕಳೆದ ಸಲವೇ ಹೇಳಿದ್ದೀರಿ. ದಯಮಾಡಿ ತಾವು ಕುಳಿತುಕೊಳ್ಳಿ. ಕತೆಯನ್ನು ಹೇಳಿಕೊಂಡು ಕುಳಿತರೆ ಆಗುವುದಿಲ್ಲ. ಆ ರೀತಿಯಾದರೆ ನನ್ನ ಮೇಲೆ ಕಲ್ಲನ್ನು ಎಸೆಯುತ್ತಾರಷ್ಟೆ! ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ: ನಾನು ಪಡಿತರ ಚೀಟಿಯ ಬಗ್ಗೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ಆಹಾರ ಸಚಿವರು ಏನು ಹೇಳಿದ್ದಾರೆಂದರೆ, ಒಂದು ಬೋರ್‌ವೆಲ್ ಇರುವವರಿಗೆ, ದ್ವಿಚಕ್ರವಾಹನ ಇರುವವರಿಗೆ, ಟಿ.ವಿ. ಇರುವವರಿಗೆ ಬಿ.ಪಿ.ಎಲ್. ಕಾರ್ಡ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನೆಲ್ಲಾ immediate ಆಗಿ ಸರ್ವೆ ಮಾಡಿ ಕೊಡುವಂಥದ್ದು ಆಗಬೇಕು. ಇನ್ನು ಅರ್ಧ ಮುಕ್ಕಾಲು ಗಂಟೆ ಮಾತನಾಡಲು ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು. ಬಹಳ ಹೇಳುವುದು ಇತ್ತು.

ಅಧ್ಯಕ್ಷರು: ಸೀನಿಯರ್‌ಗಳಿಗೆ ಕೊಟ್ಟರೆ ಹೀಗೆ. ಇನ್ನೂ ಬಹಳ ಜನರು ಮಾತನಾಡುವವರಿದ್ದಾರೆ. ಬಹಳ ಜನ ಹೊಸಬರು ಮಾತನಾಡುವವರಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ: ಇಷ್ಟು ಹೇಳಿ ಈವತ್ತು ಅಭಾವ ಪರಿಸ್ಥಿತಿಗೆ ಹಣವನ್ನು ಬೇಗನೆ ಬಿಡುಗಡೆ ಮಾಡಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಡಿವಾಣವನ್ನು ಹಾಕಿ ನೇರವಾಗಿ ಕೆಲಸ ಆಗುತ್ತಿದೆಯೋ ಇಲ್ಲವೋ ಎಂಬ ಕೆಲಸವನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5.00 ಪಿಎಂ

(ಅಡಚಣೆ)

ಅಧ್ಯಕ್ಷರು: ದಯಮಾಡಿ ಕೇಳಿ. ನಿಮ್ಮ whip ಕೊಟ್ಟಂತಹ ಹೆಸರುಗಳನ್ನು ನಾನು ಇಲ್ಲಿ ಕರೆಯುತ್ತಿದ್ದೇನೆ. ನೀವು ಇಲ್ಲಿ ನಿಂತುಕೊಂಡು ಮಾತನಾಡಲು ಅವಕಾಶ ಕೊಡಿ ಎಂದರೆ ನಾನು ಕೊಡುವುದಿಲ್ಲ. ನಿಮ್ಮ Whip ಗಳು ಏನೊಂದು ಲಿಸ್ಟ್ ಅನ್ನು ಕಳುಹಿಸಿದ್ದಾರೋ, ಅದರ ಪ್ರಕಾರ ನಾನು ಕರೆಯುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ. ಸುಮ್ಮನೆ ಮಾತನಾಡಲು ಅವಕಾಶ ಕೊಡಿ ಎಂದು ಕೈ ಎತ್ತುವುದು ಸರಿಯಾದ ಕ್ರಮವಲ್ಲ.

ಶ್ರೀ ಹೆಚ್. ಆಂಜನೇಯ: ಸಾರ್, ಈಗ ಯಾರು ಮಾತನಾಡಬೇಕು?

ಅಧ್ಯಕ್ಷರು: ಮಾನ್ಯ ಶಿವಾನಂದ ಪಾಟೀಲರು. ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ. ದಯಮಾಡಿ ಈಗ ಕುಳಿತುಕೊಳ್ಳಿ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ನನಗೆ ಮೈಯಲ್ಲಿ ಹುಷಾರಿಲ್ಲ. ನಾನು ಊರಿಗೆ ಹೋಗಬೇಕಾಗಿದೆ. ಎರಡೇ ನಿಮಿಷಗಳಲ್ಲಿ ನಾನು ಮಾತನಾಡಿ ಹೋಗಿ ಬಿಡುತ್ತೇನೆ. ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಪಾಟೀಲರೆ, ಮೊದಲು ಮಾನ್ಯ ಆಂಜನೇಯರವರದ್ದು ಆಗಲಿ. ನಂತರ ತಾವು ಮಾತನಾಡುವಿರಂತೆ. ಮಾನ್ಯ ಆಂಜನೇಯರವರೆ, ಕೇವಲ 10 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಹೆಚ್. ಆಂಜನೇಯ(ಭರಮಸಾಗರ): ಮಾನ್ಯ ಅಧ್ಯಕ್ಷರೆ, ತಾವು ಎಲ್ಲರಿಗೂ 20-20 ನಿಮಿಷ ಮಾತನಾಡಲು ಅವಕಾಶ ಕೊಡುತ್ತೀರಿ. First time elect ಆದವರಿಗೆ ತಾವು ದಯವಿಟ್ಟು ಹೆಚ್ಚು ಹೆಚ್ಚು ಮಾತನಾಡಲು ಅವಕಾಶ ಕೊಡಬೇಕು.

ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಒಂದು ಸ್ವತಂತ್ರ್ಯ ಸಂಗ್ರಾಮದ ಕರ್ಮಭೂಮಿ. ಇಂತಹ ಒಂದು ಪವಿತ್ರ ಭೂಮಿಯಲ್ಲಿ ಇವತ್ತು ಸಮ್ಮಿಶ್ರ ಸರ್ಕಾರ ತನ್ನ ನೇತೃತ್ವದಲ್ಲಿ ವಿಶೇಷ ಅಧಿವೇಶನವನ್ನು ಏರ್ಪಡಿಸುವುದರ ಮೂಲಕ ಈ ಗಡಿಭಾಗದಲ್ಲಿ ಇರತಕ್ಕಂತಹ ಕನ್ನಡಿಗರಲ್ಲಿ ಒಂದು ಆತ್ಮವಿಶ್ವಾಸವನ್ನು ಮೂಡಿಸತಕ್ಕಂಥ ಕೆಲಸವನ್ನು ಮಾಡಿದೆ. ಬರೇ ಅಷ್ಟೇ ಅಲ್ಲ, ಈ ಭಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ಆಗಿಲ್ಲ ಎನ್ನತಕ್ಕಂಥ ಒಂದು ಕೂಗು ಏನಿತ್ತು, ಆ ಕೂಗಿಗೆ ಇವತ್ತು ಸರ್ಕಾರ ಸ್ಪಂದಿಸಿ ಬೆಳಗಾವಿಯನ್ನು ಎರಡನೇ ರಾಜಧಾನಿಯನ್ನಾಗಿ ಮಾಡಿದೆ. ಸಮ್ಮಿಶ್ರ ಸರ್ಕಾರದ ಸಾಧನೆಯಲ್ಲಿ ಇದೊಂದು ಮೈಲಿಗಲ್ಲು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮಾನ್ಯ ಕುಮಾರಸ್ವಾಮಿಯವರ ನೇತೃತ್ವ ಮತ್ತು ಮಾನ್ಯ ಯಡಿಯೂರಪ್ಪನವರ ನೇತೃತ್ವ, ಭಲೇ ಜೋಡಿಗಳ ನೇತೃತ್ವ ಇವತ್ತು ಈ ಸರ್ಕಾರ ರಾಜ್ಯದ ಎಲ್ಲಾ ಭಾಗದ ಜನರ ಅಸಮತೋಲನ ಏನಿತ್ತೋ, ಅದನ್ನು ಸಮತೋಲನ ಮಾಡಲಿಕ್ಕೆ ಶಕ್ತಿಮೀರಿ ಶ್ರಮಿಸುತ್ತಿದೆ. ಈ ಸರ್ಕಾರಕ್ಕೆ ನಾನು ಹೃತ್ಪೂರ್ವಕವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಇವತ್ತು ಈ ಜಿಲ್ಲೆಯ ಮಂತ್ರಿಗಳು ಮತ್ತು ಶಾಸಕರು ಎಲ್ಲರೂ ಕೂಡಿ, ಅದರಲ್ಲೂ ವಿಶೇಷವಾಗಿ ಕೆ.ಎಲ್.ಇ. ಸೊಸೈಟಿಯ ಮಾನ್ಯ ಪ್ರಭಾಕರ ಕೋರೆಯವರು ಇವತ್ತು ಬಹಳ ಒಳ್ಳೆಯ ವ್ಯವಸ್ಥೆಯನ್ನು ಮಾಡಿ ಈ ಅಧಿವೇಶನವನ್ನು ನಡೆಯಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೂ ಕೂಡ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಾನು ಬರಗಾಲಪೀಡಿತ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಯಿಂದ ಬಂದಿರತಕ್ಕಂಥವನಾಗಿದ್ದೇನೆ. ಒಂದು ಸಮೀಕ್ಷೆ ಪ್ರಕಾರ ಚಿತ್ರದುರ್ಗ ಜಿಲ್ಲೆ 104 ವರ್ಷಗಳಲ್ಲಿ 64 ಬಾರಿ ಭಾಗಶಃ ಬರಗಾಲವನ್ನು ಎದುರಿಸಿದೆ, 30 ವರ್ಷಗಳ ಕಾಲ ತೀವ್ರ ಬರಗಾಲವನ್ನು ಎದುರಿಸಿದೆ. ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಸರ್ಕಾರ ಬರಗಾಲಪೀಡಿತ ಪ್ರದೇಶವೆಂದು ಸಾರಿದೆ. ಈ ಒಂದು ಪ್ರದೇಶದಲ್ಲಿ ಏನಾಗಿದೆ ಎಂದರೆ, ಇವತ್ತು ಮುಂಗಾರಿನ ಆರಂಭದ ಮಳೆ ಬಹಳ ಚೆನ್ನಾಗಿ

ಬಂತು. ಎಲ್ಲಾ ಕೆರೆ ಕಟ್ಟೆಗಳೂ ಸಹ ತುಂಬುತ್ತವೆ ಎನ್ನುವಂತಹ ಭರವಸೆಯನ್ನು ಮಳೆ ಮೂಡಿಸಿತು. ಆ ಮಳೆಯನ್ನು ನಂಬಿ ನಮ್ಮ ಭಾಗದ ರೈತರೆಲ್ಲರೂ ಕೂಡ ಇವತ್ತು ಮೆಕ್ಕೆಜೋಳವನ್ನು ಬೆಳೆದರು. ಮೆಕ್ಕೆಜೋಳ ಇನ್ನೇನು ಕೈಗೆ ಬರುತ್ತದೆ ಎನ್ನುವಂತಹ ಕನಸನ್ನು ಹೊತ್ತಂಥ ಸಂದರ್ಭದಲ್ಲಿ ಮಳೆ ಬರಲಿಲ್ಲ. ಮಳೆ ಬಾರದಿರುವುದರಿಂದ ಇವತ್ತು ನಮ್ಮ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಬಿತ್ತಿದಂತಹ ಮೆಕ್ಕೆಜೋಳ ಸಂಪೂರ್ಣವಾಗಿ ಒಣಗಿ ಹೋಗಿದೆ. ಇವತ್ತು ರೈತರು ಬೀದಿಪಾಲಾಗಿದ್ದಾರೆ. ರೈತರು ಇವತ್ತು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಆದ್ದರಿಂದ ತಾವು ರೈತರ ಆತ್ಮಹತ್ಯೆಯನ್ನು ನಿಲ್ಲಿಸಬೇಕು. ಈಗೇನು ಮಳೆ ಬಾರದೆ ಬೆಳೆಗಳೆಲ್ಲಾ ಒಣಗಿ ಹೋಗಿ ನಷ್ಟಕ್ಕೆ ಮತ್ತು ಸಂಕಷ್ಟಕ್ಕೆ ಈಡಾಗಿದ್ದಾರೆ, ಆ ರೈತರ ಸಂಕಷ್ಟಕ್ಕೆ ಈ ಸರ್ಕಾರ ಸ್ಪಂದಿಸಬೇಕು. ಇವತ್ತು ಮಳೆ ಬಾರದೆ ಹಾನಿಯಾದ ಮತ್ತು ಸುಟ್ಟು ಹೋಗಿರತಕ್ಕಂಥ ಬೆಳೆ ಏನಿದೆ, ಅದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಂದು ವಿಶೇಷವಾದಂತಹ ಯೋಜನೆಯನ್ನು ಮಾಡಿ ಅವರಿಗೆ ಬೆಳೆ ಪರಿಹಾರ ನೀಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಆಗ್ರಹಪಡಿಸುತ್ತೇನೆ. ಜೊತೆಗೆ ಈ ತಿಂಗಳು 3ನೇ ತಾರೀಖು ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಅಧಿದೇವತೆ ಶ್ರೀಮತಿ ಸೋನಿಯಾಗಾಂಧಿಯವರು ಬಂದು, ಶ್ರೀಮಾನ್ ಸಿದ್ಧರಾಮಯ್ಯನವರನ್ನು ಕಾಂಗ್ರೆಸ್ ಮನೆ ತುಂಬಿಸಿಕೊಳ್ಳತಕ್ಕಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸರಿಯಾಗಿ ಅನುಷ್ಠಾನಕ್ಕೆ ತರುತ್ತಿಲ್ಲ ಎನ್ನುವಂತಹ ಅಸಮಾಧಾನವನ್ನು ವ್ಯಕ್ತಪಡಿಸಿ ಹೋಗಿದ್ದಾರೆ. ಆದರೆ ನನ್ನ ಜಿಲ್ಲೆಯಲ್ಲಿ.....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಆಂಜನೇಯರವರೇ, ಆತ್ಮಹತ್ಯೆಯನ್ನು ನಿಲ್ಲಿಸುವುದು ಯಾವ ರೀತಿ?

ಶ್ರೀ ಹೆಚ್. ಆಂಜನೇಯ: ಪರಿಹಾರಗಳನ್ನು ಕೊಡುವುದರ ಮೂಲಕ, ಅವರಿಗೆ....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಆತ್ಮಹತ್ಯೆಗಳನ್ನು ನಿಲ್ಲಿಸುವುದು ಯಾವ ರೀತಿ?

ಶ್ರೀ ಹೆಚ್. ಆಂಜನೇಯ: ನಮ್ಮ ಜಿಲ್ಲೆಯಲ್ಲಿ ಬಂದು ನೋಡಿದರೆ ಗೊತ್ತಾಗುತ್ತದೆ ಸಾರ್. ನಮ್ಮಲ್ಲಿ ಬೆಳೆಯೆಲ್ಲಾ ಒಣಗಿ ಹೋಗಿದೆ, ರೈತರೆಲ್ಲಾ ಕಂಗಾಲಾಗಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈಗೇನು ತಾವು ಆರು ಜಿಲ್ಲೆಗಳನ್ನು ಗುರುತಿಸಿ ಕೊಟ್ಟಿದ್ದೀರಿ. ಅದರಲ್ಲಿ ಚಿತ್ರದುರ್ಗ ಜಿಲ್ಲೆಯೂ ಕೂಡ ಬಂದು. ಚಿತ್ರದುರ್ಗ ಜಿಲ್ಲೆಗಾಗಿ 23 ಕೋಟಿ ರೂ.ಗಳು ಕೇಂದ್ರದಿಂದ ಹಣ

ಬಂದಿತು. ಆ ಹಣದಲ್ಲಿ ಏಪ್ರಿಲ್‌ನಿಂದ ಆಗಸ್ಟ್‌ರವರೆಗೂ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಉದ್ಯೋಗವನ್ನು ಮಾಡಿದ್ದಾರೆ, ಕೂಲಿಯನ್ನು ಮಾಡಿದ್ದಾರೆ. ಅಲ್ಲಿ ಇವತ್ತು ಯಾವ ರೀತಿಯಲ್ಲಿ ಕೂಲಿ ಕೆಲಸವಾಗಿದೆ ಎಂದರೆ, ನಮ್ಮಲ್ಲಿ ಎಲ್ಲಾ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ, ಇಂಗು ಗುಂಡಿಗಳನ್ನು ನಿರ್ಮಾಣ ಮಾಡಿದ್ದಾರೆ, ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ, ದೊಡ್ಡ ದೊಡ್ಡ ಹೊಂಡಗಳನ್ನು ನಿರ್ಮಾಣ ಮಾಡಿದ್ದಾರೆ. ಇವತ್ತು ಅಂರ್ಜಲ ವೃದ್ಧಿಯಾಗಲಿಕ್ಕೆ ಬೇಕಾದಂತಹ ಎಲ್ಲಾ ಸೌಕರ್ಯಗಳನ್ನು ಈ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜನರಿಂದ ಕೆಲಸವನ್ನು ಅಲ್ಲಿನ ಜಿಲ್ಲಾಡಳಿತ ಮಾಡಿಸಿದೆ. ಈಗ ಏನಾಗಿದೆ ಎಂದರೆ, 23 ಕೋಟಿ ರೂ.ಗಳು ಆಗಸ್ಟ್ ತಿಂಗಳಿನಲ್ಲಿ ಮುಗಿದು ಹೋಯಿತು. ಈಗ ನಮ್ಮ ಜಿಲ್ಲೆಯ ಆಡಳಿತ 63 ಕೋಟಿ ರೂ.ಗಳು ಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ಒಂದೂವರೆ ತಿಂಗಳಾಯಿತು. ಒಂದೂವರೆ ತಿಂಗಳಿನಿಂದಲೂ ಕೂಡ ಕೇಂದ್ರ ಸರ್ಕಾರ ಇವತ್ತು ಹಣವನ್ನು ಬಿಡುಗಡೆ ಮಾಡಲಿಕ್ಕೆ ಮುಂದಾಗಲೇ ಇಲ್ಲ. ಆದ್ದರಿಂದ ನಮ್ಮ ನಾಯಕರಾಗಿರತಕ್ಕಂಥ ಶ್ರೀಮಾನ್ ಧರ್ಮಸಿಂಗ್‌ರವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿ, ನಮ್ಮ ಜಿಲ್ಲೆಯಲ್ಲಿ ಇವತ್ತೇನು ತೀವ್ರ ಬರಗಾಲ ಇದೆ.....

ಶ್ರೀ ಎನ್.ಎಸ್. ಬೋಸರಾಜ್: ಒಂದು ನಿಮಿಷ. ಅವರಿಗೆ ಸರಿಯಾಗಿ ತಿಳುವಳಿಕೆಯಾಗಲಿ. ಕೇಂದ್ರ ಸರ್ಕಾರ ನೇರವಾಗಿ ಚಿತ್ರದುರ್ಗ ಜಿಲ್ಲೆಗೆ, ರಾಯಚೂರು ಜಿಲ್ಲೆಗೆ ಅಥವಾ ಗುಲ್ಬರ್ಗ ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ರಾಜ್ಯ ಸರ್ಕಾರಕ್ಕೆ ಈಗಾಗಲೇ ಸಾಕಷ್ಟು 2nd instalment ಅನ್ನು ಬಿಡುಗಡೆ ಮಾಡಿದ್ದಾರೆ. ಸಾಕಷ್ಟು ಹಣ ಇವತ್ತು ನಾಲ್ಕೂ ಜಿಲ್ಲೆಗಳಲ್ಲಿ ಇದೆ. ಅವರ ಜಿಲ್ಲೆಯಲ್ಲಿ ಮಾತ್ರ ಹಣ ಖರ್ಚಾಗಿದೆ. ರಾಜ್ಯ ಸರ್ಕಾರದ ಬಳಿಯೂ ಕೂಡ NREG ನಲ್ಲಿ ಬರತಕ್ಕಂಥ ಹಣ ಇದೆ ಎಂಬ ಮಾತನ್ನು ಅವರು ತಿಳಿದುಕೊಳ್ಳಬೇಕು.

(ಅಡಚಣೆ)

ಶ್ರೀ ಹೆಚ್. ಆಂಜನೇಯ: .... ಚಿತ್ರದುರ್ಗ ಜಿಲ್ಲೆಯಲ್ಲಿ ಇಲ್ಲ. 1 ಲಕ್ಷ ಕುಟುಂಬಗಳು....

ಶ್ರೀ ಬಂಡೆಪ್ಪ ಕಾಶಂಪೂರ್: ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಏನು ಕೇಂದ್ರ ಸರ್ಕಾರ ಆರು ಜಿಲ್ಲೆಗಳನ್ನು ಪರಿಗಣಿಸಿದೆ, ಅವುಗಳಿಗೆ Special Package ಕೊಡುತ್ತೇನೆ ಎಂದು ಹೇಳಿತ್ತು. ಆ Package ನಲ್ಲಿ ದುಡ್ಡು ಬಂದಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎನ್.ಎಸ್. ಬೋಸರಾಜ್: ಅದು ಬೇರೆ, ಇದು ಬೇರೆ.

ಶ್ರೀ ಬಂಡೆಪ್ಪ ಕಾಶಂಪೂರ್: ರಾಜ್ಯ ಸರ್ಕಾರದಿಂದ 6903 ಕೋಟಿ ರೂ.ಗಳಿಗೆ ನಾವು estimation ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಲ್ಲಿ ಯಾವುದೂ ದುಡ್ಡು ಬಂದಿಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎನ್.ಎಸ್. ಬೋಸರಾಜ್: ಅದು ಬೇರೆ, ಇದು ಬೇರೆ. NREGಗೂ ಅದಕ್ಕೂ ಸಂಬಂಧವಿಲ್ಲ.....

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಚಿತ್ರದುರ್ಗ ಜಿಲ್ಲೆಗೆ ಈ ಮೊದಲು ಬಿಡುಗಡೆ ಮಾಡಿರುವಂತಹ ಹಣ ಸಂಪೂರ್ಣವಾಗಿ ಖರ್ಚಾಗಿದೆ. ಖರ್ಚಾಗಲಿಕ್ಕೆ ಕಾರಣವೇನೆಂದರೆ ಅಲ್ಲಿ ಅತ್ಯುತ್ತಮವಾಗಿ ಕೆಲಸಗಳು ನಡೆಯುತ್ತಿವೆ. ಚಿತ್ರದುರ್ಗದ ಬಹುತೇಕ ತಾಲ್ಲೂಕುಗಳಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಹಣ ಪೂರ್ತಿ ಖರ್ಚಾಗಿದೆ. ಇದರ ಜೊತೆಗೆ ಅಲ್ಲಿ ಸಮಸ್ಯೆ ಏನು ಸೃಷ್ಟಿಯಾಗಿದೆ ಎಂದರೆ, 100 ದಿನಗಳು ಆದಮೇಲೆ ಆ ಕುಟುಂಬಕ್ಕೆ ಮತ್ತೆ ಕೆಲಸ ಕೊಡಲಿಕ್ಕೆ ಈಗಿರುವಂತಹ ಕಾನೂನಿನಲ್ಲಿ ಅವಕಾಶವಿಲ್ಲ. ಆದರೆ ಹಣದ ಕೊರತೆಯಿಲ್ಲ. ಮತ್ತೆ ಈಗ 50 ಕೋಟಿ ರೂಪಾಯಿಗಳ ಹಣ ಬಿಡುಗಡೆಯಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಆಂಜನೇಯವರೆ, ಸಮಯವಾಯಿತು. ಬೇಗ ಮುಗಿಸಿ.

ಶ್ರೀ ಹೆಚ್.ಆಂಜನೇಯ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಒಂದು ಲಕ್ಷ ಕುಟುಂಬಗಳು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ್ದಾರೆ. ಒಂದು ತಿಂಗಳಿನಿಂದ ಅವರಿಗೆ ಕೂಲಿ ಕೊಟ್ಟಿಲ್ಲ. ಆ ಕೂಲಿಗೋಸ್ಕರ ಜನ ಪ್ರತಿನಿತ್ಯ ಜಿಲ್ಲಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯಿತಿಯ ಕಛೇರಿಗಳಿಗೆ ಅಲೆದಾಡುತ್ತಿದ್ದಾರೆ. ಕೂಡಲೇ ಅವರಿಗೆ ಹಣ ಕೊಡಿಸತಕ್ಕಂಥ ಕೆಲಸವನ್ನು ಮಾಡಬೇಕು. ಈಗೇನು ಇದಕ್ಕೆ 100 ದಿನಗಳು ಎಂದು ನೀವು ನಿಗದಿ ಮಾಡಿದ್ದೀರೋ, ಕೇವಲ 100 ದಿನಗಳಲ್ಲಿ ಎಲ್ಲಿಯವರೆಗೆ ಬರಗಾಲ ಇರುತ್ತದೋ ಅಲ್ಲಿಯವರೆಗೂ ಉದ್ಯೋಗ ಕೊಡತಕ್ಕಂಥ ಒಂದು ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡಬೇಕು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, 100 ದಿನಗಳಿಗೆ ಸೀಮಿತಗೊಳಿಸಿರುವುದನ್ನು ರದ್ದುಪಡಿಸಿ

ಎಂದು ಮಾನ್ಯ ಸದಸ್ಯರು ಕೋರಿಕೆ ಸಲ್ಲಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಇದಕ್ಕಾಗಿ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಮತ್ತು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆ. ಇಡೀ ದೇಶಕ್ಕೆ ಅನ್ವಯಿಸುವಂತಹ ಕಾನೂನು ಈಗ ಇದೆ. ಆದರೆ ಇವತ್ತು ಬಂದಿರುವಂತಹ ಬರಗಾಲದ ಪರಿಸ್ಥಿತಿಯಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರ ಮರುಪರಿಶೀಲಿಸಬೇಕೆಂದು ನಮ್ಮ ಇಲಾಖೆಯಿಂದ ಈಗಾಗಲೇ ಮನವಿಯನ್ನು ಸಲ್ಲಿಸಿದ್ದೇವೆ. ಅದಕ್ಕೆ ಶೀಘ್ರದಲ್ಲೇ ಪರಿಹಾರ ದೊರೆಯಬಹುದು ಎನ್ನುವಂತಹ ನಿರೀಕ್ಷೆಯಲ್ಲಿದ್ದೇವೆ.

ಶ್ರೀ ಹೆಚ್. ಆಂಜನೇಯ: ಒಂದು ಲಕ್ಷ ಕುಟುಂಬಗಳು ಕೆಲಸ ಮಾಡಿವೆ. 100 ದಿನಗಳಲ್ಲಿ 29 ದಿವಸಗಳು ಮಾತ್ರ ಕೆಲಸ ಮಾಡಿದ್ದಾರೆ. ಬರೇ 29 ದಿವಸಗಳಲ್ಲಿ ಸುಮಾರು 23 ಕೋಟಿ ರೂಪಾಯಿಗಳು ಪೂರ್ಣವಾಗಿ ಈಗಾಗಲೇ ಖರ್ಚಾಗಿದೆ. ಅದರ ಜೊತೆಗೆ ಕೂಲಿಗಾಗಿ ಕಾಳು ಯೋಜನೆಯ ಬಾಕಿ ಹಣ 7 ಕೋಟಿ ರೂ.ಗಳು ಇತ್ತು. ಅದನ್ನೂ ಕೂಡ ನಮ್ಮ ಜಿಲ್ಲೆಯಲ್ಲಿ ಖರ್ಚು ಮಾಡಿದ್ದಾರೆ. ಆದ್ದರಿಂದ ಕೂಡಲೇ ಹಣ ಬಿಡುಗಡೆ ಮಾಡಬೇಕು. ಈಗಾಗಲೇ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು 50 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಯೆಂದು ಹೇಳಿದ್ದಾರೆ. ಆದರೆ ಅದು ನಮ್ಮ ಜಿಲ್ಲೆಗೋ ಅಥವಾ ಇಡೀ ರಾಜ್ಯಕ್ಕೋ ಎಂಬುದು ನಮಗೆ ಗೊತ್ತಾಗಲಿಲ್ಲ. ನಮ್ಮ ಜಿಲ್ಲೆಗೇ ಎಂದು ಮಾನ್ಯ ಸಚಿವರು ಕೈ ನನ್ನ ಕಡೆ ಕೈ ತೋರಿಸಿ ಹೇಳುತ್ತಿದ್ದಾರೆ. ಬಹಳ ಸಂತೋಷ.

ಶ್ರೀ ಎನ್.ಎಸ್. ಭೋಸರಾಜ್: ಕೇಂದ್ರ ಸರ್ಕಾರದ್ದು 50 ಕೋಟಿ ರೂಪಾಯಿ ಐವತ್ತು ಮತ್ತು ಇಪ್ಪತ್ಮೂರು, ಒಟ್ಟು ಎಪ್ಪತ್ಮೂರು ಕೋಟಿಯಾಯಿತು.

ಶ್ರೀ ಹೆಚ್. ಆಂಜನೇಯ: ರಾಜ್ಯ ಸರ್ಕಾರದ ಪಾಲೂ 10 ಪರ್ಸೆಂಟ್ ಇದೆ. ಇದೆ ಸ್ವಾಮಿ, ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರದ ಪಾಲೂ ಕೂಡ....

ಶ್ರೀ ಎನ್.ಎಸ್. ಭೋಸರಾಜ್: ಕೇಂದ್ರ ಸರ್ಕಾರ ಕೊಟ್ಟಿದೆ.

ಶ್ರೀ ಹೆಚ್. ಆಂಜನೇಯ: ಆಯಿತು ಸಾರ್, ಬಹಳ ಒಳ್ಳೆಯದು, ಕೇಂದ್ರ ಸರ್ಕಾರಕ್ಕೆ ನಾವು ಅಭಿನಂದಿಸುತ್ತೇವೆ. ಉದ್ಯೋಗ ಖಾತರಿ ಯೋಜನೆಯನ್ನು ತಂದಿದ್ದೀರಲ್ಲಾ, ಅದು ಬಹಳ ಒಳ್ಳೆಯದು.

ಅಧ್ಯಕ್ಷರು: ಆಂಜನೇಯರವರೆ, ನೀವು ಬೇಗ ಮುಗಿಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವ ಮಾತಿನ ಅಭಿಪ್ರಾಯ ಹೇಗಾಗುತ್ತದೆಂದರೆ ಯಾರು ಬರಗಾಲದ ದವಡೆಗೆ ಸಿಕ್ಕಿ ನರಳುತ್ತಿದ್ದಾರೆ, ಅವರೆಲ್ಲಾ ಈಗಾಗಲೇ ಕೆಲಸವನ್ನು ಮಾಡಿಬಿಟ್ಟಿದ್ದಾರೆ. ಅವರಿಗೆ ಹಣ ಬಂದಿಲ್ಲ. ಅಂದರೆ ಬರಗಾಲ ಅಂದರೆ ಕೆಲಸ ಕೊಡುವುದೇ ಅವರ

ಹೊಟ್ಟೆಗಿರುವುದಿಲ್ಲ, ಅವೊತ್ತಿಗೆ ಅವರಿಗೆ ಊಟ ಸಿಗುವುದಕ್ಕಾಗಿ. ಈಗಾಗಲೇ ಅವರು ಕೆಲಸವನ್ನು ಮಾಡಿದ್ದಾರೆ. ಆದರೆ ಅವರಿಗೆ ಹಣ ಬಂದಿಲ್ಲ. ಮಂತ್ರಿಗಳು ಹೇಳುತ್ತಾರೆ.... ಏನು ಕಾಂಟ್ರ್ಯಾಕ್ಟಾ ಅಥವಾ......

ಶ್ರೀ ಹೆಚ್. ಆಂಜನೇಯ: ಇಲ್ಲಾ. ಇಲ್ಲಾ, ಕೂಲಿ ಮಾಡಿದ್ದಾರೆ ಸಾರ್ ಒಂದು ಲಕ್ಷ ಕುಟುಂಬಗಳು. ಕೂಲಿ ಮಾಡಿದ್ದರೂ....

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇಲ್ಲಿ ಕೇಳಿ. ಕೂಲಿ ಮಾಡಿದರೆ ಅವರು ಹೊಟ್ಟೆಗೆ ಇಲ್ಲದವರು. ಅವರಿಗೆ ಆವೊತ್ತಿಗೆ ನೀವು ನಾಲ್ಕು ಕಾಸು ಕೊಟ್ಟರೆ ಅದನ್ನು ತೆಗೆದುಕೊಂಡು ಅಂಗಡಿಗೆ ಹೋಗಿ ದವಸ ಧಾನ್ಯ ತೆಗೆದುಕೊಂಡು ಅಡಿಗೆ ಮಾಡಿಕೊಂಡು ತಿಂದು ಬದುಕುವಂಥವರುಗಳು ಅವರು. ಆದರೆ ನೀವು ಅದನ್ನು ಕೊಡಲೇ ಇಲ್ಲ.

ಶ್ರೀ ಹೆಚ್.ಆಂಜನೇಯ: ನಾನು ಹೇಳುವುದೇನೆಂದರೆ.....

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕೂಲಿಯವರೂ ಸಾಲ ಮಾಡಿದ್ದಾರೆಯೆ?

ಅಧ್ಯಕ್ಷರು: ರಮೇಶ್‌ಕುಮಾರ್‌ರವರೆ, ಅವರು ಇಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದಾರೆ ಬಿಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅಲ್ಲ, ಅವರು ಹೇಳುವುದು, ಇವರು ಹೇಳುವುದು, ಅಧ್ಯಕ್ಷರೆ, ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಎಸ್‌ಜೆಆರ್‌ವೈ, ಇಎಎಸ್, ಹೀಗೆ ಅನೇಕ ಹೆಸರುಗಳನ್ನು ನೀವೆಲ್ಲಾ ಪಡೆದುಕೊಂಡು ಬಂದರೂ ಕೂಡ ಅಲ್ಟಿಮೇಟ್ಲಿ ಗ್ರಾಸ್‌ರೂಟ್ ಲೆವೆಲ್‌ಗೆ ಬಂದಾಗ ಇದು ಕಾಂಟ್ರ್ಯಾಕ್ಟ್ ಸಿಸ್ಟಂ. ನಿಮ್ಮ ಜೆ.ಇ.ಗಳು they are powerful. That is how it is happening. ಸುಮ್ಮನೇ ಸುತ್ತಿ ಬಳಸಿ, ಫಿಗರ್ಸ್ ಕೊಟ್ಟರೆ ಪ್ರಯೋಜನ ಏನು? ನಾವು ಅಲ್ಲಿದ್ದು ಅನುಭವಿಸುವವರನ್ನು ನಾವು ಅಲ್ಲಿ ನೋಡುತ್ತೇವೆ.

ಶ್ರೀ ಹೆಚ್. ಆಂಜನೇಯ: ಸಾರ್, ಜನ ಈಗ ಬಹಳ ಹುಷಾರಾಗಿಬಿಟ್ಟಿದ್ದಾರೆ. ಸಾರ್. ಜನ ಬಹಳ ಜಾಗೃತರಾಗಿದ್ದಾರೆ. ಮಂತ್ರಿಗಳೇ, ನೀವು ಬನ್ನಿ.....

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಂತ್ರಿಗಳೇ ನೀವು ಬನ್ನಿ, ಒಂದು ಟೀಂ ಕಳುಹಿಸಿ, ಯಾವ ಊರಿಗೆ ಬೇಕಾದರೂ ಒಂದು ಸರ್‌ಪ್ರೈಸ್ ಇನ್ಸ್‌ಪೆಕ್ಷನ್ ಮಾಡೋಣ. ಅದರ ಬಂಡವಾಳ ಗೊತ್ತಾಗುತ್ತದೆ.

ಶ್ರೀ ಹೆಚ್. ಆಂಜನೇಯ: ಬರ್‍ರೀ, ನಮ್ಮ ಕಡೆಗೆ ಬನ್ನಿ ಬೇಕಾದರೆ,

ಅಧ್ಯಕ್ಷರು: ಆಯಿತು, ಆಯಿತು, ಈಗ ಬೇಗ ಮಾತನಾಡಿ ಮುಗಿಸಿ ಆಂಜನೇಯರವರೆ,

ಶ್ರೀ ಹೆಚ್.ಆಂಜನೇಯ: ಮಾನ್ಯ ಅಧ್ಯಕ್ಷರೆ, ಉದ್ಯೋಗ ಖಾತರಿ ಯೋಜನೆ ಬಹಳ ಯಶಸ್ವಿಯಾಗುತ್ತಿದೆ. ನೀವು ಬಂದು ಬೇಕಾದರೆ ನೋಡಿ. ನಮ್ಮ ಜಿಲ್ಲೆಯಲ್ಲಿ ಏನೇನು ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ನೀವು ಬಂದು ನೋಡಬಹುದು.

ಶ್ರೀ ಆಲಂಗೂರು ಶ್ರೀನಿವಾಸ್: ಅವರ ಕ್ಷೇತ್ರದಲ್ಲಿ ಏನು ನಡೆಯುತ್ತಿದೆಯೋ ಅಲ್ಲಿಂದ ಪ್ರಾರಂಭವಾಗಲಿ. ಅವರ ಕ್ಷೇತ್ರದಲ್ಲಿ ಯಾವ ರೀತಿ ಅಳವಡಿಸಿಕೊಂಡಿದ್ದಾರೆ ನೋಡಿ ಅದರಂತೆ ನಮ್ಮಲ್ಲೂ ಅಳವಡಿಸಿಕೊಂಡು ಪಾಲನೆಯನ್ನು ಮಾಡೋಣ.

ಶ್ರೀ ಹೆಚ್.ಆಂಜನೇಯ: ಮಾನ್ಯ ಅಧ್ಯಕ್ಷರೆ, ಬರಗಾಲ ಪೀಡಿತ ಜಿಲ್ಲೆ ಏನಿದೆ, ಈ ಜಿಲ್ಲೆಗೆ ಶಾಶ್ವತವಾದಂಥ ಒಂದು ಪರಿಹಾರವನ್ನು ಸರ್ಕಾರ ಮಾಡಬೇಕಾಗುತ್ತದೆ. ಕಳೆದ ಸರ್ಕಾರ ಏನು ಅಪ್ಪರ್ ಭದ್ರಾವನ್ನು ಈ ಜಿಲ್ಲೆಗೆ ತರುತ್ತೇವೆಂದು ಹೇಳಿದ್ದರು, ಈಗಿನ ಸರ್ಕಾರ ಕಳೆದ ಸರ್ಕಾರ ಮಾನ್ಯ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ಅಪ್ಪರ್ ಭದ್ರಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವ ಯಾವ ತೊಂದರೆ ಇದೆ, ಟೆಕ್ನಿಕಲ್ ಆಗಿ ಏನು ಮಾಡಬಹುದು ಎಂಬುದನ್ನು ವರದಿ ಮಾಡಲು ಒಂದು ಆಯೋಗವನ್ನು ನೇಮಿಸಿತ್ತು. ಈಗಾಗಲೇ ಮಾನ್ಯ ಕೆ.ಸಿ.ರೆಡ್ಡಿಯವರು ನೀರಾವರಿ ಮಾಡಬಹುದು ಎಂದು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಆದುದರಿಂದ ನಾಲ್ಕೈದು ಜಿಲ್ಲೆಗೆ ಅಪ್ಪರ್ ಭದ್ರಾದಿಂದ ನೀರನ್ನು ತಂದು ನೀರುಣಿಸಬಹುದು ಎನ್ನುವ ವರದಿಯನ್ನು ಕೊಟ್ಟಿರುವುದರಿಂದ ಸರ್ಕಾರ ಕೂಡಲೇ ಮಾನ್ಯ ಕೆ.ಸಿ.ರೆಡ್ಡಿಯವರ ವರದಿಯನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಅಪ್ಪರ್ ಭದ್ರಾ ನೀರನ್ನು ಚಿತ್ರದುರ್ಗ ಜಿಲ್ಲೆಗೆ ತಂದು ಏನು ಬಹಳ ವರ್ಷಗಳಿಂದ ಬರಗಾಲದ ಮತ್ತು ಬಡತನದ ಮತ್ತು ಸಾವು ಬದುಕಿನ ದವಡೆಯಲ್ಲಿ ನರಳತಕ್ಕಂಥ ಈ ಜಿಲ್ಲೆಯ ಜನರಿಗೆ ಒಂದು ಶಾಶ್ವತವಾದಂಥ ಪರಿಹಾರವನ್ನು ಕಲ್ಪಿಸತಕ್ಕಂತ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಈ ಸಮ್ಮಿಶ್ರ ಪ್ರದರ್ಶಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹಪಡಿಸುತ್ತಿದ್ದೇನೆ. ಇನ್ನು ಮತ್ತೊಂದು ಪ್ರಮುಖವಾದ ವಿಷಯವನ್ನು ಈ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಬ್ಯಾಕ್‌ಲಾಗ್ ಹುದ್ದೆಗಳನ್ನು,,,,

ಅಧ್ಯಕ್ಷರು: ನೀವು ಬರದ ಬಗ್ಗೆ ಮಾತನಾಡಿ, ಸುಮ್ಮನೇ ನೀವು ಈ ಸಮಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಎಂದು ಚರ್ಚೆಯನ್ನು ಎಲ್ಲಿಂದ ಎಲ್ಲಿಗೋ ಎಳೆಯಬೇಡಿ. ಬರಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಹೆಚ್.ಆಂಜನೇಯ: ಮಾನ್ಯ ಅಧ್ಯಕ್ಷರೆ, ಅದು ಒಂದು ನಮೂನೆಯ ಬರವೇ ಆಗಿದೆ. ಬಡವರು, ದಲಿತರು, ಹಿಂದುಳಿದವರು, ಶೋಷಿತರೂ ಕೂಡ ಇವೊತ್ತಿಗೂ ಹುದ್ದೆಗಳನ್ನು ತುಂಬದಿರುವುದರಿಂದ ನರಳುತ್ತಿದ್ದಾರೆ. ಬ್ಯಾಕ್‌ಲಾಗ್

ಹುದ್ದೆಗಳನ್ನು ತುಂಬದಿರುವುದೂ ಕೂಡ ಒಂದು ನಮೂನೆಯ ಬರವೇ ಆಗಿದೆ. ವಯೋಮಿತಿ ಮೀರುತ್ತಿದೆ. ಉದ್ಯೋಗದ ನೇಮಕಾತಿಯಲ್ಲಿ ಆಗತಕ್ಕಂಥ ವಿಳಂವನ್ನು ತಪ್ಪಿಸಬೇಕು, ಈಗ ಸರ್ಕಾರದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟಿವೆ ಎಂಬ ಬಗ್ಗೆ ಇಲ್ಲಿಯವರೆವಿಗೂ ಒಂದು ಸರ್ವೆಯನ್ನೂ ಕೂಡ ಮಾಡಿರುವುದಿಲ್ಲ. ಈ ಕೂಡಲೇ ನಮ್ಮ ಉಪ ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಯಡಿಯೂರಪ್ಪನವರು ಈ ಬಗ್ಗ ಮೀಟಿಂಗ್‌ನ್ನು ಮಾಡಬೇಕು. ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಜಾರಕಿಹೊಳೆಯವರು ಈ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ದಲಿತರ ಬಗ್ಗೆ ಸಮಗ್ರವಾದ ಹಿತರಕ್ಷಣೆಯನ್ನು ಕಾಪಾಡುವುದಕ್ಕೋಸ್ಕರವೇ, ಇವೊತ್ತು ಸಮಾಜ ಕಲ್ಯಾಣ ಇಲಾಖೆ ಇರುವುದು. ಒಬ್ಬ ದಕ್ಷ ಯುವಕರ ಕೈಗೆ ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಜಾರಕಿ ಹೊಳೆಯವರೆ, ತಾವು ಈ ಕೂಡಲೇ ಸಭೆಯನ್ನು ಕರೆದು ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳಿವೆ, ಎಲ್ಲಿ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದೆ ಎಂಬುದನ್ನು ನೋಡಿ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಗಡಿ ನಾಡಿನ ಭಾಗವೆಲ್ಲಾ ಅಭಿವೃದ್ಧಿಯಾಗಲಿ, ಗಡಿ ನಾಡಿನಲ್ಲಿರತಕ್ಕಂಥ ಎಲ್ಲಾ ಕನ್ನಡಿಗರೂ ಕೂಡ ಸಮೃದ್ಧಿಯಾಗಿ ಬದುಕಲಿ, ನಮ್ಮ ಕನ್ನಡ ಭಾಷೆ ಇಲ್ಲಿ ಬೆಳೆಯಲಿ ಎನ್ನ ತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ **ಬಾಗೇವಾಡಿ**): ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಪ್ರಾದೇಶಿಕ ಅಸಮಾನತೆಯ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವೊತ್ತು ವಿಶೇಷವಾಗಿ ಉತ್ತರ ಕರ್ನಾಟಕದ ಬಹು ದಿನಗಳ ಬೇಡಿಕೆಯಾಗಿರತಕ್ಕಂಥ ಈ ಅಧಿವೇಶನವನ್ನು ಇಲ್ಲಿ ಮಾಡುವುದರ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಪ್ರಶಂಸೆಗೆ ಪಾತ್ರರಾಗಿದ್ದಾರೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗೆ ಅವರಿಗೆ ಸಿಕ್ಕಿರತಕ್ಕಂಥ ಪ್ರಶಂಸೆ ಕೊನೆಯವರೆಗೂ ಹಾಗೆಯೇ ಮುಂದುವರಿಯಬೇಕೆನ್ನು ಆಸೆ ನಮ್ಮದು. ಏಕೆಂದರೆ ಅವರ ಬಗ್ಗೆ ನನಗೆ ಅಭಿಮಾನವಿದೆಯೆಂದು ಬಹುತೇಕ ನಮ್ಮ ಎಲ್ಲಾ ಹಿರಿಯ ನಾಯಕರಿಗೆ ಗೊತ್ತಿದೆ. ಆದರೆ ಇವೊತ್ತು ಸಭೆಯಲ್ಲಿ ಅವರ ಅನೌಪಸ್ಥಿತಿಯನ್ನು ನೋಡಿದರೆ ನನಗೆ ಅನಿಸುತ್ತದೆ ಭವಿಷ್ಯದಲ್ಲಿ ಅವರು ಎಡವಬಹುದೇನೋ ಎನ್ನತಕ್ಕಂಥ ಅನಿಸಿಕೆಯನ್ನು ನಾನು ಇವೊತ್ತಿನ ದಿವಸ ವ್ಯಕ್ತಪಡಿಸುತ್ತೇನೆ ಏಕೆಂದರೆ ಈ ಸಭೆಯನ್ನು ಅವರು

ಕರೆದಿರತಕ್ಕಂಥ ಉದ್ದೇಶ ಈಡೇರದೇ ಹೋದರೆ ಅಥವಾ ಈ ಭಾಗದ ಶಾಸಕರ ಮತ್ತು ಜನರ ಭಾವನೆಗಳನ್ನು ಅರಿತುಕೊಳ್ಳತಕ್ಕಂಥ ಒಂದು ಅವಕಾಶ ಅವರಿಗೆ ಸಿಕ್ಕಿರತಕ್ಕಂಥದ್ದು ಅವರು ಎಂದೂ ಮರೆಯಬಾರದು ಎಂದು ಪುನಃ ನಾನು ಅವರ ಅನೌಪಸ್ಥಿತಿಯಲ್ಲಿ ಅವರ ಜ್ಞಾಪಕಕ್ಕೆ ತಂದು ನನ್ನ ಮಾತನ್ನು ಮುಂದುವರೆಸುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಉಪಾಧ್ಯಕ್ಷರೆ, ವಿಶೇಷವಾಗಿ ಇವೊತ್ತಿನ ದಿವಸ ಡಾ: ನಂಜುಂಡಪ್ಪನವರನ್ನು ನೆನೆಯದೇ ಹೋದರೆ ತಪ್ಪಾಗುತ್ತದೆ ಮತ್ತು ಅವರನ್ನು ನೇಮಕ ಮಾಡಿದ ಮಾನ್ಯ ಎಸ್.ಎಂ.ಕೃಷ್ಣಾರವರನ್ನೂ ಕೂಡ ನೆನೆಯದೇ ಹೋದರೆ ತಪ್ಪಾಗುತ್ತದೆ. ಅವರು ಮಾಡಿರತಕ್ಕಂಥ ಕಾರ್ಯ ನಿಜವಾಗಿಯೂ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಭವಿಷ್ಯದಲ್ಲಿ ನಾಂದಿಯನ್ನು ಹಾಡಬಹುದೆಂದು ನಾನು ಭಾವಿಸುತ್ತೇನೆ. ಇವೊತ್ತು ಡಾ: ನಂಜುಂಡಪ್ಪನವರ ಜೊತೆ ಉಳಿದಿರತಕ್ಕಂಥ ನಮ್ಮ ಎಸ್.ಎಸ್. ಕಡಪಟ್ಟಿಯವರೂ ಕೂಡ ಈ ಭಾಗದ ಧೀಮಂತ ನಾಯಕರು, ಬಾಗಲಕೋಟೆ ಜಿಲ್ಲೆಯವರು, ಕೂಡ ರೀಜನಲ್ ಇಂಬ್ಯಾಲೆನ್ಸ್ ಮೇಲೆ ವರದಿಯನ್ನು ಈ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರನ್ನೂ ಕೂಡ ನಾನು ನೆನೆಯಬೇಕಾಗುತ್ತದೆ. ಅದು ಯಾವಾಗ ಕಾರ್ಯಗತವಾಗುತ್ತದೆ ಆ ಮಾತು ಬೇರೆ. ಆದರೆ ಇವೊತ್ತು ಅದೇ ತರಹ ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ಗಡಿನಾಡಿನ ವಿಚಾರದಲ್ಲಿ ತಮ್ಮದೇ ಅದಂಥ ಅನಿಸಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಈ ಎಲ್ಲಾ ಹಿನ್ನಲೆಯನ್ನು ಕೇವಲ ಉತ್ತರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಅವರು ಕೊಟ್ಟಿರತಕ್ಕಂಥದ್ದು ಎನ್ನತಕ್ಕಂಥದ್ದು ಎಂಬುದನ್ನು ಈ ಸಭೆಯ ಗಮನಕ್ಕೆ ನಾನು ತರಬಯಸುತ್ತೇನೆ. ಇವೊತ್ತು ಇನ್ನೊಂದು ಪ್ರಮುಖವಾದ ವಿಚಾರವನ್ನು ಸಭೆಯಲ್ಲಿ ಪ್ರತಿಪಾದನೆ ಮಾಡಲು ಇಚ್ಛೆಪಡುತ್ತೇನೆ. ಉತ್ತರ ಕರ್ನಾಟಕದಲ್ಲಿ ಕೇವಲ ಅಭಿವೃದ್ಧಿಯಲ್ಲಿ ಮಾತ್ರ ಅಸಮಾನತೆ ಇಲ್ಲ. ಇಲ್ಲಿ ಪ್ರಾದೇಶಿಕ ನಾಯಕರ ಕೊರತೆ ಕೂಡ ಇದೆಯೆಂದರೆ ಅದು ತಪ್ಪಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಉತ್ತರ ಕರ್ನಾಟಕ ಅಭಿವೃದ್ಧಿಯಾಗಿದೆ ಎನ್ನತಕ್ಕಂಥ ಮಾತನ್ನು ಆಡತಕ್ಕಂಥ ನಾಯಕರು ಯಾವತ್ತು ನಮ್ಮ ಕಣ್ಣಿಗೆ ಗೋಚರಿಸುತ್ತಾರೆಂದರೆ ಅವರ ಹುಟ್ಟು ಹಬ್ಬ ಇರತಕ್ಕಂಥ ವಿಶೇಷವಾಗಿರತಕ್ಕಂಥ ದಿನದಿಂದ ನಾವು ನೋಡುತ್ತೇವೆ. ಅವರ ಬಗ್ಗೆ ಪತ್ರಿಕೆಗಳಲ್ಲಿ ಬರೆದಿರುತ್ತಾರೆ. ಅದನ್ನು ನೋಡಿದರೆ ನಮಗೇ ಆಶ್ಚರ್ಯವಾಗುತ್ತದೆ, ಏನು ಮಾಡುವುದು ಅದನ್ನು ಓದಿ ನಾವು ಸಹಿಸಿಕೊಳ್ಳಬೇಕಾಗುತ್ತದೆ, ಅಲ್ಲಿ ಏನೂ ನಾವು ಮಾತನಾಡುವುದಕ್ಕಾಗುವುದಿಲ್ಲ. ಏಕೆಂದರೆ ಅವರ ಒಂದು advertisement

ನ್ನು ಅವರ ಹುಟ್ಟುಹಬ್ಬದ ದಿವಸದಿಂದ ಪತ್ರಿಕೆಗಳಲ್ಲಿ ಹಾಕಿರುತ್ತಾರೆ. ಉತ್ತರ ಕರ್ನಾಟಕದ ಅಭಿವೃದ್ಧಿಯ ಕನಸುಗಾರ, ಸಹಕಾರಿ ರಂಗದ ಭೀಷ್ಮ ಹಾಗೂ ಉತ್ತರ ಕರ್ನಾಟಕದ ಭಗೀರಥ ಎನ್ನುವ ಇಂಥ ಅನೇಕ ಬಿರುದುಗಳನ್ನು ಕೊಟ್ಟು ಪತ್ರಿಕೆಗಳು ಬಿಂಬಿಸುವುದನ್ನು ನಾವು ಮೇಲಿಂದ ಮೇಲೆ ನೋಡುತ್ತಿರುತ್ತೇವೆ.

ಇದು ನಿಜವಾಗಲೂ ಈ ಪ್ರಶಂಸೆಗೆ ಅರ್ಹರೇ ಎಂದು ಅಂತರಾಳದಿಂದ ಅಳೆದು ನೋಡಿದಾಗ ನಮಗೆ ಕೂಡ ಸ್ವಲ್ಪ ವ್ಯಥೆ ಎನಿಸುತ್ತದೆ. ಯಾರು ಉತ್ತರ ಕರ್ನಾಟಕದ ನಾಯಕರು ಎಂದು ಬರೆದುಕೊಂಡಿರುತ್ತಾರೆ, ಅವರ ಜಿಲ್ಲೆಯಲ್ಲಿ ಸಹಕಾರಿ ಚಳುವಳಿ ಸತ್ತಿರುತ್ತದೆ. ಅವರ ಜಿಲ್ಲೆಯಲ್ಲಿ ನೀರಾವರಿ ಇರುವುದಿಲ್ಲ. ಅವರ ಜಿಲ್ಲೆಯಲ್ಲಿ ಔದ್ಯೋಗಿಕ ಕ್ರಾಂತಿ ಇರುವುದಿಲ್ಲ. ನಿಜವಾಗಲೂ ನಮ್ಮ ಮನಸ್ಸಿಗೆ ನೋವು ತರುತ್ತದೆ. ಆದರೆ ಇವತ್ತು ಉತ್ತರ ಕರ್ನಾಟಕದ ವಿಶೇಷ ಅಧಿವೇಶನ ಇರುವುದರಿಂದ, ಈ ಮಾತನ್ನು ನಾನು ತಮ್ಮ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಭವಿಷ್ಯದಲ್ಲಾದರೂ ನಿಜವಾದಂತಹ ಕಳಕಳಿ ಅವರ ಮನಸ್ಸಿನಲ್ಲಿ ಹೊರಹೊಮ್ಮಲಿ. ಇದು ಟೀಕೆ ಎನ್ನುವ ಮಾತಲ್ಲ, ಅವರು ಇದನ್ನು ತಿಳಿದುಕೊಳ್ಳಬಹುದು ಎಂದು ನಾನು ಭಾವಿಸಿ ಈ ಮಾತನ್ನು ಹೇಳುತ್ತಿದ್ದೇನೆ.

ಒಬ್ಬರು ಮಾನ್ಯ ಸದಸ್ಯರು: ಅವರ ಹೆಸರು ಹೇಳಿ.

ಶ್ರೀ ಶಿವಾನಂದ ಎಸ್ ಪಾಟೀಲ್: ಹೆಸರು ಹೇಳಬಾರದು, ಅವರಿಗೆ ಗೊತ್ತಿರುತ್ತದೆ. ಯಾರ್‍ಯಾರು ಅಡ್ವರ್‌ಟೈಸ್‌ಮೆಂಟ್ ಹಾಕಿಸಿಕೊಂಡಿರುತ್ತಾರೆ, ಹಾಕಿರುತ್ತಾರೆ, ಅವರಿಗೆ ಗೊತ್ತಿರುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ಮಾನ್ಯ ಜಗದೀಶ್ ಶೆಟ್ಟರ್ ಇದ್ದಾರೆ, ಉತ್ತರ ಕರ್ನಾಟಕದ ಅಭಿವೃದ್ಧಿಗೋಸ್ಕರ ತೀಕ್ಷಣವಾಗಿ ಬರೆದಿರತಕ್ಕಂಥ ಏಕೈಕ ವ್ಯಕ್ತಿಯೆಂದರೆ ಮಾನ್ಯ ಪಾಟೀಲ್ ಪುಟ್ಟಪ್ಪನವರು. ಅವರನ್ನು ಈ ಸಂದರ್ಭದಲ್ಲಿ ನೆನೆಸಿದ್ದರೆ ನಿಜವಾಗಿ ಸೂಕ್ತವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಅವರು ಇರುವಾಗ ನಾವು ನೆನೆಸಿದರೆ ಬಹಳ ಒಳ್ಳೆಯದು. ಆದರೆ ಹೋದಮೇಲೆ ನೆನೆಸತಕ್ಕಂಥವರು ಬಹಳ ಜನ ಇರುತ್ತಾರೆ. ನಿಜವಾಗಲೂ ಅವರು ಉತ್ತರ ಕರ್ನಾಟಕದ ಬಗ್ಗೆ ಅವರ ಬರವಣಿಗೆಯಲ್ಲಿ ಅವರ ಕಳಕಳಿಯನ್ನು ಅವರು ವ್ಯಕ್ತಪಡಿಸಿರತಕ್ಕಂಥ ಆಚಾರ ವಿಚಾರಗಳನ್ನು ಗಣನೆಗೆ ತೆಗೆದುಕೊಂಡರೆ ಬಹುಶಃ ನಾವು ಕೃತಘ್ನರಾಗುತ್ತೇವೆಂದು ನಾನು ಈ ಸಂದರ್ಭದಲ್ಲಿ ಆಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾನು ಪ್ರಾದೇಶಿಕ ಅಸಮಾನತೆಯನ್ನು ಪ್ರಾದೇಶಿಕ ನಾಯಕತ್ವದ ಜೊತೆ ಏಕೆ ಹೋಲಿಸಿದೆ ಎಂದು ಬಹಿರಂಗ ಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ನಾನು ಆ ನಾಯಕರು ಈ ನಾಯಕರು ಎಂದು ಆಡುವುದಕ್ಕೆ

ಹೋಗುವುದಿಲ್ಲ. ನಮ್ಮ ನಾಯಕರು ಇಲ್ಲಿ ಇದ್ದಾರೆ. ಪ್ರಾದೇಶಿಕ ನಾಯಕತ್ವ ಕೊರತೆ ಇರುವುದರಿಂದ, ಉತ್ತರ ಕರ್ನಾಟಕ ಹಿಂದೆ ಬಿದ್ದಿದೆ ಎನ್ನುವ ಮಾತನ್ನು ನಾವು ಮರೆಯಬಾರದು. ಏಕೆಂದರೆ ನಮ್ಮ ಉತ್ತರ ಕರ್ನಾಟಕಕ್ಕೆ ಆಗತಕ್ಕಂಥ ಅನ್ಯಾಯವನ್ನು ಆಗಿಂದಾಗ್ಗೆ ಪ್ರತಿಭಟಿಸಿ ಮಾತನಾಡಿದ್ದರೆ, ಪ್ರಾಯಶಃ ನಂಜುಂಡಪ್ಪನವರ ಅವಶ್ಯಕತೆ ನಮಗೆ ಬೀಳುತ್ತಿರಲಿಲ್ಲ ಕಡಪಟ್ಟಿಯವರು ರೀಜನಲ್ ಇಂಬ್ಯಾಲೆನ್ಸ್ ಮೇಲೆ ಕೊಟ್ಟಿರತಕ್ಕಂಥ ವರದಿ ನಮಗೆ ಅವಶ್ಯಕತೆ ಬೀಳುತ್ತಿರಲಿಲ್ಲ. ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಗಡಿ ತುಂಬಾ ಅಡ್ಡಾಡುವಂತಹ ಅವಶ್ಯಕತೆ ಕೂಡ ನಮಗೆ ಬೀಳುತ್ತಿರಲಿಲ್ಲ. ಅದನ್ನು ತಮ್ಮ ತಮ್ಮ ಆತ್ಮಾವಲೋಕನೆಗೆ ಬಿಡುತ್ತೇನೆ. ಏಕೆಂದರೆ ಇವತ್ತು ನಮ್ಮ ಧೀಮಂತ ಹಿಂದಿನ ನಾಯಕರನ್ನು ನಾವು ನೆನೆಸಿಕೊಂಡರೆ ಪ್ರಾಯಶಃ ನಮ್ಮ ಹಿರಿಯರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ಸಭೆಯಲ್ಲಿ ಬಹುತೇಕ ಉಪಸ್ಥಿತರಿರುವಂತಹ ನಾಯಕರೆಲ್ಲರೂ ಇವತ್ತು ದಿವಂಗತ ದೇವರಾಜ್ ಅರಸು ರವರನ್ನು ನೆನೆಸುತ್ತಾರೆ. ಕಾರಣ ಅವರು ಕೊಟ್ಟಿರತಕ್ಕಂಥ ಅವಕಾಶದಿಂದಲೇ ಇವತ್ತು ಒಬ್ಬ ಒಳ್ಳೆಯ ವ್ಯಕ್ತಿ ಅಥವಾ ಕಾರ್ಯೋನ್ಮುಖಿ ವ್ಯಕ್ತಿ ಸಮಾಜದಲ್ಲಿ ಸಿಕ್ಕರೆ ಅವರನ್ನು ಗುರುತಿಸಿ ಬೆಳೆಸತಕ್ಕಂಥ ಒಂದು ಪ್ರಯತ್ನ ಮಾನ್ಯ ದೇವರಾಜು ಅರಸುರವರಲ್ಲಿ ಇತ್ತು, ನಾವು ಇವತ್ತು ಅದನ್ನು ಮರೆಯಬಾರದೆಂದು ಈ ಸಭೆಯ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅದೇ ರೀತಿ ನಾವು ಬೆಳೆದಿರತಕ್ಕಂಥಾದ್ದು ಮಾನ್ಯ ರಾಮಕೃಷ್ಣ ಹೆಗಡೆ ಮತ್ತು ಜೆ.ಹೆಚ್. ಪಟೇಲರ ಆಶೀರ್ವಾದದಿಂದ ಎನ್ನುವ ಮಾತನ್ನೂ ಕೂಡ ನಾನು ಇವತ್ತು ಹೇಳಬೇಕಾಗಿದೆ. ಆದರೆ ದುರ್ದೈವವಶಾತ್ ಇವತ್ತು ನಮ್ಮ ನಾಯಕರು ಎಂತಹವರನ್ನು ಬೆಳೆಸುತ್ತಾರೆ ಎನ್ನುವುದನ್ನು ನಿಮ್ಮ ಅವಗಾಹನೆಗೆ ಬಿಡುತ್ತೇನೆ. ಬಹುತೇಕ ಈವತ್ತು ಕುರಿ, ಕೋಳಿ ಬೆಳೆಸುವುದು ಜಾಸ್ತಿಯಾಗಿದೆ. ಯಾರೂ ಮಾತನಾಡುವುದಿಲ್ಲ ಅಂತಹವರನ್ನು ಬೆಳೆಸಬೇಕು ಎನ್ನುವಂತಹ ಪರಿಪಾಲನೆ ನಮ್ಮ ನಾಯಕರು ಮನಸ್ಸಿನಲ್ಲಿ ಬೆಳೆಸಿಕೊಂಡು ಬಂದಿರುತ್ತಾರೆ. ಅದು ಈ ಕಡೆ ಇರಬಹುದು, ಆ ಕಡೆ ಇರಬಹುದು, ಈ ಮಾತನ್ನು ನಾನು ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಯಾರು ಸಮಾಜದಲ್ಲಿ ಸಕ್ರಿಯವಾಗಿ ಸಮಾಜದ ಚಿಂತನೆ ಮಾಡುತ್ತಾರೆ ಅಂತಹವರನ್ನು ಬೆಳೆಸತಕ್ಕಂಥ ಪರಿಪಾಲನೆ ಇವತ್ತು ಕಡಿಮೆ ಇರತಕ್ಕಂಥಾದ್ದು ಗೋಚರಿಸುತ್ತಿದೆ ಎನ್ನುವ ಮಾತನ್ನು ನಾನು ಈ ಸಭೆಯಲ್ಲಿ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ಉತ್ತರ ಕರ್ನಟಕದ ಅಭಿವೃದ್ಧಿ ಹಿನ್ನೆಲೆಯಲ್ಲಿ ನಾನು ನಂಜುಂಡಪ್ಪನವರ ವಿಚಾರವನ್ನು ಪ್ರತಿಪಾದನೆ ಮಾಡುತ್ತಾ ಪ್ರಾಯಶಃ ಈ ವರದಿ ಕೊಡದೇ ಹೋಗಿದ್ದರೆ, ಆಂಧ್ರಪ್ರದೇಶದಲ್ಲಿ ಆಗಿರತಕ್ಕಂಥ

ತೆಲಂಗಾಣ ವಿಚಾರ ನಮ್ಮ ಜನರ ಭಾವನೆ ಇಲ್ಲಿ ಹುಟ್ಟುತ್ತಿತ್ತೇನೊ ಎನ್ನುವ ಮಾತನ್ನು ಇವತ್ತು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ. ಏಕೆಂದರೆ ನಮ್ಮಲ್ಲಿ ಪ್ರಾದೇಶಿಕ ಅಸಮಾನತೆ ಇಷ್ಟೊಂದು ಇದೆಯೆನ್ನುವುದು ನಾವು ಬರೀ ಮಾತನಾಡುತ್ತಿದ್ದೇವೆ. ಆದರೆ ಅಂಕಿಸಂಖ್ಯೆಗಳ ಆಧಾರದ ಮೇಲೆ ಈ ಸಮಾಜದ, ಈ ರಾಜ್ಯದ, ಈ ದೇಶದ ಜನರಿಗೆ ಗೊತ್ತುಪಡಿಸಿರತಕ್ಕಂಥ ಏಕೈಕ ವ್ಯಕ್ತಿ ನಂಜುಂಡಪ್ಪನವರು ಎನ್ನುವ ಮಾತನ್ನು ನಾನು ಪುನಃ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಹೊರಗಡೆ ಹೋಗಿದ್ದಾರೆ. ನನಗೆ ಆಶ್ಚರ್ಯವಾಗುತ್ತದೆ, ಮಾನ್ಯ ಉಪಾಧ್ಯಕ್ಷರೆ, ನನಗೆ 15 ನಿಮಿಷ ಕೊಟ್ಟಿದ್ದಾರೆ, ನಾನು ಇನ್ನೂ ಐದು ನಿಮಿಷ ಮಾತನಾಡಿಲ್ಲ, ನಾನು 15 ನಿಮಿಷದಲ್ಲಿ ಮುಗಿಸುತ್ತೇನೆ, ತಾವು ಗಂಟೆ ಹೊಡೆಯಬೇಡಿ. ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುತ್ತೇವೆನ್ನುವಂತಹ ಮಾತನ್ನು ನಿನ್ನೆ ಮೇಲ್ಮನೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಖಂಡಿತವಾಗಿ ಸ್ವಾಗತಿಸುತ್ತೇನೆ. ಆದರೆ ಅವರ ಉದ್ದೇಶಕ್ಕೆ ಒಂದು ಗುರಿ ಇರಬೇಕಾಗಿತ್ತು. ಇವತ್ತು ಅವರು ಹೇಳಿರತಕ್ಕಂತಾದ್ದು ಬಹುತೇಕ ನಮ್ಮ ಜನರ ಕಣ್ಣೀರು ಒರೆಸತಕ್ಕಂಥ ತಂತ್ರವೆಂದು ಭಾವಿಸುತ್ತೇನೆ ಅಷ್ಟೇ. ಏಕೆಂದರೆ ಯಾವ ವರದಿಯಲ್ಲಿ 16 ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕೆಂದು ಸಲಹೆಯನ್ನು ಹಾಗೂ ಸೂಚನೆಯನ್ನು ಅವರು ಕೊಟ್ಟಿದ್ದಾರೆ, ನಿಜವಾಗಲೂ ನಿಮಗೆ ಇಚ್ಛಾಶಕ್ತಿ ಇದ್ದರೆ ನೀವು ಈ ವರ್ಷ ನಿಮಗೆ ಮಾಡುವುದಕ್ಕಾಗಿರಲಿಕ್ಕಿಲ್ಲ, ಏಕೆಂದರೆ ಈಗಾಗಲೇ ಆಯವ್ಯಯವನ್ನು ಮಂಡನೆ ಮಾಡಿದ್ದೀರಿ. ಆದರೆ ಭವಿಷ್ಯದಲ್ಲಿ ಬರತಕ್ಕಂಥ ವರ್ಷದಲ್ಲಿಯಾದರೂ 16 ಸಾವಿರ ಕೋಟಿ ರೂಪಾಯಿಯಲ್ಲಿ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಯನ್ನು ಕೊಟ್ಟು ಕೊಂಡು ಹೋದರೆ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು 16 ವರ್ಷ ಕಾಯಬೇಕಾಗುತ್ತದೆ. ಅದಕ್ಕೆ ಒಂದು ಅರ್ಥ ಇರಬೇಕು. ಆ ಸಾವಿರ ಕೋಟಿ ರೂಪಾಯಿ ಎನ್ನುವ ಬದಲಾಗಿ 3 ಸಾವಿರ ಕೋಟಿ ರೂಪಾಯಿ ಮುಂದಿನ ವರ್ಷ ಮಾಡುತ್ತೇವೆ ಎನ್ನುವ ಮಾತನ್ನು ಆಡಿದ್ದರೆ ನಿಜವಾಗಿ ನೀವು ಪ್ರಶಂಸನೆಗೆ ಪಾತ್ರರಾಗುತ್ತಿದ್ದೀರಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಆಡಬೇಕಾಗುತ್ತದೆ. ಏಕೆಂದರೆ ಸಾಕಷ್ಟು ಭಾಷಣವನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆಡಿರತಕ್ಕಂಥ ಮಾತನ್ನು ಅಧಿಕಾರ ಬಂದಾಗ ನಡೆಸತಕ್ಕಂಥ ಎದೆಗಾರಿಕೆಯನ್ನೂ ಕೂಡ ಅವರು ಇಟ್ಟುಕೊಂಡು ಹೋಗಬೇಕಾಗುತ್ತದೆ. ಅವರು ಭವಿಷ್ಯದಲ್ಲಿ ಎರಡು ಮಾಡಬಹುದು ಎನ್ನುವ

ದೃಷ್ಟಿಕೋನದಿಂದ ಈ ಮಾತನ್ನು ಆಡುತ್ತಿದ್ದೇನೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಪ್ರಾರಂಭದಲ್ಲಿ ಬರುವ ವರ್ಷದಲ್ಲಿ ನಾನು ಸಾವಿರ ಕೋಟಿ ರೂಪಾಯಿ ಇಡುತ್ತೇನೆ ಎನ್ನುವ ಮಾತನ್ನು ಆಡಿದ್ದು, ಇವತ್ತು 16 ಸಾವಿರ ಕೋಟಿ ರೂಪಾಯಿ ಬೇಕಾದರೆ ಉತ್ತರ ಕರ್ನಾಟಕ ಇನ್ನು 16 ವರ್ಷ ಕಾಯಬೇಕಾದರೆ ಈ ಉತ್ತರ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಮಾತನಾಡುವುದಕ್ಕೆ ಈ ಸಭೆ ಮಾಡಿರತಕ್ಕಂಥಾದ್ದು ನಿಜವಾಗಿ ಸಾರ್ಥಕವಾಗಲಿಕ್ಕಿಲ್ಲವೆಂದು ಭಾವಿಸುತ್ತೇನೆ. ನಮಗೆ ಇವತ್ತು ಕೆಟ್ಟದ್ದು ಎನ್ನಿಸುತ್ತದೆ, ಇವತ್ತು ಉತ್ತರ ಕರ್ನಾಟಕ ಅಂದತಕ್ಷಣ ಕೇವಲ ಹುಬ್ಬಳ್ಳಿ–ಧಾರವಾಡ ಅಥವಾ ಬೆಳಗಾಂ ಅಥವಾ ಗುಲ್ಬರ್ಗ ಆಗಬಾರದು. ಉತ್ತರ ಕರ್ನಾಟಕದಲ್ಲಿ ಹಿಂದುಳಿದಿರತಕ್ಕಂಥ ಕೊಪ್ಪಳ ಇದೆ, ಬಿಜಾಪುರ ಇದೆ, ಬಾಗಲಕೋಟೆ ಇದೆ, ರಾಯಚೂರು, ಬೀದರ್ ಹಾಗೂ ಹಾವೇರಿ ಇದೆ. ನಾನು ನಿಮಗೆ ಹೇಳಬೇಕಾದರೆ ಈ ಎಲ್ಲಾ ಜಿಲ್ಲೆಗಳನ್ನು ನೀವು ಗಣನೆಗೆ ತೆಗೆದುಕೊಂಡು ಒಂದು ಕೆಲಸ ಪ್ರಾರಂಭ ಮಾಡಿದರೆ ಖಂಡಿತ ನೀವು ಕಳಕಳಿಗೆ ಪಾತ್ರರಾಗುತ್ತಿದ್ದೀರಿ. ಇವತ್ತು ಏಕೆ ಈ ಮಾತನ್ನು ಆಡುತ್ತಿದ್ದೇನೆ. ಎಂದರೆ ಕೆಲವೊಂದು ವಿಚಾರದಲ್ಲಿ ಹೈಕೋರ್ಟ್ ಪೀಠ ಉತ್ತರ ಕರ್ನಾಟಕದಲ್ಲಿ ಹಿಂದೆ ಅನೇಕ ವರದಿಗಳನ್ನು ಕೊಟ್ಟಿದ್ದಾರೆ. ನಾನು ಈ ವಿಚಾರವನ್ನು ಪುನಃ ಕೆದಕಿ ಮತ್ತೆ ವಾಗ್ವಾದಕ್ಕೆ ಎಡೆ ಮಾಡಿ ಕೊಡುವುದಿಲ್ಲ. ಆದರೆ ಒಂದು ಕಡೆ ಹೈಕೋರ್ಟ್ ಪೀಠ ಇನ್ನೊಂದು ಕಡೆ ಬೇರೆ ರೀತಿಯ ಅಭಿವೃದ್ಧಿ ಜಿಲ್ಲೆಯಲ್ಲಿ ಆಗಬೇಕು ಎನ್ನುವ ಮಾತು ನಾಯಕರ ಮನಸ್ಸಿನಲ್ಲಿ ಇರಬೇಕು. ಇವತ್ತು ಬಿಜಾಪುರಕ್ಕೆ ನಾವು ಏರ್‌ಪೋರ್ಟ್ ಕೇಳುತ್ತಿದ್ದೇವೆ ಮತ್ತು ಬ್ರಾಡ್‌ಗೇಜ್ ಕೇಳುತ್ತಿದ್ದೇವೆ. ಬ್ರಾಡ್‌ಗೇಜ್ ಬಗ್ಗೆ ನನಗೆ ಇವತ್ತು ಖಂಡಿತ ವ್ಯಥೆ ಅನಿಸುತ್ತದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹೋದ ವಿಧಾನಸಭೆಯಲ್ಲಿ ಉತ್ತರ ಕೊಟ್ಟರು. ಅವರು ಬಹಳ ತ್ವರಿತವಾಗಿ 20 ಕೋಟಿ ರೂಪಾಯಿಗಳನ್ನು ತುಂಬುತ್ತೇನೆಂದು ಹೇಳಿದ್ದರು ಆದರೆ ನಿನ್ನೆವರೆಗೂ ಕೂಡ ತುಂಬಿರಲಿಲ್ಲ. ಮತ್ತೆ ನಿನ್ನೆ ಅದೇ ಮಾತನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ನಾನು ತುಂಬುತ್ತೇನೆಂದು ಹೇಳಿದ್ದಾರೆ. ಹಾಗಾದರೆ ಅವತ್ತು ನೀವು ಹೇಳಿದ್ದು ನಿಜನಾ? ಇವತ್ತು ಇವರು ಹೇಳಿದ್ದು ನಿಜನಾ? ಗೊತ್ತಾಗುತ್ತಿಲ್ಲ. ನೀವು ಇಲ್ಲಿ ಕುಳಿತಿದ್ದೀರಿ, ಯಾವ ಬ್ರಾಡ್‌ಗೇಜ್ ಆಗಬೇಕೆಂದು ಹೋರಾಟ ಮಾಡಿ ನಿಮ್ಮವರು ಸಂಸದರಾದರು. ಅಷ್ಟೇ ಅಲ್ಲ ಕೇಂದ್ರದ ರೈಲ್ವೆ ಮಂತ್ರಿಯಾದರು. ರೈಲ್ವೆ ಸಚಿವರಾದರೂ ರೈಲು ನಮಗೆ ಬರಲಿಲ್ಲ. ಇದು ನಮಗೆ ನೋವು ಅನಿಸುತ್ತದೆ. ಏಕೆಂದರೆ ಅಧಿಕಾರಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ನೀವೇನು ಮಾತನಾಡುತ್ತೀರಿ, ಆ ಮಾತನ್ನು ನೀವು ಅಧಿಕಾರದಲ್ಲಿ ಬಂದಾಗ ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು

ಮಾಡಿದರೆ ನಿಜವಾಗಲೂ ಕೂಡ ನೀವು ಪ್ರಶಂಸನೆಗೆ ಪಾತ್ರರಾಗುತ್ತಿದ್ದೀರಿ ಎಂದು ಈ ಸಂದರ್ಭದಲ್ಲಿ ಅವರ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ, ಬಿಜಾಪುರ ಏರ್‌ಪೋರ್ಟ್ ಬಗ್ಗೆ ಇವತ್ತು ನಾನು ಏಕೆ ಪ್ರತಿಪಾದನೆಯನ್ನು ಮಾಡುತ್ತಿದ್ದೇನೆಂದರೆ, ಬಿಜಾಪುರದಲ್ಲಿ ಏರ್‌ಪೋರ್ಟ್ ಆಗಬೇಕೆಂಬ ಮಾತನ್ನು 1964ರಲ್ಲಿ ಶ್ರೀ ಜವಹರಲಾಲ್ ನೆಹರುರವರು ಬಂದಾಗ Dr. Karan Singh, Civil Aviation Minister ಇದ್ದರು. ನಾನು ಆ ಆದೇಶದ ಕಾಪಿಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೆ. ಬಿಜಾಪುರದಲ್ಲಿ ಆದ್ಯತೆಯ ಮೇಲೆ ಏರ್‌ಪೋರ್ಟ್ ಆಗಬೇಕೆನ್ನುವ ಮಾತನ್ನು ಆಡಿ ಹೋಗಿದ್ದರು. ಆದರೆ ದುರ್ದೈವವಶಾತ್ ನಮ್ಮಲ್ಲಿ ನಾಯಕತ್ವದ ಕೊರತೆ ಇರುವುದರಿಂದ ಅದು ಆಗಲಿಲ್ಲ. ತದನಂತರ ಬೆಳಗಾಂನಲ್ಲಿ ಆಯಿತು, ನಾವು ಬೆಳಗಾಂನಲ್ಲಿ ಏರ್‌ಪೋರ್ಟ್ ಆಗಿರುವುದಕ್ಕೆ ನೋವು ಪಡುವುದಿಲ್ಲ. ಆದರೆ ಯಾವುದು ಆದ್ಯತೆಯಲ್ಲಿ ಇತ್ತು, ಅದು ಇವತ್ತು ಗಣನೆಗೆ ಬರುತ್ತಿಲ್ಲ. ಈಗ ಮಾನ್ಯ ಉಪ ಮುಖ್ಯಮಂತ್ರಿಯವರು ಉಪ ಮಂತ್ರಿಗಳಾದರೆಂದು ತಿಳಿದುಕೊಂಡು ಅವರು ಶಿವಮೊಗ್ಗಕ್ಕೆ ಏರ್‌ಪೋರ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಮಾನ್ಯ ರೇವಣ್ಣನವರು ಹಾಸನ ಜಿಲ್ಲೆಯಲ್ಲಿ ಏರ್‌ಪೋರ್ಟ್ ಮಾಡುವುದಕ್ಕೆ ಹೊರಟಿದ್ದಾರೆ. ಇದು ನಮಗೆ ಆಶ್ಚರ್ಯ ಆಗುತ್ತದೆ. ನೀವು ಸಮಗ್ರ ಕರ್ನಾಟಕದ ಬಗ್ಗೆ ಚಿಂತನೆಯನ್ನು ಮಾಡುವಂತಹ ವ್ಯಕ್ತಿಗಳು, ಅಧಿಕಾರ ಬಂದಮೇಲೆ ಒಂದು ರೀತಿ, ಅಧಿಕಾರ ಬರುವುದಕ್ಕಿಂತ ಮೊದಲು ಒಂದು ರೀತಿ, ಆದರೆ ಖಂಡಿತ ನಾಳೆ ನಿಮ್ಮನ್ನು ಕ್ಷಮಿಸುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಅವರ ಅವಗಾಹನೆಗೆ ತರಲಿಚ್ಛೆಸುತ್ತೇನೆ. ಅದೇ ರೀತಿಯಲ್ಲಿ Food Processing Park ಕೂಡ, ಉತ್ತರ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲೇ ಹೆಚ್ಚು ಹಣ್ಣು ಹಂಪಲುಗಳನ್ನು ಬೆಳೆಯುವಂತಹ ಜಿಲ್ಲೆ ಬಿಜಾಪುರ ಜಿಲ್ಲೆಯಾಗಿದೆ. ಅಲ್ಲಿ ಒಂದು Food Processing Park ಕೊಡಿಯೆಂದು ಕೇಳಿದರೆ, ದುರ್ದೈವವಶಾತ್ ಹಿಂದಿನ ಸರ್ಕಾರದಲ್ಲೂ ಅದು ಮದ್ದೂರಿಗೆ ಹೋಯಿತು. ಕೋಲಾರಕ್ಕೆ ಹೋಯಿತು, ಹಾಸನಕ್ಕೆ ಹೋಯಿತು, ಇವತ್ತು ಜೇವರ್ಗಿಗೆ ಹೋಯಿತು. ಆದರೆ ಇದುವರೆಗೂ ಬಿಜಾಪುರಕ್ಕೆ ಬಂದಿಲ್ಲ. ಅದಕ್ಕೆ ನಾವು ಹೇಳುವಂಥಾದ್ದು ಇಷ್ಟೆ, ನೀವು ಯಾವ ವಿಚಾರವನ್ನು ಪ್ರತಿಪಾದನೆಯನ್ನು ಮಾಡಿರುತ್ತೀರಿ, ಆ ವಿಚಾರದಲ್ಲಿ ನೀವು ಆಡುವಂತಹ ಮಾತುಗಳನ್ನು ಆ ಸಂದರ್ಭದಲ್ಲಿ ನೀವು ಪಾಲಿಸಿ ತೋರಿಸಿದರೆ, ಖಂಡಿತವಾಗಿಯೂ ನೀವು ಪ್ರಶಂಸೆಗೆ ಪಾತ್ರರಾಗುತ್ತೀರಿ. ಈ ಬ್ರಾಡ್ ಗೇಜ್

ವಿಚಾರದಲ್ಲೂ ಕೂಡ ನಮಗೆ ಆಗಿಲ್ಲ, ಇವತ್ತು ಹಾಸನ ಮಂಗಳೂರು ಆಗುತ್ತದೆ, ಹಾಸನ - ಬೆಂಗಳೂರು ಆಗುತ್ತದೆ. ಮೈಸೂರು-ಬೆಂಗಳೂರು ಡಬ್ಬಲ್ ಲೈನ್ ಆಗುತ್ತದೆ. ಹುಬ್ಬಳ್ಳಿ-ಮೀರಜ್ ಆಗುತ್ತದೆ. ಆದರೆ ಬಿಜಾಪುರ ಬಾಡ್ಗೇಜ್ ಬಗ್ಗೆ ತಾವು ಇದುವರೆಗೂ ಮಾತನ್ನು ಆಡುವಂತಿಲ್ಲವೆಂಬ ಬಗ್ಗೆ ನಮಗೆ ನೋವು ಅನಿಸುತ್ತದೆ. ಇವತ್ತು ಈ ಹಿನ್ನೆಲೆಯಲ್ಲಿ ನಾನು ಇನ್ನು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮೊದಲನೆಯದಾಗಿ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಜೋಡಣೆಯಾಗುವಂತಹ ಒಂದು Four lane Highway proposal ಕೂಡ ಕೇಂದ್ರ ಸರ್ಕಾರದ ಮುಂದೆ ಇತ್ತು. ಅದನ್ನು ನಾನು ಮೇಲಿಂದ ಮೇಲೆ ಅನೇಕ ಸಭೆ ಸಮಾರಂಭಗಳಲ್ಲಿ ಮಾನ್ಯ ಹೆಚ್.ಡಿ. ರೇವಣ್ಣನವರ ಅವಗಾಹನೆಗೆ ತಂದೆ. ಆದರೆ ದುರ್ದೈವವಶಾತ್ ಇವತ್ತು ಹಾಸನ-ಬೆಂಗಳೂರು four lane ಆಗುತ್ತಾ ಇದೆ. ಕೋಲಾರ ಜಿಲ್ಲೆಯವರು ಕೇಂದ್ರ ಸರ್ಕಾರದಲ್ಲಿ Surface Transport Minister ಇದ್ದಾರೆ. ಅವರು ಮಾಡಿಕೊಳ್ಳುತ್ತೇನೆಂದು ಓಡಾಡುತ್ತಿದ್ದಾರೆ. ಹೊಸಪೇಟೆ ಬಿಜಾಪುರ ಇಂದಾಲ್ಲ ನಾಳೆ ಆಗಬಹುದು. ಆದರೆ ನಮ್ಮ ಉತ್ತರ ಕರ್ನಾಟಕಕ್ಕೆ ಏಕೈಕ ಒಂದು ರಸ್ತೆಯನ್ನು ಆಗಿ ಪರಿವರ್ತನೆಯಾಗಿ ಮಾಡಿ, ಎಂದು ಕೇಳಿಕೊಂಡರೆ ತಾವು ಇದುವರೆಗೂ ತಾವು ಯಾರೂ ಕೂಡ ಆ ಕಡೆಗೆ ಕಣ್ಣು ಹಾಯಿಸುವ ಕನಿಷ್ಠ ಸೌಜನ್ಯತೆಯನ್ನು ತೋರಿಸಿಲ್ಲವೆನ್ನುವಂತಹ ಮಾತನ್ನು ನಾನು ಆಡಬೇಕಾಗುತ್ತದೆ. ಆದರೆ ಇವತ್ತು ಬೇರೆ ಕಡೆ ಅಭಿವೃದ್ಧಿ ಆಗಬಾರದೆಂಬ ಮಾತು ನನ್ನದಲ್ಲ. ಆದರೆ ಅಭಿವೃದ್ಧಿ ಈ ರಾಜ್ಯದಲ್ಲಿ ಸರಿಸಮಾನವಾಗಿ ಹಂಚಿಹೋಗಿದ್ದರೆ, ಇವತ್ತು ಈ ಅಧಿವೇಶನ್ನು ನಡೆಸುವಂತಹ ಪರಿಸ್ಥಿತಿ ಕೂಡ ಬರುತ್ತಾ ಇರಲಿಲ್ಲ. ಅಂತಹ ಒಂದು ಮಾತನ್ನು ಇವತ್ತಿನ ದಿವಸವಾದರೂ ಸನ್ಮಾನ್ಯ ನಾಯಕರೂ ಅವಗಾಹನೆಗೆ ತೆಗೆದುಕೊಳ್ಳುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ, ಕೊನೆಯದಾಗಿ ಔದ್ಯೋಗಿಕ ದೃಷ್ಟಿಯಿಂದಲೂ ಕೂಡ ಉತ್ತರ ಕರ್ನಾಟಕಕ್ಕೆ ತಾವು ಕೊಟ್ಟಿರತಕ್ಕಂಥ ಒತ್ತನ್ನು ನೋಡಿದರೆ, ಪ್ರಾಯಶಃ ನೀವು ಭವಿಷ್ಯದಲ್ಲಿ ಇದು ಡಾ: ನಂಜುಂಡಪ್ಪನವರ ವರದಿಯಲ್ಲೂ ಹೇಳಿರತಕ್ಕಂಥ ಮಾತು ಇದು. ನಾನು ಏನು ನೋಡಿ ಹೇಳತಕ್ಕಂಥ ವಿಚಾರವಲ್ಲ. ದಕ್ಷಿಣ ಕರ್ನಾಟಕದಲ್ಲಿ ಶೇ.80ರಷ್ಟು Industries ಇವೆ, ಕೇವಲ ಶೇ.20ರಷ್ಟು Industries ಉತ್ತರ ಕರ್ನಾಟಕದಲ್ಲಿ ಇವೆ. ಇವತ್ತು ಇದನ್ನು ಸರಿದೂಗಿಸಬೇಕೆಂಬ ದೃಷ್ಟಿಕೋನವನ್ನು ಇಟ್ಟುಕೊಂಡು, ಕೈಗಾರಿಕೆಗೆ ವಿಶೇಷವಾಗಿ ಡಾ: ನಂಜುಂಡಪ್ಪನವರು 4,000 ಕೋಟಿ ರೂಪಾಯಿಗಳನ್ನು ಖರ್ಚು

ಮಾಡಬೇಕೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ದುರ್ದೈವವಶಾತ್ ತಾವು ಒಂದು ಮಾತನ್ನು ಸಹಿತ ಈ ಸಭೆಯಲ್ಲಿ ಆಡಲಿಲ್ಲ. ಉತ್ತರ ಕರ್ನಾಟಕದಲ್ಲಿ ಯಾವುದೇ ಒಂದು ಜಿಲ್ಲೆಯಲ್ಲಿ ಇಂತಹ ಒಂದು ಮೆಗಾ ಇಂಡಸ್ಟ್ರಿಯನ್ನು ನಾವು ತರುತ್ತೇವೆಂಬ ಮಾತನ್ನು ಆಡಿಲ್ಲ. ಆದರೆ ದುರ್ದೈವವಶಾತ್ ಇವತ್ತು ರಾಜ್ಯದಲ್ಲಿ, ದೇಶದಲ್ಲಿ, ಮಾನ್ಯ ಜವಹರಲಾಲ್ ನೆಹರುರವರು ಔದ್ಯೋಗಿಕ ಕ್ರಾಂತಿಯನ್ನು ಏನು ಮಾಡಿದ್ದರು. ಆ ಕ್ರಾಂತಿಯ ಕನಸು ಇವತ್ತು ನುಚ್ಚು ನೂರಾಗುತ್ತಿದೆಯೆನ್ನುವ ಮಾತನ್ನು ನಾನು ಇವತ್ತು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಏಕೆಂದರೆ, ಯಾವ ಸಂಸ್ಥೆಗಳನ್ನು ಅವರು ಕಟ್ಟಿ ಜನಸಾಮಾನ್ಯರ ಕೈಗೆ ಕೊಟ್ಟು ಅವರು ಕೆಲಸವನ್ನು ಮಾಡುವಂತಹ ಅವಕಾಶವನ್ನು ಕೊಟ್ಟಿದ್ದರು, ಅಂತಹ ಎಲ್ಲಾ ಔದ್ಯೋಗಿಕ ಕ್ಷೇತ್ರದಲ್ಲಿ ಇವತ್ತು ಆ Industries ಗಳನ್ನು B.I.F.R. ಮುಂದೆ ಕಳುಹಿಸಿ, ಡಿಸ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಹಾಕಿ, ಅವುಗಳನ್ನು ಮಾರತಕ್ಕಂಥ ದಿಶೆಯಲ್ಲಿ, ಇವತ್ತು ನಾವು ಸಾಗುತ್ತಿದ್ದೇವೆಂಬುವುದು ನೋವಿನ ಸಂಗತಿ, ಆದರೆ ಕನಿಷ್ಠಪಕ್ಷ ಇವತ್ತು ಈ ಸರ್ಕಾರದ ಮುಂದೆ ಒಂದು ಅವಕಾಶವಿದೆ. ಇವತ್ತು ಡಾ:ನಂಜುಂಡಪ್ಪನವರ ವರದಿಯನ್ನೇ ಆಧಾರವಾಗಿ ಇಟ್ಟುಕೊಂಡು ಅವರು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಔದ್ಯೋಗಿಕ ಕ್ರಾಂತಿಯಾಗಬೇಕೆಂದು ಸಲಹೆಯನ್ನು ಮಾಡಿದ್ದಾರೆ. ಅದಕ್ಕೆ ಏನಾದರೂ ಒಂದು ವಿಶೇಷವಾದಂತಹ ಒತ್ತನ್ನು ಕೊಡುವಂತಹ ಆಸಕ್ತಿ ಈ ಸರ್ಕಾರದಲ್ಲಿ ಇರಬೇಕಾಗಿತ್ತು. ಆದರೆ ದುರ್ದೈವವಶಾತ್, ಮೊನ್ನೆ ಮಾನ್ಯ ಉಪ ಮುಖ್ಯಮಂತ್ರಿಯವರು ಮತ್ತು ಇಂಡಸ್ಟ್ರಿ ಮಿನಿಸ್ಟರ್ ರವರು ಅಮೆರಿಕಾದಲ್ಲಿ 40,000 ಕೋಟಿ ರೂಪಾಯಿ ಹಣವನ್ನು ತರುವುದಕ್ಕೆ ಹೋಗಿದ್ದರು. ಅದು ಬರುತ್ತದೊ ಇಲ್ಲವೊ ನಮಗೂ ಗೊತ್ತಿಲ್ಲ. ಆ 40,000 ಕೋಟಿ ರೂಪಾಯಿಗಳಲ್ಲಿ ಕನಿಷ್ಠ 20,000 ಕೋಟಿ ರೂಪಾಯಿ ಹಣವನ್ನು ಉತ್ತರ ಕರ್ನಾಟಕಕ್ಕೆ ತಂದರೆ, ನಿಮ್ಮ ಫೋಟೊವನ್ನು ಹಾಕಿ, ನಿಮ್ಮನ್ನು ನಾವು ಸದಾ ನೆನಪಿಸಿಕೊಳ್ಳುತ್ತೇವೆ. ಏಕೆಂದರೆ ನಿಮಗೆ ಬಿಜಾಪುರ ಜಿಲ್ಲೆ ಹಿಡಿಸಲಿಲ್ಲ. ನಿಮ್ಮನ್ನು ಬಿಜಾಪುರ ಜಿಲ್ಲೆಯ ಉಸ್ತುವಾರಿ ಮಂತ್ರಿಯನ್ನಾಗಿ ಮಾಡಿದರೆ, ನೀವು ಅಲ್ಲಿಗೆ ಬರಲಿಕ್ಕೂ ಆಗಲಿಲ್ಲ. ಅಂದಮೇಲೆ ಅಲ್ಲಿ Industries ಯಾವಾಗ ಬರುತ್ತದೋ ಅದು ಆ ಭಗವಂತನಿಗೆ ಗೊತ್ತು. ಆದರೆ ಇನ್ನು ಮೇಲಾದರೂ ಅಲ್ಲಿ Industries ಯಾವಾಗ ಬರುತ್ತದೋ ಅದು ಆ ಭಗವಂತನಿಗೆ ಗೊತ್ತು. ಆದರೆ ಇನ್ನು ಮೇಲಾದರೂ ಕೊನೆಪಕ್ಷ, ಆ 40,000 ಕೋಟಿ ರೂಪಾಯಿಗಳಲ್ಲಿ 20,000 ಕೋಟಿ ರೂಪಾಯಿಗಳನ್ನಾದರೂ ಉತ್ತರ ಕರ್ನಾಟಕಕ್ಕೆ ತರುವಂಥಾದ್ದರ ಬಗ್ಗೆ, ಮಾನ್ಯ ಔದ್ಯೋಗಿಕ ಮಂತ್ರಿಯವರು ಅಮೇರಿಕಾದಲ್ಲಿ

ಇದ್ದಾಗ ಬಹಳ ಒಳ್ಳೆಯ ಫೋಟೊಗಳು ಬರುವುದನ್ನು ನಾನು ನೋಡುತ್ತಿದ್ದೆ. ಆದರೆ Industries ಬರುತ್ತದೆಂಬ ಆಸೆ ನಮ್ಮ ಮನಸ್ಸಿನಲ್ಲಿ ಇದೆ. ಅವರು ಏನಾದರೂ ಸ್ವಲ್ಪ ಉತ್ತರ ಕರ್ನಾಟಕಕ್ಕೆ ಕೊಟ್ಟರೆ ಖಂಡಿತ ನಾವು ಅವರಿಗೆ ಕೃತಜ್ಞರಾಗುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಭಾರೀ ಕೈಗಾರಿಕಾ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲ್‌ರವರು ಮಾತನಾಡುವಾಗ, ಅಮೇರಿಕಾಗೆ ಹೋಗಿದ್ದರು, ಬಂಡವಾಳವನ್ನು ತರುವುದಕ್ಕೆ ಹೋಗಿದ್ದರು, ಎನ್ನುವ ಮಾತನ್ನು ಹೇಳಿದರು. ನಾವು ಹೋಗಿದ್ದು ನಿಜ, ಅಲ್ಲಿರುವಂತಹ ನಮ್ಮ ಕನ್ನಡಿಗರನ್ನು ಭೇಟಿ ಮಾಡಿದ್ದು ನಿಜ, ಬಿಜಾಪುರ ಜಿಲ್ಲೆಗೆ ಬಂಡವಾಳವನ್ನು ತರುತ್ತೇವೆಂದು ಹೇಳಿದ್ದು ನಿಜ, ಆದರೆ ನಾವು ಬಂಡವಾಳವನ್ನು ತರುವುದಕ್ಕೆ ಮೊದಲೇ ತಾವು ಬೇರೆ ಕಡೆಗೆ ಹೋಗಿಬಿಟ್ಟಿರಿ. ಅಲ್ಲಿ ನಾನು ಇದ್ದೆ, ಅಲ್ಲಿಯೂ ನಿಮಗೆ ಇರುವುದಕ್ಕೆ ಇಷ್ಟವಿರಲಿಲ್ಲ. ಅಲ್ಲಿಯೂ ನಾವು ಬರಲಿಲ್ಲವೆಂದು ಆಪಾದನೆಯನ್ನು ಮಾಡುತ್ತಿದ್ದೀರಿ. ನಾನು ನಿಮ್ಮನ್ನು ಎಷ್ಟು ಬಾರಿ ಬಂದು ಭೇಟಿ ಮಾಡಿದೆ, ಎಷ್ಟು ಬಾರಿ ನಿಮ್ಮ ಮನೆಗೆ ಬಂದು ತಿಂಡಿ ತಿಂದೆ, ಅನ್ನುವಂಥಾದ್ದು ನಿಮಗೆ ಗೊತ್ತಿದೆ, ನೀವು ಏನು ಮಾಡಿದ್ದೀರೆಂಬುದು ನಮಗೆ ಗೊತ್ತಿದೆ. ಹೀಗಾಗಿ, ನಾವು ಅಮೇರಿಕಾಕ್ಕೆ ಹೋಗಿದ್ದು ನಿಜ, ಬಾಲ್ಟಿಮೊರ್‌ಗೆ ಹೋಗಿದ್ದು ನಿಜ, ನ್ಯೂಯಾರ್ಕ್‌ಗೆ ಹೋಗಿದ್ದು ನಿಜ, ಸಾಂಟ್ರಾಸ್‌ಗೆ ಹೋಗಿದ್ದು ನಿಜ, ಲಾಸ್ ಎಂಜಲಿಸ್‌ಗೆ ಹೋಗಿದ್ದು ನಿಜ, ಬಂಡವಾಳ ಹೂಡಿಕೆದಾರರ ಜೊತೆಗೆ ಮಾತನಾಡಿ ಬಂಡವಾಳವನ್ನು ತಂದು ಹುಬ್ಬಳ್ಳಿಯಲ್ಲಿ ಹೂಡಿಕೆ ಮಾಡಿ....

ಶ್ರೀ ವಿ. ಸೋಮಣ್ಣ: ಮಾನ್ಯ ಕಟ್ಟಾ ಸುಬ್ರಮಣ್ಯರವರೆ, ಒಂದು ನಿಮಿಷ, ತಾವು ಇಷ್ಟೆಲ್ಲಾ ಸ್ಥಳಗಳಿಗೆ ಹೋಗಿ ಬಂದಿದ್ದೀರಿ. ನಿಮ್ಮ ಅನುಭವ ಏನು ಇತ್ತು, ನಿಮ್ಮ ಅನಿಸಿಕೆ ಏನು ಇತ್ತು, ನೀವು ಏನೇನು ಮಾಡಿದ್ದೀರೆಂಬ ಬಗ್ಗೆ ಒಂದು brief ಆಗಿ note ಮಾಡಿ, ಎಲ್ಲಾ ಶಾಸಕರುಗಳಿಗೆ ಕಳುಹಿಸಿದರೆ, ನಿಮ್ಮ ಚಿಂತನೆಯಲ್ಲಿ ಏನಾದರೂ ಅದು ಅಡಕವಾಗಿದೆಯಾ, ಎಂಬುದು ನಮಗೂ ಗೊತ್ತಾಗುತ್ತದೆ. ತಾವು ದಯಮಾಡಿ ಒಂದು ನೋಟ್ ಮಾಡಿ ಕೊಟ್ಟರೆ ಒಳ್ಳೆಯದು. ಈಗ ನೀವು ಹೇಳಿದ ಊರುಗಳ ಹೆಸರುಗಳನ್ನೇಲಾ ನೋಡಿದರೆ, ನಾವು ಇನ್ನು 20 ವರ್ಷಗಳಾದರೂ ನೋಡುವುದಕ್ಕೆ ಆಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಾವು ಅಲ್ಲಿಗೆ ಹೋಗಿದ್ದು ನಿಜ, ಅಲ್ಲಿ 6,000 ಜನ ಕನ್ನಡಿಗರನ್ನು ಭೇಟಿ ಮಾಡಿದ್ದು ನಿಜ, ನಮ್ಮವರು ಅಲ್ಲಿ ಹೋಗಿ

ಬೆಳೆಯುತ್ತಿರುವುದು ನಿಜ, ಅಲ್ಲಿ ಕಾರ್ಖಾನೆಗಳನ್ನು ಪ್ರಾರಂಭ ಮಾಡಿರುವುದು ನಿಜ, ಅಲ್ಲಿಂದ ಬಂಡವಾಳ ಬರುವುದು ನಿಜ, ಅದು ಹಂತ ಹಂತವಾಗಿ ನಮ್ಮ ರಾಜ್ಯಕ್ಕೆ 2,000 ಕೋಟಿ ರೂಪಾಯಿಗಳ ಬಂಡವಾಳ ಬರುವಂಥಾದ್ದರ ಬಗ್ಗೆ ಹೇಳಿದ್ದು ನಿಜ, ಸಧ್ಯದಲ್ಲೇ ಬಂಡವಾಳ ಬರುವುದು ನಿಜ, ತಾವು ಉತ್ತರ ಕರ್ನಾಟಕದ ಬಗ್ಗೆ ಹೇಳಿದ್ದೀರಿ, ಇಲ್ಲಿಯವರೆಗೂ ಕಳೆದ ನಾಲ್ಕು ತಿಂಗಳಲ್ಲಿ 7,000 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆದಾರರಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಈ ಹೊಸ ಸರ್ಕಾರ ಬಂದಮೇಲೆ 7,000 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯನ್ನು ಮಾಡಲು ಉತ್ತರ ಕರ್ನಾಟಕದಲ್ಲಿ ಅನುಮತಿಯನ್ನು ನಾವು ಕೊಟ್ಟಿದ್ದೇವೆ. ಇದು ಒಂದೇ ಅಲ್ಲ, ನಾವು ಹುಬ್ಬಳ್ಳಿಯಲ್ಲಿ software Tech park ಮಾಡುವುದಕ್ಕೆ, ಇಲ್ಲಿ ಏನು Foundry Cluster ಏನು ಇದೆ,. ಅದನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಈಗಾಗಲೇ ನಾವು ಎಲ್ಲಾ Industrialist ಗಳ ಜೊತೆಯಲ್ಲಿ ಮಾತನಾಡಿದ್ದು ನಿಜ. ಇದು ಒಂದೇ ಅಲ್ಲ, ಬಿಜಾಪುರ ಜಿಲ್ಲೆಯಲ್ಲಿ Wine policy ಯನ್ನು ಮಾಡುತ್ತೇವೆಂದು ತಾವು ಏನು ಕೇಳಿದ್ದೀರಿ, ಅದರ ಬಗ್ಗೆ ಸರ್ಕಾರ ನಿರ್ಧಾರವನ್ನು ತೆಗೆದುಕೊಂಡಿರುವುದು ನಿಜ, ಈಗಾಗಲೇ ಹುಬ್ಬಳ್ಳಿಯಲ್ಲಿ Industrialists ಗಳ ಜೊತೆಯಲ್ಲಿ ಮಾತನಾಡಿ, ಅಲ್ಲಿ Software Tech Park ಅನ್ನು ಪ್ರಾರಂಭ ಮಾಡುವುದಕ್ಕೆ ನಾವು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಿರುವುದು ನಿಜ. ಈಗಾಗಲೇ ಬಾಗಲಕೋಟೆ ಜಿಲ್ಲೆಯಲ್ಲಿ, ಎಲ್ಲಾ ಜಿಲ್ಲೆಗಳಲ್ಲೂ....

ಉಪಾಧ್ಯಕ್ಷರು: ಹೇಗೂ ನೀವು ಉತ್ತರ ಕೊಡಬೇಕು, ಆಗ ಎಲ್ಲವನ್ನು ಹೇಳುವಿರಂತೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಸುಮಾರು ನೂರು ನಿಜ ಹೇಳಿದ್ದಾರೆ, ಒಂದಾದರೂ ಸುಳ್ಳು ಹೇಳಲಿ. ಅವರು ಇಷ್ಟು ನಿಜ ಹೇಳಿಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬೇಕು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ರಾತ್ರಿ ತಮ್ಮ ಹತ್ತಿರ ಬರುತ್ತೇನೆ, ತಾವು ಹೇಳಿಕೊಡಿ, ಅದನ್ನು ನಾಳೆ ಬೆಳಗ್ಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಬಂಡವಾಳ ಎಲ್ಲಿಂದ ಬರುತ್ತದೆ, ಎಲ್ಲಿದೆ. ಬಂಡವಾಳ ಅದು ಎಲ್ಲಿಂದ, ಯಾವ ರೈಲಿನಲ್ಲಿ, ಯಾವ ಲಾರಿಯಲ್ಲಿ ಬರುತ್ತದೆ, ಎಲ್ಲಿಂದ ತುಂಬಿಕೊಂಡ ಬರುತ್ತಾರೆನ್ನುವುದು ನನಗಂತೂ ಅರ್ಥವಾಗಲಿಲ್ಲ. ಸುಮ್ಮನೆ ಬಂಡವಾಳ ಬರುತ್ತದೆ, ಬಂಡವಾಳ ಬರುತ್ತದೆ ಎನ್ನುವುದನ್ನಂತೂ ಹೇಳುತ್ತಿದ್ದಾರೆ. ಹಡಗಿನಲ್ಲಿ ಬರುತ್ತಿದೆಯೇ? ಎಲ್ಲಿಂದ ಬರುತ್ತಿದೆ ಮಾನ್ಯ ಸುಬ್ರಹ್ಮಣ್ಯ

ನಾಯ್ಡುರವರೇ? ಎಲ್ಲಿದೆ ಬಂಡವಾಳ? ಎಲ್ಲಿ ಬರುತ್ತಿದೆ? ಈಗಾಗಲೇ ನಮ್ಮ ಖಜಾನೆ ತುಂಬಿ ಹೋಗಿದೆ. ಇನ್ನು ಆ ಬಂಡವಾಳ ಬಂದು, ಅದಕ್ಕೆ ಬೇರೆ ಖಜಾನೆ ಮಾಡಿ, ಅದಕ್ಕೆ ತುಂಬಿ ಖರ್ಚು ಮಾಡುವುದೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇಷ್ಟು ದಿನ ಬಂಡವಾಳ ಹೇಗೆ ಬಂತು? ಇಲ್ಲಿ foundry ಆಯಿತಲ್ಲಾ ಆ ಕಾರ್ಖಾನೆ ಹೇಗೆ ಬಂತು? Cement Factoryಗೆ ಬಂಡವಾಳ ಎಲ್ಲಿಂದ ಬಂತು? Steel Factory ಗೆ ಬಂಡವಾಳ ಎಲ್ಲಿಂದ ಬಂತು? ಆಹಾರ ಸಂಸ್ಕರಣಾ ಘಟಕಗಳಿಗೆ ಬಂಡವಾಳ ಎಲ್ಲಿಂದ ಬಂತು? I.T.Factoryಗಳಿಗೆ ಬಂಡವಾಳ ಎಲ್ಲಿಂದ ಬಂತು? B.T.Factoryಗಳಿಗೆ ಬಂಡವಾಳ ಎಲ್ಲಿಂದ ಬಂತು? ಇವುಗಳಿಗೆಲ್ಲಾ ಎಲ್ಲಿಂದ ಬಂಡವಾಳ ಬಂತೋ ಅದೇ ರೀತಿಯಲ್ಲಿ ಈಗಲೂ ಬಂಡವಾಳ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಶ್ರೀಮದ್‌ರಮಾರಮಣ ಗೋವಿಂದಾ, ಗೋವಿಂದ!

ಒಬ್ಬ ಮಾನ್ಯ ಸದಸ್ಯರು: ಜನಾರ್ಧನ ರೆಡ್ಡಿ C.D. ಗೋವಿಂದಾ, ಗೋವಿಂದಾ!

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆ ಗೋವಿಂದವನ್ನು ತಾವೇ ಮಾಡಿರುವುದು. ಕಾಂಗ್ರೆಸ್‌ನವರಿಗೇ ಗೋವಿಂದಾ ಆಗಿದೆ.

ಉಪಾಧ್ಯಕ್ಷರು: ಮಾನ್ಯ ಶಿವಾನಂದ ಪಾಟೀಲ್‌ರವರೇ, ಬೇಗ ಮುಗಿಸಿಬಿಡಿ. ಬಹಳ ಹೊತ್ತಾಯಿತು, ಮಾತನಾಡುವವರು ಬಹಳ ಜನ ಇದ್ದಾರೆ, ಅವರೇನೂ ಮಾತನಾಡುವುದು ಬೇಡವೇ? ಮಾತನಾಡುವವರು ಇನ್ನೂ 25–30 ಜನರಿದ್ದಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಆಯಿತು, ಬೇಗ ಮುಗಿಸುತ್ತೇನೆ. ಇವತ್ತಿನ ದಿವಸ ನಾನು ಸಮಗ್ರ ಕರ್ನಾಟಕದ ಚಿಂತನೆಯನ್ನು ಮಾಡತಕ್ಕಂಥ ಸಮಗ್ರ ನಾಯಕರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಆ ಪಕ್ಷದವರು, ಈ ಪಕ್ಷದವರು ಎನ್ನತಕ್ಕಂಥ ಮಾತನ್ನು ನಾನು ಆಡುವುದಿಲ್ಲ, ವಾಸ್ತವಿಕವಾಗಿ ಉತ್ತರ ಕರ್ನಾಟಕದ ಜನ ಬೆಂಗಳೂರಿಗೆ ಹೋಗಿ ಮುಟ್ಟಬೇಕಾದರೇ 700 ಕಿ.ಮೀ. ಆಗುತ್ತದೆ. ಅಲ್ಲಿಗೆ ಹೋದ ಮೇಲೆ, ಅಲ್ಲಿರತಕ್ಕಂಥ ವಾತಾವರಣದಲ್ಲಿ ನಾವು ಬದುಕಬೇಕಾದರೆ ಬಹಳ ಕಷ್ಟವಿದೆ. ಅಲ್ಲಿರುವಂಥ ಒಂದು Sq.ft. ಜಮೀನಿನ ಬೆಲೆ ಹಾಗೂ ಉತ್ತರ ಕರ್ನಾಟಕದಲ್ಲಿರುವಂಥ ಒಂದು Sq.ft. ಜಮೀನಿನ ಬೆಲೆಯನ್ನು ಗಣನೆಗೆ ತೆಗೆದುಕೊಂಡು ಇವರು ಆ ನಗರಗಳನ್ನು ಬೆಳೆಸಿದರೆ ಭವಿಷ್ಯದಲ್ಲಿ ಇವರು ಯಾವುದೇ ನಿಂದನೆಗೆ ಗುರಿಯಾಗಲಿಕ್ಕಿಲ್ಲ ಎನ್ನತಕ್ಕಂಥ ಮಾತನ್ನು ನಾನು

ಆಡಬೇಕಾಗುತ್ತದೆ. ಏಕೆಂದರೆ, ಕೋಲ್ಕತ್ತವನ್ನೂ ಕೂಡ ಇದೇ ದೃಷ್ಟಿಕೋನವನ್ನಿಟ್ಟುಕೊಂಡು ಬೆಳೆಸಿ, ಇವತ್ತು ಆ ಊರನ್ನು dying city ಎಂದು ಕರೆಯುತ್ತಿದ್ದೇವೆ. ಇವತ್ತು ಬೆಂಗಳೂರನ್ನೂ ಅಷ್ಟರಮಟ್ಟಿಗೆ ಬೆಳೆಸಿ, ಬೆಂಗಳೂರಿನಲ್ಲಿರತಕ್ಕಂಥ ನೂರಕ್ಕೆ ಅರವತ್ತರಷ್ಟು ಜನ ಕನ್ನಡಿಗರಲ್ಲ ಎನ್ನುವಂಥ ಮಾತನ್ನು ವಾಟಾಳ್ ನಾಗರಾಜ್ ರವರು ಹೇಳುತ್ತಿದ್ದಾರೆ. ಈಗ ಬೆಳಗಾವಿಯನ್ನು ಉಳಿಸಿಕೊಳ್ಳಲಿಕ್ಕೆ ಇಲ್ಲಿ ಇವತ್ತು ನೀವು ಈ ಅಧಿವೇಶನವನ್ನು ಮಾಡಿದ್ದೀರಿ. ಭವಿಷ್ಯದಲ್ಲಿ ಬೆಂಗಳೂರನ್ನು ಉಳಿಸಿಕೊಳ್ಳಲಿಕ್ಕೆ ಇಂಥ ಇನ್ನೂ ಹತ್ತು ಅಧಿವೇಶನಗಳನ್ನು ನೀವು ಮಾಡಬೇಕಾದ ಸ್ಥಿತಿ ಬರಬಹುದೇನೋ ಎನ್ನತಕ್ಕಂಥ ಭಯ ನಮ್ಮ ಮನಸ್ಸಿನಲ್ಲಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರನ್ನು ಎಷ್ಟರಮಟ್ಟಿಗೆ ಬೆಳೆಸಬೇಕಾಗಿತ್ತೋ ಅಷ್ಟನ್ನು ದೇವರಾಜ ಅರಸುರವರು ಬೆಳೆಸಿದ್ದಾರೆ. ಏಕೆಂದರೆ ಮೈಸೂರನ್ನು ಕಿತ್ತುಕೊಂಡು ಬಂದು ಬೆಂಗಳೂರನ್ನು ರಾಜಧಾನಿಯನ್ನಾಗಿ ಮಾಡಿರತಕ್ಕಂಥ ಕೀರ್ತಿ ದೇವರಾಜ ಅರಸುರವರಿಗೆ ಹೋಗುತ್ತದೆ. ಕನಿಷ್ಠ ಪಕ್ಷ ಇವತ್ತು ಆ ರಾಜಧಾನಿಯಿಂದ ಸ್ವಲ್ಪ ಮುಂದೆ ಚಿತ್ರದುರ್ಗ ಕಡೆಗೆ ಬನ್ನಿ, ಹೊಸಪೇಟೆ ಕಡೆಗೆ ಬನ್ನಿ, ಹೀಗೆ ಬೇರೆ ಯಾವ ಕಡೆಗಾದರೂ ಬಂದರೆ, ನಿಜವಾಗಲೂ ಬೆಂಗಳೂರಿನಲ್ಲಿರತಕ್ಕಂಥ ಜನ ನೆಮ್ಮದಿಯ ಉಸಿರನ್ನು ಬಿಡಬಹುದು ಎನ್ನತಕ್ಕಂಥ ಆಸೆ ನನ್ನದಾಗಿದೆ. ಏಕೆಂದರೆ, ಸಮಗ್ರವಾಗಿ ಇಡೀ ಕರ್ನಾಟಕ ಬೆಳೆಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ನಿಮ್ಮಲ್ಲಿ ಉಳಿದಿರುವುದು ಇದೊಂದೇ ಆಯುಧ. ಅದನ್ನು ಬಿಟ್ಟು ನೀವು ಬೆಂಗಳೂರಿಗೆ ಎಷ್ಟೇ Infrastructure ಅನ್ನು ಕೊಟ್ಟರೂ ಪ್ರಯೋಜನವಾಗುವುದಿಲ್ಲ. ಬೆಂಗಳೂರಿಗೆ ಕಾವೇರಿ ಕುಡಿಯುವ ನೀರನ್ನು ತರಬೇಕಾದರೆ, 4,000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೀರಿ. ಮೆಟ್ರೋ ರೈಲು ಮಾಡುತ್ತೇವೆ, ಮಾನೋ ರೈಲು ಮಾಡುತ್ತೇವೆ, fly over ಮಾಡುತ್ತೇವೆ, foot path ಮಾಡುತ್ತೇವೆ ಎನ್ನತಕ್ಕಂಥ ಮಾತುಗಳನ್ನು ನೀವು ಎಷ್ಟೇ ಅಡಿ ಅಭಿವೃದ್ಧಿ ಪಡಿಸಿದರೂ ಕೂಡ ಒಂದು ದಿವಸ ಬೆಂಗಳೂರು ನಿಮ್ಮ ಇತಿಮಿತಿಯಲ್ಲಿ ಉಳಿಯಲಿಕ್ಕಿಲ್ಲ ಎನ್ನತಕ್ಕಂಥ ಭಯದ ವಾತಾವರಣ ಇವತ್ತು ಬೆಂಗಳೂರಿನಲ್ಲಿ ಸೃಷ್ಟಿಯಾಗಿದೆ. ಅಲ್ಲಿ ಪ್ರತಿನಿತ್ಯ 24 ಲಕ್ಷ vehicle ಗಳು ರಸ್ತೆಯಲ್ಲಿ ಅಡ್ಡಾಡುತ್ತಿವೆ. ಇವುಗಳನ್ನೆಲ್ಲಾ ಗಣನೆಯಲ್ಲಿಟ್ಟುಕೊಂಡು ನೀವು ಬೆಂಗಳೂರನ್ನು ಬೆಳೆಸಿದರೆ ಭವಿಷ್ಯದಲ್ಲಿ ಪ್ರಾಯಶಃ ನೀವು ಈ ಸಮಗ್ರ ಕರ್ನಾಟಕದ ಚಿಂತನೆಯನ್ನು ಮಾಡಿದ ಹಾಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ವಿಶೇಷವಾಗಿ ಬರಗಾಲದ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು

ಮುಗಿಸುತ್ತೇನೆ. ನೂರಕ್ಕೆ ಎಪ್ಪತ್ತರಷ್ಟು ಮುಂಗಾರಿ ಬಿತ್ತನೆ ಬಿತ್ತತಕ್ಕಂಥ ರಾಜ್ಯ ನಮ್ಮದು. ನೂರಕ್ಕೆ ಎಪ್ಪತ್ತರಷ್ಟು ಬಿತ್ತನೆ ಪೂರ್ತಿಯಾಗಿದೆ ಎನ್ನತಕ್ಕಂಥ ಮಾತು ಕಂದಾಯ ಸಚಿವರಿಗೆ ಗೊತ್ತಿದೆ. ನೂರಕ್ಕೆ ಎಪ್ಪತ್ತರಷ್ಟು ಭೌಗೋಳಿಕವಾಗಿ ಬಿತ್ತಿರತಕ್ಕಂಥ ಕ್ಷೇತ್ರಗಳಲ್ಲಿ ನೂರಕ್ಕೆ ಎಂಭತ್ತರಷ್ಟು ಕ್ಷೇತ್ರ ಒಣಗಿ ಹೋಗಿದೆ. ಆದರೆ ನೀವು ಇದುವರೆಗೂ ಹತ್ತು ಪೈಸೆ ಪರಿಹಾರ ಧನವನ್ನೂ ಕೊಟ್ಟಿಲ್ಲ. ಈ ಮಾತನ್ನು ಅಂಕಿಸಂಖ್ಯೆಗೆ ಅನುಗುಣವಾಗಿ ರಾಯರೆಡ್ಡಿಯವರು ಹೇಳಿದ್ದಾರೆ. ಇವತ್ತು ರಾಜ್ಯದ 120 ತಾಲ್ಲೂಕುಗಳಲ್ಲಿ ಬರಗಾಲವಿದ್ದರೂ ತಾವು ಇನ್ನೂ ಕಣ್ಣುಮುಚ್ಚಿ ಕುಳಿತುಕೊಂಡಿದ್ದರೆ ಖಂಡಿತವಾಗಿಯೂ ಜನ ತಮ್ಮನ್ನು ಕ್ಷಮಿಸಲಿಕ್ಕಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ, ಹಿಂಗಾರಿ ಬಿತ್ತನೆಯನ್ನು ಮಾಡತಕ್ಕಂಥ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಬೀಜದ ಕೊರತೆ ಇದೆ ಎನ್ನತಕ್ಕಂಥ ಮಾತನ್ನು ನಾವು ಪದೇಪದೇ ಹೇಳಿದ್ದೇವೆ. ಆದರೆ ನೀವು ಏನು ಹೇಳುತ್ತೀರಿ ಎಂದರೆ, ನಾವು ನಿನ್ನೆಯೇ order ಮಾಡಿದ್ದೇವೆ, ರೈತ ಸಂಪರ್ಕ ಕೇಂದ್ರಗಳಲ್ಲಿ ಬೀಜ ಪೂರೈಕೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಮೇಲಿಂದ ಮೇಲೆ ಹೇಳುತ್ತೀರಿ. ಆದರೆ ಇವತ್ತಿನವರೆಗೂ ಯಾವುದೇ ರೈತ ಸಂಪರ್ಕ ಕೇಂದ್ರದಲ್ಲಿ 10 ಪೈಸೆಯಷ್ಟು ಬೀಜವೂ ಕೂಡ ರೈತರಿಗೆ ಸಿಕ್ಕಿಲ್ಲ. ಆದರೆ ಹಿಂಗಾರಿ ಬಿತ್ತನೆ ಪ್ರಾರಂಭವಾಗಿ ನೂರಕ್ಕೆ ನಲವತ್ತರಷ್ಟು ಮುಗಿದಿರುವ ವಿಷಯ ಕೂಡ ಸರ್ಕಾರದ ಗಮನದಲ್ಲಿರಬಹುದು ಎಂದು ನಾನು ಭಾವಿಸುತ್ತೇನೆ. ಈ ಎಲ್ಲ ಹಿನ್ನೆಲೆಯನ್ನು ಅರಿತುಕೊಂಡು, ಈ ಅಧಿವೇಶನ ಉತ್ತರ ಕರ್ನಾಟಕದ ಕನಸಾಗಬಾರದು, ಇದು ನನಸಾಗಿ ಉಳಿಯಬೇಕಾದರೆ, ಇವತ್ತು ನೀವು ಮಾಡಿರುವ ದೃಢ ಸಂಕಲ್ಪವನ್ನು ಚಾಚೂ ತಪ್ಪದೇ ಪಾಲಿಸತಕ್ಕಂಥ ದಿಸೆಯಲ್ಲಿ ಈ ಸರ್ಕಾರ ಸಾಗಬೇಕು ಎಂದು ನಾನು ಹಾರೈಸುತ್ತೇನೆ. ಇಷ್ಟು ಬೇಗ ನಾವು ಈ ವಿಚಾರದಲ್ಲಿ ಇಷ್ಟು ತೀಕ್ಷ್ಣವಾಗಿ ಮಾತನಾಡಬಾರದು. ಆದರೆ ಇವತ್ತು ನೀವು ಉತ್ತರ ಕರ್ನಾಟಕದಲ್ಲಿ ಮಾಡಿರುವ ಅಧಿವೇಶನಕ್ಕೆ ಭವಿಷ್ಯದಲ್ಲಿ ನೀವು ಪ್ರತ್ಯುತ್ತರವನ್ನು ಕೊಡದೇ ಹೋದರೆ, ಈ ಭಾಗದ ಜನರ ನಿಂದನೆಗೆ ನೀವು ಗುರಿತಯಾಗುತ್ತೀರಿ ಎನ್ನತಕ್ಕಂಥಾದ್ದನ್ನು ನೀವು ಮರೆಯಬಾರದು ಎನ್ನತಕ್ಕಂಥ ಮಾತನ್ನು ಹೇಳಿ ತಮಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್‌ರವರು, ಡಾಕ್ಟರೇ, ಹತ್ತು ನಿಮಿಷದಲ್ಲಿ ಮುಗಿಸಬೇಕು, time ಇಟ್ಟುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ

ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೊದಲನೆಯದಾಗಿ, ಈ ಸರ್ಕಾರ ಈ ಅಧಿವೇಶನವನ್ನು ಬೆಳಗಾವಿಯಲ್ಲಿ ಮಾಡುತ್ತಿರುವುದು ಸ್ವಾಗತಾರ್ಹ. ಇವತ್ತು ಸರ್ಕಾರ ಈ ಒಂದು ಅಧಿವೇಶನವನ್ನು ಮಾಡಿ ಈ ಭಾಗದ ಜನರ ಆಸೆ ಆಶೋತ್ತರಗಳನ್ನು ಕೆರಳಿಸಿದ್ದಾರೆ, ಮುಂದೆ ಅದಕ್ಕೆ ಅವರು ಸ್ಪಂದಿಸದೇ ಹೋದರೆ ಅದಕ್ಕೆ ತಕ್ಕ ಪಾಠವನ್ನೂ ಕೂಡ ಈ ಭಾಗದ ಜನರು ಕಲಿಸೇ ಕಲಿಸುತ್ತಾರೆ ಎನ್ನುವುದನ್ನೂ ಕೂಡ ಅವರು ಮರೆಯಬಾರದು. ಹಣಕಾಸಿನ ಸಚಿವರು ಈಗ ಇಲ್ಲಿ ಇಲ್ಲ. ನಾನು ಏನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ ಎಂದರೆ ನೀವು ತರಾತುರಿಯಲ್ಲಿ ಬೆಳಗಾವಿಯಲ್ಲಿ ಅಧಿವೇಶನವನ್ನು ಮಾಡಿ, ಪೂರಕ ಅಂದಾಜಿನಲ್ಲಿ 1,400 ಕೋಟಿ ರೂ.ಗಳಿಗೆ ಒಪ್ಪಿಗೆಯನ್ನು ತೆಗೆದುಕೊಂಡರೂ, ಅದರಲ್ಲಿ ಒಂದು ಪೈಸೆಯನ್ನೂ ಕೂಡ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಅಥವಾ ನಂಜುಂಡಪ್ಪನವರ ವರದಿಯ ಅನುಷ್ಠಾನಕ್ಕಾಗಿ ಕೊಟ್ಟಿರುವಿರಾ? 1,400 ಕೋಟಿ ರೂ.ಗಳಲ್ಲಿ ಉತ್ತರ ಕರ್ನಾಟಕಕ್ಕೆ ಒಂದು ಬಿಡಿಪೈಸೆಯನ್ನೂ ನೀವು ಕೊಟ್ಟಿಲ್ಲ. ನೀವು ಕೊಡಬೇಕಾಗಿತ್ತು. ಏಕೆಂದರೆ ನೀವು ಉತ್ತರ ಕರ್ನಾಟಕದಲ್ಲಿ ಅಧಿವೇಶನವನ್ನು ಮಾಡಿದ್ದರಿಂದ ಅಲ್ಲಿಗೆ ನೀವು ವಿಶೇಷವಾಗಿರತಕ್ಕಂಥ ಕೊಡುಗೆಯನ್ನೇನಾದರೂ ಕೊಡಬೇಕಾಗಿತ್ತು. ನೀವು ಅದನ್ನು ಕೊಟ್ಟಿಲ್ಲ. ಅದು ಬಹಳ ವಿಷಾದನೀಯ. ಇನ್ನೊಂದು ವಿಷಯವೆಂದರೆ, ಗುಲ್ಬರ್ಗ ಜಿಲ್ಲೆಯಲ್ಲಿ ಅನಾವೃಷ್ಟಿಯಿಂದ ಕಡಲೆ, ಹೆಸರು ಮತ್ತು ಉದ್ದು ಸಂಪೂರ್ಣವಾಗಿ ನಾಶವಾಗಿದೆ. ಅದಕ್ಕೆ ಪರಿಹಾರವನ್ನು ಕೊಡಲು ಸರ್ಕಾರ ಇಲ್ಲಿಯವರೆಗೂ ಮುಂದೆ ಬಂದಿಲ್ಲ. ಅದಲ್ಲದೇ, ನಮ್ಮ ಜಿಲ್ಲೆಯಲ್ಲಿ ಸಮರ್ಪಕವಾಗಿ ಮಳೆಯಾಗಿಲ್ಲ. ಮಹಾರಾಷ್ಟ್ರದಲ್ಲಿ ಮಳೆಯಾಗಿ ಭೀಮಾ ಮತ್ತು ಕೃಷ್ಣಾ ನದಿಗಳ ದಂಡೆಗಳಲ್ಲಿರತಕ್ಕಂಥ ಹಳ್ಳಿಗಳಲ್ಲಿ ಪ್ರವಾಹ ಬಂದು ಬಹಳಷ್ಟು ನಷ್ಟವಾಗಿದೆ. ಹಿಂದೆ ಇದ್ದಂಥ ಮಾನ್ಯ ಧರಂಸಿಂಗ್‌ರವರ ಸರ್ಕಾರ 50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಅಲ್ಲಿ ಕೆಲಸ ಮಾಡಿತ್ತು. ಆದರೆ ಈ ಸರ್ಕಾರ ಇವತ್ತು ನಮ್ಮ ಜಿಲ್ಲೆಗೆ 10 ಕೋಟಿ ರೂ.ಗಳನ್ನೂ ಕೂಡ ಬಿಡುಗಡೆ ಮಾಡಿಲ್ಲ. ಇದು ಬಹಳ ವಿಷಾದನೀಯ. ಇನ್ನೊಂದು ವಿಷಯವೆಂದರೆ, ಈಗಾಗಲೇ ಶಿವಾನಂದ ಪಾಟೀಲ್ ರವರು ಹೇಳಿದ ಹಾಗೆ ಕಡಲೆ ಮತ್ತು ಜೋಳವನ್ನು ಬಿತ್ತತಕ್ಕಂಥ ಹಿಂಗಾರಿನಲ್ಲಿ, ಬೀಜಗಳಿಗೆ 75% subsidy ಕೊಡುತ್ತೇವೆ ಎಂದು ಈಗಾಗಲೇ ಮಂತ್ರಿಗಳು ಹೇಳಿದರು, ಆದರೆ ಯಾವುದೇ ರೈತ ಸಂಪರ್ಕ ಕೇಂದ್ರದಲ್ಲಿ ಇಲ್ಲಿಯವರೆಗೆ ಬೀಜಗಳಿಗೆ 75% subsidy ಯನ್ನು ಕೊಡುತ್ತಿಲ್ಲ. ತಕ್ಷಣವಾಗಿ ಅವರು ಅದಕ್ಕೆ ಆದೇಶ ಕೊಡಬೇಕು. ಇವತ್ತು 112 ತಾಲ್ಲೂಕುಗಳನ್ನು scarcity ಎಂದು ನೀವು

announce ಮಾಡಿದ್ದೀರಿ. ಆದರೆ ಇವತ್ತು ಹೈದರಾಬಾದ್ ಕರ್ನಾಟಕದಲ್ಲಿ, ವಿಶೇಷವಾಗಿ ಗುಲ್ಬರ್ಗ, ರಾಯಚೂರು, ಬೀದರ್, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ನೀವು ಹಣ ಬಿಡುಗಡೆ ಮಾಡಿಲ್ಲ. ಏಕೆಂದರೆ ಈ ಜಿಲ್ಲೆಗಳಲ್ಲಿ ಉದ್ಯೋಗ ಖಾತರಿ ಯೋಜನೆ ಇದೆ ಎಂದು ಹೇಳಿ ಹಣ ಬಿಡುಗಡೆ ಮಾಡಿಲ್ಲ. Revenue Minister ಇಲ್ಲೇ ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ಉದ್ಯೋಗ ಖಾತರಿ ಯೋಜನೆ ಇರಬಹುದು. ಅದೇ ರೀತಿ ಬೇರೆ ಜಿಲ್ಲೆಗಳಲ್ಲಿ S.J.R.Y. Programme ಕೂಡ ಇದೆ. ಇವತ್ತು ಅದರ ಬದಲಾಗಿ ಉದ್ಯೋಗ ಖಾತರಿ ಯೋಜನೆ ಬಂದಿದೆ. ಅದಕ್ಕಾಗಿ ನಿಮಗೆ scarcity ಹಣ ಕೊಡುವುದಿಲ್ಲವೆಂದು ಹೇಳಿದರೆ ನಮ್ಮ ಜಿಲ್ಲೆಗಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅದನ್ನು ನೀವು ಬದಲಾಯಿಸಬೇಕು. ಒಂದು ತಾಲ್ಲೂಕಿಗೆ ಒಂದು ಕೋಟಿ ರೂ.ಗಳಂತೆ ಬಿಡುಗಡೆ ಮಾಡಲೇಬೇಕು. ತಾವು ಒಂದು ತಾಲ್ಲೂಕಿಗೆ ಒಂದು, ಇನ್ನೊಂದು ತಾಲ್ಲೂಕಿಗೆ ಒಂದು ರೀತಿಯ ತಾರತಮ್ಯ ಮಾಡಬಾರದು. ಸರ್ಕಾರ ನಾರ್ಮ್ಸ್ ಅನ್ನು ಸಡಿಲಿಕೆ ಮಾಡಬೇಕೆಂಬ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ಹೇಳಿದ್ದಾರೆ. ಆದರೆ, ಸರ್ಕಾರ ಬೆಳೆ ಹಾನಿಗೆ ಇನ್ನೂ ಪರಿಹಾರವನ್ನು ಘೋಷಣೆ ಮಾಡಿಲ್ಲ. ಏಕೆಂದರೆ, ಇವತ್ತು ಸಂಪೂರ್ಣವಾಗಿ ಉದ್ದು, ಹೆಸರು ಬೆಳೆಗಳು ಹಾಳಾಗಿದ್ದು ಅದಕ್ಕೆ ಸರ್ಕಾರ ಪರಿಹಾರ ಕೊಡಲೇಬೇಕೆಂದು ರೈತರು ನಿರೀಕ್ಷೆ ಮಾಡುತ್ತಿದ್ದಾರೆ. ಬಹಳಷ್ಟು ನಮ್ಮ ಸ್ನೇಹಿತರು ಮಾತನಾಡಬೇಕಿರುವುದರಿಂದ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇವತ್ತು ವಿಶೇಷವಾಗಿ ನಂಜುಂಡಪ್ಪ ವರದಿ ಬಗ್ಗೆ ಸರ್ಕಾರದವರು ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಅಧಿವೇಶನ ಮಾಡಿದ್ದೀರಿ. ಇದೇ ರೀತಿಯಾಗಿ ಅಧಿವೇಶನವನ್ನು ಗುಲ್ಬರ್ಗಾದಲ್ಲಿ ಕೂಡ ಮಾಡಬೇಕು. ಏಕೆಂದರೆ, ಇವತ್ತು ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದ ಪ್ರದೇಶವಾಗಿದೆ. Article 371 ಗೆ amendment ಆಗಬೇಕೆಂಬುದು ನಮ್ಮ ಬಹಳ ವರ್ಷಗಳ ಹೋರಾಟವಿದೆ. ಇವತ್ತು ಆ ಭಾಗದ ಜನರೂ ಕೂಡ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಇದೇ ರೀತಿಯ ಒಂದು ಅಧಿವೇಶನ ಹೈದರಾಬಾದ್ ಕರ್ನಾಟಕದಲ್ಲೂ ಕೂಡ ಆಗಬೇಕು. ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಾಗಬೇಕು. ಇವತ್ತು ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುತ್ತೇವೆಂದು ಸರ್ಕಾರ ಹೇಳುತ್ತಿದೆ. ಆದರೆ, ಇದುವರೆಗೆ ನೀವು ಏನನ್ನೂ announce ಮಾಡಿಲ್ಲ. ಈ ಸರ್ಕಾರಕ್ಕೆ ನಂಜುಂಡಪ್ಪ ವರದಿ ಬಗ್ಗೆ ಇವತ್ತು ಏನಾದರೂ ಕಳಕಳಿ, commitment ಇದೆಯೇ ಎಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಈ ಪ್ರಶ್ನೆಯನ್ನು ನಾನು ರಾಜಕೀಯ ಪ್ರೇರಣೆಯಿಂದ ಮಾಡುತ್ತಿಲ್ಲ. ಏಕೆಂದರೆ, ಸರ್ಕಾರ ಮಾಡಿಕೊಂಡು

ಬಂದಿರತಕ್ಕಂಥ ಕಾರ್ಯಕ್ರಮಗಳು, ಸರ್ಕಾರ ನಡೆದುಕೊಂಡು ಬಂದಿರತಕ್ಕಂಥ ಹಾದಿಯನ್ನು ನೋಡಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶ್ರೀ ಬಳಿಗಾರ್‌ರವರು RDPR Secretary ಆಗಿದ್ದಾಗ ನಂಜುಂಡಪ್ಪ ವರದಿ ಆಧಾರದ ಮೇಲೆ ಅವರು Road Fund ಅನ್ನು ಬಿಡುಗಡೆ ಮಾಡಿದ್ದರು. ಆದರೆ, ಈ ಸರ್ಕಾರ ಹಾಗೆ ಮಾಡಲಿಲ್ಲ. ಆದರೆ, ಸರ್ಕಾರ 350 High School ಗಳಿಗೆ ಮಂಜೂರಾತಿ ಕೊಟ್ಟಿತ್ತು. ಆದರೆ, ನೀವು ಅದನ್ನು ನಂಜುಂಡಪ್ಪ ವರದಿ ಆಧಾರದ ಮೇಲೆ ಅನುಷ್ಠಾನ ಮಾಡಲಿಲ್ಲ. ನೀವು ಕೇವಲ ಜನತಾದಳ, ಬಿಜೆಪಿಯ ಶಾಸಕರಿದ್ದಲ್ಲಿಗೆ ಮಾತ್ರ ಜಾಸ್ತಿ ಕೊಟ್ಟಿದ್ದೀರಿ. ಇವತ್ತು ನೀವು PUC College ಮಂಜೂರು ಮಾಡಿದ್ದೀರಿ. ಇದನ್ನು ನೀವು ನಂಜುಂಡಪ್ಪ ವರದಿ ಆಧಾರದ ಮೇಲೆ ಕೊಟ್ಟಿದ್ದೀರಾ? ಇವತ್ತು ನೀವು NABARD ಅಡಿಯಲ್ಲಿ road ಕೊಟ್ಟಿದ್ದೀರಿ. ಮಾನ್ಯ ರೇವಣ್ಣವರು ಇಲ್ಲಿ ಇಲ್ಲ. ನೀವು NABARD ಅಡಿಯಲ್ಲಿ ರಸ್ತೆಗಳನ್ನು ಕೊಡುವಾಗ ನಂಜುಂಡಪ್ಪ ವರದಿಯಲ್ಲಿ ಇರತಕ್ಕಂಥ 39 ಅತಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಮಾನ್ಯತೆ ಕೊಡಿ ಎಂದರೆ ಅವರು ಕೊಡಲಿಲ್ಲ. ಅವರು ಕೇವಲ ಬಿಜೆಪಿ, ಜನತಾದಳ ಶಾಸಕರು ಎಲ್ಲಿರುತ್ತಾರೆ ಅಲ್ಲಿಗೆ ಜಾಸ್ತಿ ಕೊಟ್ಟರು. CRF ನಲ್ಲಿ ಇವತ್ತು ನೀವು proposal ಕೊಟ್ಟಿದ್ದು, ನಂಜುಂಡಪ್ಪ ವರದಿ ಆಧಾರದ ಮೇಲೆ proposal ಕೊಟ್ಟಿದ್ದೀರಾ? ಇವತ್ತು ನೀವು library ಅನ್ನು sanction ಮಾಡಿದ್ದೀರಿ. ಅದನ್ನು ನೀವು ನಂಜುಂಡಪ್ಪ ವರದಿ ಆಧಾರದ ಮೇಲೆ sanction ಮಾಡಿದ್ದೀರಾ? ಈ ಸರ್ಕಾರ ಇಲ್ಲಿಯವರೆಗೆ ಯಾವ್ಯಾವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದೆ? ಕೇವಲ ಹಾಸನ, ಮಂಡ್ಯ ಮತ್ತು ಹಳೆ ಮೈಸೂರು ಜಿಲ್ಲೆಗೆ ವಿಶೇಷವಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಪ್ರಭಾವಿ ಮಂತ್ರಿಗಳು ಎಲ್ಲಿದ್ದಾರೆ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮಾಡಲಿಕ್ಕೆ ನೀವು ಮಾಡಿದ್ದೀರಿಯೇ ವಿನಃ ನಂಜುಂಡಪ್ಪ ವರದಿ ಬಗ್ಗೆ ನೀವು ಎಲ್ಲಿಯೂ ಕಾಳಜಿ ತೋರಿಸಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಏಕೆಂದರೆ, ನಾನು ಸರ್ಕಾರ ಮಾಡಿರತಕ್ಕಂಥ ಕಾರ್ಯಕ್ರಮಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ನೀವು ಹಿಂದಿನ ಎಲ್ಲಾ ಕಡತಗಳನ್ನು ತೆಗೆಸಿ ನೋಡಿ. ಯಾವ ಕಾರ್ಯಕ್ರಮಗಳಲ್ಲಿ ನೀವು ನಂಜುಂಡಪ್ಪ ವರದಿಗೆ ಆದ್ಯತೆ ಕೊಟ್ಟಿದ್ದೀರಿ? ನೀವು ಇವತ್ತು ಪೂರಕ ಅಂದಾಜಿನಲ್ಲೂ ಕೂಡ ನಂಜುಂಡಪ್ಪ ವರದಿಗೆ ಯಾವುದೇ ಆದ್ಯತೆ ಕೊಟ್ಟಿದ್ದೀರಿ? ನೀವು ಇವತ್ತು ಪೂರಕ ಅಂದಾಜಿನಲ್ಲೂ ಕೂಡ ನಂಜುಂಡಪ್ಪ ವರದಿಗೆ ಯಾವುದೇ ಆದ್ಯತೆ ಕೊಟ್ಟಿಲ್ಲ. ಇವತ್ತು ನೀವು ಉತ್ತರ ಕರ್ನಾಟಕದಲ್ಲಿ

ಅಧಿವೇಶನ ಮಾಡುತ್ತಿದ್ದೀರಿ. ಯಾವ ಕಾರಣಕ್ಕೋಸ್ಕರ ಅಧಿವೇಶನ ಮಾಡುತ್ತಿದ್ದೀರಿ? ನೀವು office of profit bill pass ಮಾಡಿಕೊಳ್ಳುವುದಕ್ಕೋಸ್ಕರ ಮಾಡುತ್ತಿದ್ದೀರಾ? ನೀವು Greater Bangalore Bill ಗೋಸ್ಕರ ಮಾಡುತ್ತಿದ್ದೀರಾ? ನಮ್ಮ ಈ ಭಾಗದ ಜನರ ಯಾವ ಆಸೆ ಆಶೋತ್ತರಗಳನ್ನು ಇಲ್ಲಿ ನೀವು ಈಡೇರಿಸುವವರಿದ್ದೀರಿ? ಕನಿಷ್ಠ ನಿಮಗೆ commitment ಇದ್ದಿದ್ದರೆ ಸುವರ್ಣ ಕರ್ನಾಟಕ ಎಂದು ಹೇಳಿ ನೀವು ಏನು 1000 ಗ್ರಾಮಗಳನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತಿದ್ದೀರಿ, ಒಂದು ತಾಲ್ಲೂಕಿಗೆ ಐದೈದು ಗ್ರಾಮಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ ಅದನ್ನಾದರೂ ಕೂಡ ನೀವು ನಮ್ಮ ನಂಜುಂಡಪ್ಪ ವರದಿಯಲ್ಲಿ ಹೇಳಿರುವಂತೆ ಅತೀ ಹಿಂದುಳಿದ ತಾಲ್ಲೂಕುಗಳಿಗೆ 10 ಕೊಡುತ್ತೇವೆಂದಾದರೂ ನೀವು ಹೇಳಬೇಕಾಗಿತ್ತು. ನೀವು ಏನು ವಿಶೇಷತೆ ಕೊಡುತ್ತಿದ್ದೀರಿ? ಇವತ್ತು ಕೇವಲ ಈ ಸರ್ಕಾರ ಯಾರು ಪ್ರಭಾವಿ ಮಂತ್ರಿಗಳಿದ್ದಾರೆ, ಇವತ್ತು ಅಭದ್ರ ಸರ್ಕಾರವಿರುವುದರಿಂದ ಕೇವಲ ಶಾಸಕರ ಮನ ಒಲಿಸಲಿಕ್ಕೆ ಈ ಸರ್ಕಾರ ನಡೆಯುತ್ತಿದೆ. ಯಾವ ಸದಸ್ಯರು dissidence ಮಾಡುತ್ತೇವೆಂದು ಹೇಳುತ್ತಾರೆ, ಅವರನ್ನು ನೀವು ಕರೆದು ಅವರ ಕ್ಷೇತ್ರವನ್ನು ಅಭಿವೃದ್ಧಿ ಮಾಡಲಿಕ್ಕೆ ಹೇಳುತ್ತೀರಿ. ಆದರೆ, ಇವತ್ತು ಹಿಂದುಳಿದ ಪ್ರದೇಶಕ್ಕೆ ವಿಶೇಷವಾಗಿ ನಂಜುಂಡಪ್ಪ ವರದಿಯಲ್ಲಿ ಹೇಳಿರುವಂತೆ ಅತಿ ಹಿಂದುಳಿದಿರತಕ್ಕಂತಹ 39 ತಾಲ್ಲೂಕು ಮತ್ತು 84 ಹಿಂದುಳಿದಿರುವ ತಾಲ್ಲೂಕುಗಳ ಬಗ್ಗೆ ಏನು ಕಳಕಳಿ ತೋರಿಸಿದ್ದೀರಿ ಎಂಬುದನ್ನು ಹೇಳಬೇಕು. ಇವತ್ತು ಸರ್ಕಾರ ಹೈದರಾಬಾದ್ ಕರ್ನಾಟಕ ಭಾಗದಲ್ಲಿರುವ 26 ತಾಲ್ಲೂಕುಗಳೇನಿವೆ ಅವುಗಳಿಗೇನೂ ಮಾನ್ಯತೆ ತೋರಿಸಿಲ್ಲ. ನಾನು ಮೊನ್ನೆ ಮಾನ್ಯ ಯಡಿಯೂರಪ್ಪನವರಿಗೆ, ಏನೆಂದರೆ, ನೀವು ಕನಿಷ್ಠ ಪಕ್ಷ ಇವತ್ತು ನೀವು ಗಡಿ ಭಾಗದಲ್ಲಿ ಅಧಿವೇಶನ ಮಾಡುತ್ತಿದ್ದೀರಿ, ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದೀರೆಂದು ನಾವು ಭಾವಿಸಿರುವುದೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಗಡಿ ಭಾಗದಲ್ಲಿರುವ ಪ್ರತಿಯೊಬ್ಬ ಕನ್ನಡಿಗರೇನಿದ್ದಾರೆ, ಅದು ಬೆಳಗಾಂ ಅಷ್ಟೇ ಅಲ್ಲ, ಇವತ್ತು ಆಂಧ್ರ ಗಡಿ ಭಾಗದಲ್ಲಿರುವ ಕನ್ನಡಿಗರು ಸೇರಿದಂತೆ ಗಡಿ ಭಾಗದಲ್ಲಿರುವ ನಮ್ಮ ಕನ್ನಡಗರಿಗೆ ನಾವು ನಿಮ್ಮ ಜೊತೆಯಲ್ಲಿದ್ದೇವೆನ್ನುವ ಮಾತನ್ನು ತೋರಿಸಲಿಕ್ಕೆ ನೀವು ಇವತ್ತು ಅಧಿವೇಶನ ಮಾಡುತ್ತಿದ್ದೀರಿ ಎಂದು ನಾವು ತಿಳಿದುಕೊಂಡಿದ್ದೇವೆಂದು ಹೇಳಿದೆ. ಆದರೆ, Border Area Development Board ಗೆ ಸರ್ಕಾರ 5 ಕೋಟಿ ರೂ.ಗಳನ್ನು ಕೊಟ್ಟಿದೆ. ಈ ಸರ್ಕಾರದ್ದು ಯಾವ commitment ಇದೆ? ಇವತ್ತು ನೀವು ಗಡಿ ಭಾಗದಲ್ಲಿ ಅಧಿವೇಶನ ಮಾಡಿದ್ದು, ನೀವು ಗಡಿ ಭಾಗದ ಜನರ ರಕ್ಷಣೆಗೆ ಬರುತ್ತೇವೆಂದು ಹೇಳುತ್ತೀರಿ. ಆದರೆ, ನೀವು

ಬಿಡಿ ಪೈಸೆಯನ್ನೂ ಕೊಡುವುದಿಲ್ಲ. ನೀವು Border Area Development Boardಗೆ ಎಷ್ಟು ಹಣ ಕೊಟ್ಟಿದ್ದೀರಿ? ನೀವು Hyderbad Karnataka Development Boardಗೆ ಎಷ್ಟು ಹಣ ಕೊಟ್ಟಿದ್ದೀರಿ? ಬಯಲು ಸೀಮೆ ಪ್ರದೇಶಕ್ಕೂ ಹಣ ಬೇಕೆಂದು ಬಹಳಷ್ಟು ಶಾಸಕರು ಕೇಳಿದ್ದಾರೆ. ಅವರಿಗೂ ಕೂಡ ನೀವು ಹಣ ಕೊಟ್ಟಿಲ್ಲ. ಈ ಸರ್ಕಾರ ಒಂದು ವೇಳೆ ಕೇವಲ ಕೆಲವು ಜನರಿಗೆ, ಕೆಲವು ಶಾಸಕರಿಗೆ, ಕೆಲವು ಪ್ರಭಾವಿ ಮಂತ್ರಿಗಳ ಮನವೊಲಿಸಲಿಕ್ಕೆ, ಈ ಸರ್ಕಾರ ನಡೆಸಲಿಕ್ಕೆ ಒಂದು ವೇಳೆ ನೀವು ಇಷ್ಟೆಲ್ಲಾ ರಾಜಕೀಯ ಮಾಡಿ ಇದನ್ನು ಮಾಡಿದರೆ ಖಂಡಿತವಾಗಿ ಈ ಭಾಗದ ಜನ ಎಂದೂ ನಿಮ್ಮನ್ನು ಕ್ಷಮಿಸುವುದಿಲ್ಲವೆಂಬುದನ್ನು ನೀವು ಮರೆಯಬಾರದು. ಈ ಭಾಗದಲ್ಲಿ ನೀವು ಅಭಿವೃದ್ಧಿ ಮಾಡಿರುವುದನ್ನು ಸ್ವಾಗತ ಮಾಡಿದ್ದೇವೆ. ಸಂಪೂರ್ಣವಾಗಿ ಇದನ್ನು ಯಾವಾಗ ಮೆಚ್ಚಿಕೊಳ್ಳುತ್ತೇವೆಂದರೆ ನೀವು ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮುಂದೆ ಹಾಕಿಕೊಳ್ಳತಕ್ಕಂಥ ಪ್ರತಿಯೊಂದು ಕಾರ್ಯಕ್ರಮದಲ್ಲಿ ಇವತ್ತು ಉತ್ತರ ಕರ್ನಾಟಕದ ಪಾಲೂ ಸಹ ಇರಬೇಕು. ಇವತ್ತು ನಂಜುಂಡಪ್ಪ ವರದಿ ಪ್ರಕಾರ ಪ್ರತಿಯೊಂದು ಕಾರ್ಯಕ್ರಮದಲ್ಲಿ ವಿಶೇಷವಾದ ಮಾನ್ಯತೆ ಕೊಡಬೇಕು. ಒಂದು ವೇಳೆ ಒಳ್ಳೆಯ ಕೆಲಸ ಮಾಡಿದರೆ ನಾವು ಹೊಗಳುತ್ತೇವೆ. ಯಾವುದೇ ಒಂದು ಕಾರ್ಯಕ್ರಮದಲ್ಲಿ ಒಂದು ವೇಳೆ ನೀವು ನಿಜವಾಗಿ ಬಡವರ ಕಾರ್ಯಕ್ರಮವಾಗಿರಲಿ, ಹಿಂದುಳಿದ ಪ್ರದೇಶಗಳಿಗೆ ವಿಶೇಷವಾದ ಕಾಳಜಿ ತೋರಿಸಿದರೆ ಅದನ್ನು ನಾವು ಪ್ರಶಂಸೆ ಮಾಡುತ್ತೇವೆ. ಆದರೆ, ದಿಕ್ಕು ದಿಶೆಯಿಲ್ಲದೆ ಸುಮ್ಮನೆ ಯಾರದೋ ರಾಜಕೀಯ ಪ್ರೇರಿತವಾಗಿ ನೀವು ಮಾಡಿದರೆ ಇದಕ್ಕೆ ನಾವು ಬಹಳ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ. ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಮುಂದೆ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡಲಿಕ್ಕೆ ನೀವು ಎಲ್ಲಾ ಕಾರ್ಯಕ್ರಮದಲ್ಲೂ ಒತ್ತು ಕೊಡಬೇಕು. 65 ಕಾಲೇಜುಗಳೇನಿವೆ, ಇನ್ನೂ High School ಗಳನ್ನು ಮಂಜೂರು ಮಾಡುವವರಿದ್ದೀರಿ; ಅದನ್ನು ಮಾಡುವಾಗ ನಂಜುಂಡಪ್ಪ ವರದಿಯ ಪ್ರಕಾರ ಮಾಡಲೇ ಬೇಕು. ಇಲ್ಲದಿದ್ದರೆ ನಾವು ಉಗ್ರ ಹೋರಾಟ ಮಾಡುತ್ತೇವೆನ್ನುವ ಸೂಚನೆಯನ್ನು ಕೊಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಅಡಚಣೆ)

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಸದನದಲ್ಲಿ ಸಕ್ಕರೆ ಸಚಿವರಿದ್ದಾರೆ. ಅವರ ಗಮನಕ್ಕೆ ತರುವುದೇನೆಂದರೆ ರೈತರು ಹೊರಗಡೆ ಇದ್ದಾರೆ. ಅವರು ಹಲವಾರು ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಸಕ್ಕರೆ ಸಚಿವರು ಕಬ್ಬಿನ ಬಗ್ಗೆ ಉತ್ತರ

ಹೇಳಿದರೆ ರೈತರಿಗೆ ಸಮಾಧಾನವಾಗುತ್ತದೆ. 2 ಗಂಟೆಗಳಾಯಿತು. ಸಕ್ಕರೆ ಸಚಿವರು ಒಳಗಡೆ ಇದ್ದಾರೆ. ದಯವಿಟ್ಟು ಅವರಿಂದ ಉತ್ತರಕೊಡಿಸಿ.

ಶ್ರೀ ವಾಟಾಳ್ ನಾಗರಾಜ್: ಕಬ್ಬಿನ ಬೆಳೆಗಾರರು ಬಹಳ ತೊಂದರೆಯಲ್ಲಿದ್ದು ಕಾಯುತ್ತಿದ್ದಾರೆ. ಮಾನ್ಯ ಸಚಿವರು ಅವರ ಸಮಸ್ಯೆಗಳ ಬಗ್ಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು: ಆಯಿತು. ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ.

6.00 ಪಿಎಂ

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಉಪಾಧ್ಯಕ್ಷರೆ, ಬೆಳಗಾಂನಲ್ಲಿ ನಡೆಯುತ್ತಿರುವ ಕರ್ನಾಟಕ ವಿಧಾನಸಭೆ ಅಧಿವೇಶನ ಇವತ್ತು ಇತಿಹಾಸಕ್ಕೆ ಸೇರಿ ಹೋಯಿತು. ನಾನು ಮಾನ್ಯ ಮುಖ್ಯಮಂತ್ರಿಗಳನ್ನು, ಉಪ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ನಾವು ಕೂಡ ಬೇರೆ ರಾಜ್ಯಗಳಿಗೆ ಪ್ರವಾಸ ಹೋದ ಸಂದರ್ಭದಲ್ಲಿ ಜಮ್ಮು ಕಾಶ್ಮೀರ ಮತ್ತು ಶ್ರೀನಗರದಲ್ಲಿ ಎರಡು ಕಡೆ ವಿಧಾನಸಭೆಗಳು ನಡೆಯುತ್ತದೆ ಎಂಬ ವಿಚಾರ ಗೊತ್ತಾದಾಗ ನಮ್ಮ ಒಂದು ಅಪೇಕ್ಷೆ ಈಡೇರಿದೆ ಎಂದು ಅನಿಸಿತು. ಇದರ ಉದ್ದೇಶವೇನೆಂದರೆ 50 ವರ್ಷಗಳ ಹಿಂದೆ ಹರಿದು ಹಂಚಿಹೋಗಿದ್ದ ಕರ್ನಾಟಕ ಒಂದಾಗಿ 50 ವರ್ಷಗಳಾಯಿತು. ಆ 50 ವರ್ಷದ ಒಂದು ಸವಿ ನೆನಪು ಮತ್ತು ಇತಿಹಾಸ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತೇನು ಬೆಳಗಾಂನಲ್ಲಿ ಅಧಿವೇಶನ ಮಾಡಿದ್ದೇವೆ, ಅದರ ಉದ್ದೇಶವೇನೆಂದರೆ ನಂಜುಂಡಪ್ಪ ವರದಿಯನ್ನು ಜಾರಿಗೆ ತರಬೇಕು, ಈ ರಾಜ್ಯದಲ್ಲಿ ಅಸಮತೋಲನವನ್ನು ತಡೆಯಬೇಕಾದರೆ ಸರ್ಕಾರ ನಂಜುಂಡಪ್ಪನವರ ವರದಿಯನ್ನು ಮಾನದಂಡವನ್ನಾಗಿಟ್ಟುಕೊಂಡು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದರಿಂದ, ಈ ರಾಜ್ಯದಲ್ಲಿ ಅಸಮಾನತೆಯನ್ನು ತೊಲಗಿಸಿ ಸಮಾನತೆಯನ್ನು ತರಬೇಕೆನ್ನುವ ಒಂದೇ ಒಂದು ಉದ್ದೇಶ ನಮ್ಮೆಲ್ಲರದ್ದೂ ಆಗಿದೆ. ಇದರ ಜೊತೆಯಲ್ಲಿ 1964ರಲ್ಲಿ ಏನು ಮಹಾಜನ್ ವರದಿಯನ್ನು ಮಹಾರಾಷ್ಟ್ರದವರ ಒತ್ತಾಯದ ಮೇಲೆ ತಂದಿದ್ದರು, ಆ ವರದಿಯನ್ನು ಅನುಷ್ಠಾನಕ್ಕೆ ತರಬೇಕು ಎನ್ನುವುದನ್ನು ಈಗಾಗಲೇ ಕೇಂದ್ರ ಸರ್ಕಾರ Supreme Court ನಲ್ಲಿ affidavit ಹಾಕುವುದರ ಮುಖಾಂತರ ಪಕ್ಷಾತೀತವಾಗಿ ನಾವೆಲ್ಲರೂ ಸೇರಿ ಇಲ್ಲಿ ವಿರೋಧ ಪಕ್ಷದವರು ಅನುಮೋದನೆ ಮಾಡುವುದರ ಮುಖಾಂತರ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ ಎನ್ನುವುದನ್ನು ಈ ಒಂದು ಅಧಿವೇಶನ ಈ ರಾಷ್ಟ್ರದಲ್ಲಿ ಪ್ರತಿಬಿಂಬಿಸಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಇಂದು ರಾಜಕಾರಣ ಏನಾಗಿದೆ? ಏನೋ ವಿಧಾನಸಭೆ ನಡೆದಿದೆ, ಗದ್ದಲ ನಡೆಯುತ್ತದೆ; ಆ ಗದ್ದಲ ಲೋಕಸಭೆ ಹಾಗೂ ವಿಧಾನಸಭೆಯಲ್ಲೂ ನಡೆಯುತ್ತದೆ. ಇಲ್ಲಿ ಏನೂ ಆಗುವುದಿಲ್ಲ. ಜನಪ್ರತಿನಿಧಿಗಳು

ಹೋಗಿ ಬರುತ್ತಾರೆ ಎನ್ನುವ ಒಂದು ಮನೋಭಾವ ಜನರಲ್ಲಿ ಬೇರೂರಿದೆ. ವಿರೋಧ ಪಕ್ಷದವರು ಆಡಳಿತ ಪಕ್ಷದವರ ಮೇಲೆ ಟೀಕೆ ಟಿಪ್ಪಣಿ ಮಾಡುವುದು ಸಹಜ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇರುವಂಥದ್ದು. ಆಡಳಿತ ಪಕ್ಷದವರು ಮಾತನಾಡಬೇಕಾದರೆ ವಿರೋಧ ಪಕ್ಷದವರೂ ಕೂಡ ಕೂಗಾಡಬಾರದು.

ಉಪಾಧ್ಯಕ್ಷರು: ಮಾನ್ಯ ಕೃಷ್ಣಮೂರ್ತಿಯವರೆ, ವಿಷಯಾಂತರ ಮಾಡಬೇಡಿ. ವಿಷಯಕ್ಕೆ ಬನ್ನಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ವಿಷಯಕ್ಕೆ ಬಂದುಬಿಡುತ್ತೇನೆ. ವಿರೋಧ ಪಕ್ಷದವರು ಮಾತನಾಡಬೇಕಾದರೆ ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಆಡಳಿತ ಪಕ್ಷದವರ ನ್ಯೂನತೆಯನ್ನು ಹೇಳಿದಾಗ ಒಪ್ಪಬೇಕಾಗುತ್ತದೆ. ಒಂದು ಬಾರಿ ವಿಧಾನ ಸಭೆಯಲ್ಲಿ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದಾಗ ನಾನು ಆಗ ಆಡಳಿತ ಪಕ್ಷದಲ್ಲಿ ಇದ್ದರೂ ಕೂಡ ತೆಂಗಿನ ಬೆಳೆ ಬಗ್ಗೆ ನಾನು ಅವರನ್ನು ಸಮರ್ಥಿಸಿಕೊಂಡೆ. ವಿಧಾನ ಸಭೆಯಲ್ಲಿ ನಾವು ಇವತ್ತು ಸಮಗ್ರ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ಅದಕ್ಕೆ ನಾವು ಡಾ. ನಂಜುಂಡಪ್ಪನವರ ವರದಿಯನ್ನು ಆಧಾರವಾಗಿ ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದೀರಿ. ತಾವು ದಯಮಾಡಿ ಹೇಳಬೇಕು ಇವತ್ತು ಏನಾದರೂ ಆ ವರದಿಯ ಮಾನದಂಡವನ್ನು ಜಾರಿಗೆ ತಂದಿದ್ದೀರಾ? ತರಲಿಕ್ಕೆ ಸಾಧ್ಯವಾಗಿದೆಯೇ? ಇಲ್ಲ ನಿಮ್ಮ ಪಕ್ಷದ ಶಾಸಕರು ಇಲ್ಲದ ಕಡೆ ನಿಮಗೆ vote ಬಂದಿಲ್ಲವೇ? ನಿಮ್ಮ ಪಕ್ಷದವರು ಅಲ್ಲಿ ನಿಂತಿಲ್ಲವೇ? ನಿಮ್ಮ ಮತದಾರರು ಅಲ್ಲಿ ಇಲ್ಲವೇ? ನಿಮ್ಮ ಉದ್ದೇಶ ಏನು ಇರಬೇಕು ಎಂದರೆ ನಾವು ಇನ್ನೂ ಹೆಚ್ಚಿಗೆ seatಗಳನ್ನು ಗೆಲ್ಲಬೇಕು. ಸಮಾನಾಂತರವಾಗಿ ಕೊಡಬೇಕು. 500 High School ಗಳನ್ನು ಕೊಟ್ಟಿದ್ದೀರಿ. ನಂಜುಂಡಪ್ಪನವರ ವರದಿಯೂ ಇಲ್ಲ, ಅಬ್ದುಲ್ ಕಲಾಂರವರ ಮಾರ್ಗದರ್ಶನವೂ ಇಲ್ಲ, ಸರ್ಕಾರದ ನಿಯಮಾವಳಿ, ಶಿಷ್ಟಾಚಾರವೂ ಇಲ್ಲ. ಮೊರಾರ್ಜಿ ವಸತಿ ಶಾಲೆ ಎಲ್ಲಿ ಕೊಡಬೇಕು? ಹಿಂದುಳಿದ ವರ್ಗದ ಜನಗಳು ಎಲ್ಲಿ ಇದ್ದಾರೋ ಅಲ್ಲಿಗೆ ಕೊಡಬೇಕು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು, ಮೈನಾರಿಟೀಸ್ ಇರತಕ್ಕಂಥ ತಾಲ್ಲೂಕುಗಳಿಗೆ ಕೊಡಬೇಕು. ನಾನೊಂದು ಮಾತನ್ನು ಹೇಳುತ್ತೇನೆ, ಈಗೇನು ಎಂಟು ತಿಂಗಳುಗಳಲ್ಲಿ ತಪ್ಪು ಮಾಡಿದ್ದೀರಿ ಅದನ್ನು ಮುಂದೆ ಮಾಡುವುದಕ್ಕೆ ಹೋಗಬೇಡಿ. ಜನ, ನೀವು ಕೆಲಸ ಮಾಡಿದ್ದೀರಿ, ನಮ್ಮ ಶಾಸಕರನ್ನು ನಾವು ಮತ್ತೆ potential ಆಗಿ ಮಾಡಬೇಕು, ಅವರನ್ನು ಗೆಲ್ಲಿಸಬೇಕೆನ್ನುವ ಉದ್ದೇಶವನ್ನು ಮಾಡಿದರೆ ಸರ್ಕಾರದ ಉದ್ದೇಶ ಅದು ಸದುದ್ದೇಶವಾಗುವುದಿಲ್ಲ. ಸರ್ಕಾರದ

ಉದ್ದೇಶ ಸದುದ್ದೇಶವಾಗಬೇಕಾದರೆ ನೀವು ಏನು ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ ಅದನ್ನು ಎಲ್ಲಾ ಶಾಸಕರನ್ನು ಸಮಾನಾಂತರವಾಗಿ ನೋಡಿಕೊಂಡರೆ ಮಾತ್ರ ಸಾಧ್ಯ. ಬೇರೆ ಸರ್ಕಾರಗಳು ಏನನ್ನೂ ಮಾಡಿಲ್ಲ ಎಲ್ಲವನ್ನೂ ನಾವೇ ಮಾಡಿದ್ದೇವೆ, ನೀವೇನೂ ಮಾಡುವುದಿಲ್ಲವೆಂದು ನಾವು ಹೇಳುವುದಿಲ್ಲ. ನಿಮಗೊಂದು mandate ಇದೆ. ನೀವೂ ಕೂಡ ಜನರಿಂದ ಆಯ್ಕೆಯಾಗಿ ಬಂದಿದ್ದೀರಿ. ಆ mandate ಅನ್ನು ಮಾಡಬೇಕು. ಇವತ್ತು ಏನು budget ಅನ್ನು ಮಂಡಿಸಿದ್ದೀರಿ, ತಾವೇನು cycle ಕೊಟ್ಟಿದ್ದೀರಿ ಅದನ್ನು ನಾವು ಒಪ್ಪುತ್ತೇವೆ. ಇಲ್ಲ ಅಂತ ಹೇಳುವುದಿಲ್ಲ. ಆದರೆ ಒಂದು ವಿಚಾರ ಹೇಳುತ್ತೇನೆ. ನಾನು ಶಾಸಕನಾಗಿ 14 ವರ್ಷ ಆಯಿತು. 12 ಸಾರಿ ನನ್ನ ಕ್ಷೇತ್ರ ಘೋಷಣೆಯಾಯಿತು. ತುಮಕೂರು ಜಿಲ್ಲೆ ಹಾಗೂ ಕೋಲಾರ ಜಿಲ್ಲೆಯಲ್ಲಿ ಬಹಳ ಬರಗಾಲವನ್ನು ನೋಡಿದ್ದೇವೆ. ನಮ್ಮಲ್ಲಿ ಅಂತರ್ಜಲದ ಮಟ್ಟ ಎಲ್ಲಿಯವರೆಗೆ ಹೋಗಿದೆಯೆಂದರೆ 450 ಅಡಿಯಿಂದ 500 ಅಡಿಗೆ ಹೋಗಿದೆ. ಅಲ್ಲಿ ವಿಷದ ನೀರನ್ನು ನಾವು ಕುಡಿಯುತ್ತಿದ್ದೇವೆ. ಆದರೆ ನಾವು ಹೇಳಿಕೊಳ್ಳುವುದೇನೆಂದರೆ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆಂದು ಹೇಳಿಕೊಳ್ಳುತ್ತೇವೆ. ಅದಕ್ಕೇ ನೀವು ಏನು ಹೆಚ್ಚುವರಿ ಹಣ ಬರುತ್ತಿದೆ ಸುಮ್ಮನೆ ಯಾವ್ಯಾವುದೋ ಒಂದು cheap popularity ಗೋಸ್ಕರ ಏನೇನೋ ಮಾಡುತ್ತೇವೆಂದು ಹೇಳಬೇಡಿ. ಮೊದಲು irrigation ಅನ್ನು ಮಾಡಿ. ಇವತ್ತು ನಾವು ಕೌಲಾಲಂಪುರ್ ದಲ್ಲಿ ನೋಡಿದರೆ ಸಮುದ್ರದ ನೀರನ್ನು ಶುದ್ಧಿ ಮಾಡಿ ಕುಡಿಯಲಿಕ್ಕೆ ಕೊಟ್ಟಿದ್ದಾರೆ. ಸಮುದ್ರದ ನೀರನ್ನು ಶುದ್ಧಿ ಮಾಡಿ ಆಹಾರವನ್ನು ಬೆಳೆದು ಅದನ್ನು ಸಿಂಗಾಪುರ್‌ಗೆ ಕಳುಹಿಸುತ್ತಿದ್ದಾರೆ. ನಮ್ಮಲ್ಲಿ ಆ ರೀತಿಯ ಯೋಜನೆ ಇಲ್ಲ. ಶಾಶ್ವತವಾಗಿ ಬರ ನಿವಾರಣೆ ಮಾಡುವಂಥ ಯೋಜನೆಯನ್ನು ಹತ್ತು ವರ್ಷಗಳಲ್ಲಿ, ರಾಯಚೂರು, ಗುಲ್ಬರ್ಗ ಚಿತ್ರದುರ್ಗ, ತುಮಕೂರು ಜಿಲ್ಲೆ ಇರಬಹುದು. ಚಿಕ್ಕಮಗಳೂರು ಜಿಲ್ಲೆಯವರದು ನಮ್ಮದೇನು ಪರಿಸ್ಥಿತಿಯಾಗಿದೆಂದರೆ, ಕರ್ನಾಟಕದಲ್ಲಿ ನಾವೆಲ್ಲಾ coffee planter ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಕಡೂರು ಕ್ಷೇತ್ರದವರೂ ಕೂಡ coffee planter, ನಮ್ಮನ್ನು ಏನಾದರೂ ಗುಲ್ಬರ್ಗಾ ಜೊತೆಯಲ್ಲಿ photo ಇಟ್ಟರೆ ಅವರಿಗೂ ನಮಗೂ ಏನೂ ವ್ಯತ್ಯಾಸ ಇಲ್ಲ. ನಮಗೆ ಈ ಕಡೆ ಕೇಂದ್ರ ಸರ್ಕಾರದ ನೆರವು ಸಿಕ್ಕುವುದಿಲ್ಲ, ಈ ಕಡೆ ಪಶ್ಚಿಮಘಟ್ಟದ ನೆರವು ಸಿಕ್ಕುವುದಿಲ್ಲ. ಪರಿಸ್ಥಿತಿ ಈ ರೀತಿ ನಿರ್ಮಾಣವಾಗಿದೆ. ಪ್ರಕೃತಿ ವಿಕೋಪ ಎಷ್ಟರಮಟ್ಟಿಗೆ ಹೋಗಿದೆಂದರೆ, ಅತ್ಯಂತ ಹೆಚ್ಚುಮಳೆ ಬೀಳುವಂಥ ಪ್ರದೇಶ ಚಿಕ್ಕಮಗಳೂರು, ಶೃಂಗೇರಿ, ಕೊಪ್ಪ, ಎನ್.ಆರ್.ಪುರದಲ್ಲಿ ಬರಗಾಲಪೀಡಿತ ಪ್ರದೇಶವೆಂದು

ಘೋಷಣೆಯಾಗಿದೆಂದರೆ, ಮುಂದೆ ಹತ್ತು ವರ್ಷದ ನಮ್ಮ ಮುಂದಿನ ಪೀಳಿಗಿಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತಿರಾ? ಈ ಮುಂದಾಲೋಚನೆ ಇಟ್ಟುಕೊಳ್ಳದೆ ಏನೋ ಬರಗಾಲ ಬಂದಾಗ, ಬರಗಾಲ ಘೋಷಣೆ ಮಾಡುವುದು, ಅಲ್ಲಿ ಪರಿಹಾರ ಕೊಡುವುದು, ಕೂಲಿಕಾಳು ಕೊಡುವುದು, ಯಾರೋ ಕಂಟ್ರ್ಯಾಕ್ಟ್ ಮಾಡುವುದು, ಅಧಿಕಾರಿಗಳ ಮೇಲೆ ದೋಷಾರೋಪ ಮಾಡಬೇಕು, ಯಾರೋ ಚೆನ್ನಾಗಿ ಕೆಲಸ ಮಾಡಿಲ್ಲ. ಅವನನ್ನು ತೆಗೆದು ಹಾಕೋಣ. ಎಲ್ಲರನ್ನೂ ಚೆನ್ನಾಗಿ ಕೆಲಸ ಮಾಡುವವರನ್ನು ಮಾಡಿಲ್ಲವೆಂದರೆ ಅವರು ಕೂಡ ಬಂಡು ಬೀಳುತ್ತಾರೆ. ನಾವು ಒಳ್ಳೆಯ ಕೆಲಸ ಮಾಡಿದಾಗಲೂ ನಮ್ಮನ್ನು ಕೆಟ್ಟವರು ಎಂದು ಹೇಳುತ್ತಾರೆ, ಆದುದರಿಂದ ಮಾಡುವುದೇ ಬೇಡವೆಂದು ಹೇಳಿದರೆ ಏನು ಮಾಡುತ್ತೀರಾ? ಇಲ್ಲ ಡಿಸ್‌ಮಿಸ್ ಮಾಡುತ್ತೀರಾ? ಕೋರ್ಟಗೆ ಹೋಗುತ್ತಾರೆ. ನಾವು ಯಾವುತ್ತೂ ಕೂಡ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಧಿಕಾರಿಗಳಾಗಲಿ ಜನಪ್ರತಿನಿಧಿಗಳಾಗಲಿ, ಸಂಘರ್ಷಕ್ಕೆ ಇಳಿಯಬಾರದು. ಯಾರು ತಪ್ಪು ಮಾಡಿದ್ದಾನೆ ಅವನನ್ನು ಯಾವುದೇ ಒತ್ತಡ ಬಂದರೂ ಕೂಡ, ಶಿಕ್ಷೆಗೊಳಪಡಿಸಲೇಬೇಕು. ಇವತ್ತು ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತೇವೆ. ಕೆ.ಸಿ. ರೆಡ್ಡಿ ವರದಿಯನ್ನು ನಾವು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಿದ್ದೀರಿ ಅದಕ್ಕೆ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ಆದರೆ, ಕೆ.ಸಿ.ರೆಡ್ಡಿ ನೀರಾವರಿ ತಜ್ಞರು ಇದ್ದಾರೆ, ಅವರೇನು ವರದಿಯನ್ನು ಕೊಟ್ಟಿದ್ದಾರೆಂದು ಹೇಳಿದರೆ, ನಾವು ಇವತ್ತೇನು ರಾಜ್ಯದಲ್ಲಿ ಬರಗಾಲ ಪ್ರದೇಶವೆಂದು ಹೇಳುತ್ತೇವೆ, 40% ಭಾಗ ಇದೆ, ಆ ಭದ್ರಾ ಮೇಲ್ದಂಡೆಯಿಂದ ಏನು ನಾವು ನೀರಾವರಿಯನ್ನು ತೆಗೆದುಕೊಂಡು ಹೋಗುತ್ತೇವೆ ಅದು ಕೆಲವೇ ಭಾಗಗಳಿಗೆ ಮಾತ್ರ ಅನುಕೂಲವಾಗುತ್ತದೆಯೇ ಹೊರತು 124ರಲ್ಲಿ ದಕ್ಷಿಣ ಕರ್ನಾಟಕದಲ್ಲಿ ತಾಲ್ಲೂಕು ಇದೆ, ಅವಕ್ಕೆ ಪರಿಪೂರ್ಣವಾಗಿ ಬರವನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಬೇರೆ ತಜ್ಞರೊಂದಿಗೆ ಸಮಾಲೋಚನೆ ಮಾಡಬೇಕು. ಈಗಾಗಲೇ ನಾನು ಮತ್ತು ಮಾನ್ಯ ಮಾಧುಸ್ವಾಮಿ ಮಾತನಾಡಿದ್ದೇವೆ. ಈ ವಿಚಾರವನ್ನು ನಾವು ಪ್ರಸ್ತಾಪವನ್ನೂ ಕೂಡ ಮಾಡಿದ್ದೇವೆ. ಹಿಂದೆ ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ ಅದು ಶಂಕುಸ್ಥಾಪನೆಯಾಯಿತು. ಇವತ್ತು ನೀವು ಅದನ್ನು ಮಾಡೇ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದೀರಿ. ಇಂಥ ನೀರಾವರಿ ಸೌಕರ್ಯಗಳನ್ನು, ನೇತ್ರಾವತಿ ನದಿಯ ಹೆಚ್ಚು ಕಡಿಮೆ 140 ಟಿಎಂಸಿ ನೀರು ಅರಬ್ಬಿ ಸಮುದ್ರಕ್ಕೆ ಹೋಗುತ್ತಿದೆ. ಅದನ್ನೇನಾದರೂ ನಮ್ಮ ಕಡೆಗೆ ತಿರುಗಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ. ಹಿಂದೆ ಮಾನ್ಯ ನಾಗೇಗೌಡರವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ಅಮೇರಿಕದಿಂದ ಯಾರೋ ಒಬ್ಬರು ನಾವು ಮಾಡುತ್ತೇವೆಂದು

ಬಂದಿದ್ದರು. ನಮ್ಮಲ್ಲಿ ಏನಾಗುತ್ತದೆಂದರೆ ಈ ರೀತಿ ಯಾರಾದರೂ ಉದ್ಯಮಿಗಳು ನಾವು ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಕಿರುಕುಳ ಕೊಡುವುದು ಜಾಸ್ತಿಯಾಗುತ್ತದೆಯೇ ಹೊರತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಅವರನ್ನು ಬಿಡದೇ ಇರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಬಂದಂಥ ಅವಕಾಶಗಳು ಬೇರೆ ರಾಜ್ಯಕ್ಕೆ ಹೋಗಲಿಕ್ಕೆ ಕಾರಣೀಭೂತವಾಗಿವೆ. ಆದ್ದರಿಂದ ಮಳೆ ಬರದಿದ್ದರೆ ಬರಗಾಲ ಘೋಷಣೇ ಮಾಡುವುದು, ಇವತ್ತು ಅಂಥ ಘೋಷಣೆಯಿಂದ ಉಪಯೋಗವಾಗುವುದಿಲ್ಲ. 65ಲಕ್ಷ ರೂಪಾಯಿ ಕೊಟ್ಟರೆ ಸಾಲುವುದಿಲ್ಲ. ನನ್ನ ಕ್ಷೇತ್ರದಲ್ಲಿ ಇವತ್ತು ಕಾಫಿ ತೋಟಗಳಿಗೆ ವಲಸೆ ಬರುತ್ತಿದ್ದಾರೆ. ಕಾಫಿ ತೋಟದವರು ಏನು ಹೇಳುತ್ತಾರೆಂದರೆ ನಮ್ಮಲ್ಲೂ ಬರಗಾಲ ಬಂದಿದೆ, ನಮ್ಮ ಕಾಫಿ ತೋಟಗಳಲ್ಲಿ ಕೂಲಿ ಬೇಕಾಗಿಲ್ಲ ಎಂದು ಹೇಳುತ್ತಾರೆ. ಏನು ಮಾಡಬೇಕು ಸ್ವಾಮಿ? ಆದ್ದರಿಂದ ಸರ್ಕಾರ ಉತ್ತರ ಕರ್ನಾಟಕವಿರಲಿ, ದಕ್ಷಿಣ ಕರ್ನಾಟಕವಿರಲಿ, ಮಧ್ಯ ಕರ್ನಾಟಕವಿರಲಿ, ಡಾ: ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟುಕೊಂಡು ಅದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು, ಆ 39 ತಾಲ್ಲೂಕುಗಳಲ್ಲಿ ನನ್ನ ತಾಲ್ಲೂಕುಗಳು ಸೇರಿಲ್ಲ, ಬೇಡ. ನನ್ನ ತಾಲ್ಲೂಕುಗಳು ಅತೀ ಹಿಂದುಳಿದಿದೆ. ಆ ತಾಲ್ಲೂಕಿನಲ್ಲಿ ಏನಾದರೂ ಅವಕಾಶಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ, ಎರಡನೆ ಹಂತದಲ್ಲಿ ನೀವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಬರಗಾಲ ಯಾವತ್ತಿನಿಂದ ಘೋಷಣೆಯಾಗಿದೆ, ಮುಂಗಾರು ನಮಗೆ ಮಾರ್ಚ್, ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ಹಿಂಗಾರು ಬಿತ್ತುವುದಕ್ಕೆ ನಾವು ರೆಡಿ ಇದ್ದೇವೆ. ಜೋಳವನ್ನು, ಕಡಲೆಯನ್ನು, ನೆಲಗಡಲೆಯನ್ನು ನಾವು ಬಿತ್ತುವುದಕ್ಕೆ ನಾವು ರೆಡಿ ಇದ್ದೇವೆ. ಇಲ್ಲಿಯವರೆಗೆ ಬರಗಾಲ ಪ್ರದೇಶವೆಂದು ಘೋಷಣೆ ಮಾಡದೇ, ಮಾನ್ಯ ಜಗದೀಶ್ ಶೆಟ್ಟರು ಆಗಸ್ಟ್‌ನಲ್ಲಿ ಘೋಷಣೆ ಮಾಡಿದರೆ, ತಾವು ನಮಗೆ ನೀವು ಇವತ್ತು ಹಣ ಕೊಟ್ಟರೆ ಬರಗಾಲದ ಪರಿಸ್ಥಿತಿಯಲ್ಲಿ ನಿವಾರಣೆ ಮಾಡುವುದಕ್ಕೆ ಸಾಧ್ಯನಾ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನೀವು ವರದಿಯನ್ನು ತರಿಸಿಕೊಳ್ಳಲಿಲ್ಲವೆ? ಚಿಕ್ಕಮಗಳೂರು ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಅಂಕಿಅಂಶಗಳನ್ನು ತರಿಸಿಕೊಂಡು ಕೇಂದ್ರ ಸರ್ಕಾರದ ಸಚಿವರಾಗಿರತಕ್ಕಂಥ ಮಾನ್ಯ ಶರದ ಪವರ್‌ರವರು ಸೂಯಸೈಡ್ ಡಿಸ್ಟ್ರಿಕ್ಟ್‌ನ ಪ್ಯಾಕೇಜ್‌ನಲ್ಲಿ ನಮ್ಮ ಜಿಲ್ಲೆಯನ್ನು ಸೇರಿಸಿದ್ದಾರೆ. ಈ ಸಭೆಯಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಅದರಲ್ಲಿಯೂ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿ ಸುಮಾರು 140 ರಿಂದ 150 ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಷ್ಟಪಡುತ್ತೇನೆ. ಮಾನ್ಯ ಅಶೋಕ್‌ನವರ ಗಮನಕ್ಕೆ ತರುವುದೇನೆಂದರೆ, ಅವರು ಯಾವುದೇ ಪಾರ್ಟಿಗೆ ಸೇರಿರಬಹುದು. ಅದು ಬೇರೆ. ನನ್ನ ಕ್ಷೇತ್ರದ ಓಂಕಾರಪ್ಪ ಎಂಬ ವ್ಯಕ್ತಿಗೆ ಡಾಕ್ಟರ್‌ರವರು ಆತನನ್ನು ಬೆಂಗಳೂರಿಗೆ ಕಳುಹಿಸಿದರು. ಆತ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಹೋದ. ಆತನಿಗೆ 8 ಎಕರೆ ಜಮೀನು ಇತ್ತು. ಆತನಿಗೆ 1 ಲಕ್ಷದ 50 ಸಾವಿರ ರೂಪಾಯಿ ಬಿಲ್ ಆಯಿತು. ಆದರೆ, ಆತ ಸತ್ತು ಹೋದ. ಆದರೆ, ಡೆಡ್ ಬಾಡಿಯನ್ನು ಕೊಡಲಿಲ್ಲ. ಮಾನ್ಯ ಧರ್ಮಸಿಂಗ್‌ರವರಿಗೆ ಹೇಳಿ ಅವರ ಪರಿಹಾರ ನಿಧಿಯಿಂದ 75 ಸಾವಿರ ರೂಪಾಯಿಗಳನ್ನು ಕೊಡಿಸಲಾಯಿತು. ಮತ್ತೆ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮಾನ್ಯ ಸೀತಾರಾಮ್‌ರವರನ್ನು ಹಿಡಿದುಕೊಂಡು 45 ಸಾವಿರ ರೂಪಾಯಿಗಳನ್ನು ಕೊಡಿಸುವುದರ ಮೂಲಕ ಆ ಡೆಡ್ ಬಾಡಿಯನ್ನು ಸತ್ತ 5 ದಿವಸದ ಮೇಲೆ ಆತನ ಮಗನಿಗೆ ಕೊಡಿಸಬೇಕೆಂದರೆ ನಮ್ಮ ರೈತರ ಪರಿಸ್ಥಿತಿ ಎಷ್ಟು ಶೋಚನೀಯವಾಗಿದೆ ಎಂದು ತಿಳಿದುಕೊಳ್ಳಬೇಕಾಗಿದೆ. ಮಾನ್ಯ ಅಶೋಕ್‌ರವರಿಗೆ ಹೇಳುವುದೇನೆಂದರೆ, ಅವರಿಗೆ ಸಮಗ್ರ ಕರ್ನಾಟಕ ಅಭಿವೃದ್ಧಿ ಮಾಡಬೇಕೆಂಬ ಯೋಚನೆ ಇದ್ದರೆ, ದಯವಿಟ್ಟು ನಿಜವಾದ ಬಡತನ ಇದೆ ಎಂಬುದನ್ನು ನೋಡಬೇಕು. ನನಗೆ ಮಾಡಿರತಕ್ಕಂಥದಲ್ಲ. ದಯವಿಟ್ಟು ಎಲ್ಲಾ ಕಡೆ ಸಮೀಕ್ಷೆ ಮಾಡಿ ಒಂದು ಮಾನದಂಡವನ್ನು ಇಟ್ಟುಕೊಳ್ಳಿ. ಏನೊಂದು ರೈತರಿಗೆ 30 ಸಾವಿರ ರೂಪಾಯಿ ಮತ್ತು ಹೆಲ್ತ್ ಕಾರ್ಡ್ ಕೊಡತಕ್ಕಂಥ ಕಾರ್ಯಕ್ರಮಗಳನ್ನು ಮಾಡಿ. ಬರಗಾಲವನ್ನು ನಿವಾರಣೆ ಮಾಡಬೇಕಾದರೆ ನೀರಾವರಿಯನ್ನು ಮತ್ತು ಕುಡಿಯುವ ನೀರನ್ನು, ಸರ್ಫೇಸ್ ವಾಟರ್‌ನ್ನು ನೀವು ಬರಗಾಲ ಪೀಡಿತ ಪ್ರದೇಶಗಳಿಗೆ ಕೊಡದಿದ್ದರೆ ನಮ್ಮ ಜನರ ಜೀವನ ಮತ್ತು ಆರೋಗ್ಯ ಹಾಳಾಗಿ ಹೋಗುತ್ತದೆ. ನಮ್ಮ ರಾಜ್ಯದಲ್ಲಿ ಜನರಿಗೆ ಕೇವಲ 40 ವರ್ಷಕ್ಕೆ ಮುಪ್ಪು ಬರುತ್ತದೆ. ಇವತ್ತು ಏನು ವಿಶೇಷ ಅಧಿವೇಶನ ನಡೆಸುತ್ತಿರುವ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ನೆರೆಯ ಹಾವಳಿಯಿಂದ ತೊಂದರೆ ಆಗಿರತಕ್ಕಂಥ ರೈತರಿಗೆ ಪರಿಹಾರವನ್ನು ಕೊಡಬೇಕು ಮತ್ತೆ ನೆರೆಯ ಹಾವಳಿಯಿಂದ ಅಮೃತವಾಗಿರತಕ್ಕಂಥ ಗ್ರಾಮಗಳಲ್ಲಿ ಹಾಳಾಗಿರತಕ್ಕಂಥ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡಿಕೊಡಬೇಕು. ಅದು ರಾಯಚೂರು, ಗುಲ್ಬರ್ಗ ಅಥವಾ ಯವುದೇ ಜಿಲ್ಲೆಯಾಗಿರಲಿ, ಬೆಳಗಾಂನಲ್ಲಿ ವಿಧಾನಸೌಧ ಕಟ್ಟಿ ಅಧಿವೇಶನ ಮಾಡುತ್ತೇವೆಂದು ಮತ್ತು ವಿಧಾನಸಭೆಯಲ್ಲಿ ಕುಳಿತುಕೊಂಡು ಗಲಾಟೆ ಮಾಡುತ್ತೇವೆಂದು ಹೇಳಿದರೆ, ಇವತ್ತಿನ ಅಧಿವೇಶನಕ್ಕೆ ಅರ್ಥಪೂರ್ಣ ಬರುವುದಿಲ್ಲವೆಂಬ ವಿಚಾರವನ್ನು ತಮ್ಮ ಮುಂದೆ ಮಂಡಿಸುತ್ತೇನೆ. ಬರಗಾಲವನ್ನು ಈ ವರ್ಷ ನಿಭಾಯಿಸುವುದರ ಜೊತೆಗೆ

ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಕುಮಾರಸ್ವಾಮಿಯವರು ಒಂದು ಶಾಶ್ವತವಾದ ಪರಿಹಾರವನ್ನು ಹುಡಕಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಯಾವ್ಯಾವ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗುತ್ತಿವೆ ಎಂಬುದು ಅವರಿಗೆ ಗೊತ್ತಿದೆ. ಮತ್ತೆ ಪ್ರಮಾಣದ ಮಳೆ ಮತ್ತು ವಾಡಿಕೆ ಮಳೆ ಎಲ್ಲಿ ಕಡಿಮೆ ಬರುತ್ತಿದೆ ಎಂಬ ವಿಚಾರ ಅವರಿಗೆ ಗೊತ್ತಾಗಿದೆ. ಅಂಥ ಕಾರ್ಯಕ್ರಮಗಳಿಗೆ ಪ್ಯಾಕೇಜನ್ನು ಸೃಷ್ಟಿ ಮಾಡಿ. ಇವತ್ತಿನ ದಿವಸ ಪಶು ವಿಶ್ವವಿದ್ಯಾಲಯಗಳನ್ನು ಮಾಡುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದೇನೆಂದರೆ ಪಶುಗಳ ಅಂಕಿ ಅಂಶಗಳನ್ನು ತರಿಸಿಕೊಳ್ಳಿ, ಏಕೆಂದರೆ ದಿವಸ Agricultrue University ಮಾಡುವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ವ್ಯವಸಾಯ ಮಾಡುವುದು ಬೇಡ ಎನ್ನುವ ಸ್ಥಿತಿಗೆ ರೈತರು ಬಂದು ಬಾಂಬೆ ಅಥವಾ ಬೆಂಗಳೂರಿಗೆ ಹೋಗಿ ಕೂಲಿ ಮಾಡೋಣ ಎನ್ನುವಂಥ ಪರಿಸ್ಥಿತಿಗೆ ಬಂದಿದ್ದಾರೆ. ಇವತ್ತಿನ ದಿವಸ ನನ್ನ ಕ್ಷೇತ್ರದ ಸುಮಾರು 20% ಜನ ಬೆಂಗಳೂರಿಗೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಒಂದೇ ತಾಲ್ಲೂಕಿನಿಂದ ಈ ರೀತಿಯಲ್ಲಿ 20% ಜನ ಬೆಂಗಳೂರಿಗೆ ಬರುತ್ತಿದ್ದರೆ ಬೆಂಗಳೂರು ನಗರ ಎರಡನೇ ಕಲ್ಕತ್ತಾ ಆದರೂ ಆಗಬಹುದು. ಇವತ್ತಿನ ದಿವಸ ಬೆಂಗಳೂರಿನಲ್ಲಿ ಒಂದು ದಿನಕ್ಕೆ 20 ಮರ್ಡರ್ ಆಗುತ್ತಿದೆ. ಮುಂದೆ ಇದು ಒಂದು ದಿವಸಕ್ಕೆ 100 ಆದರೂ ಆಗಬಹುದು. ಅಲ್ಲಿ ತೊಂದರೆ ಆಗುತ್ತಿದೆಯೇ ವಿನಃ ಬೇರೇನೂ ಆಗುತ್ತಿಲ್ಲ. ಕಟ್ಟಾ ಸುಬ್ರಮಣ್ಯ ನಾಯ್ಡು ಅವರು 40 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆದಾರರನ್ನು ತರುತ್ತೇವೆಂದು ಹೇಳಿದಾಗ ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಾ ಇದರಲ್ಲಿ ಎಷ್ಟು ಸುಳ್ಳು ಎಷ್ಟು ನಿಜ ಎಂದು ಕೇಳಿದರು. 40 ಸಾವಿರ ಕೋಟಿ ರೂ. ಹಣವನ್ನು ತಂದರೆ ನಿಜವಾಗಲೂ ಸಂತೋಷ. ಆದರೆ ಇದನ್ನು ಕೇವಲ ಬೆಂಗಳೂರಿನಲ್ಲೇ ಮಾಡುವುದು ಬೇಡ. ಯಾವ ಯಾವ ಪ್ರದೇಶದಲ್ಲಿ ಕಚ್ಚಾವಸ್ತುಗಳನ್ನು ಇಟ್ಟುಕೊಂಡು ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರೆ ಉದ್ಯಮ ಸಕ್ಸಸ್ ಆಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಈ ವರ್ಷ ಸರ್ಕಾರ ಬರಗಾಲಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿ ತಮ್ಮ ಮುಖಾಂತರ ಕೆಲವೊಂದು ವಿಚಾರಗಳನ್ನು ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೇನೆ. ಸುವರ್ಣ ಗ್ರಾಮ ಯೋಜನೆಯಲ್ಲಿ 750 ಗ್ರಾಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ, ಆ ಒಂದು ಕಾರ್ಯವನ್ನು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಒಪ್ಪಿಕೊಳ್ಳಬೇಕು. ಇವತ್ತಿನ ದಿವಸ ಶಾಸಕರಿಗೆ ಏನಾಗಿದೆ ಎಂದರೆ ಅಧಿಕಾರ ವಿಕೇಂದ್ರೀಕರಣವಾಗಿ ಶಾಸಕರ ಮಾತು ಏನೂ ನಡೆಯುತ್ತಿಲ್ಲ. ನಮ್ಮ

ಜಿಲ್ಲೆಗೆ 358 ಲಕ್ಷ ರೂ. ಕೊಟ್ಟಿದ್ದೇವೆಂದು ಮಾನ್ಯ ರವೀಂದ್ರನಾಥ್ ಅವರು ಹೇಳಿದರು. ಇವತ್ತು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಮಾಡಿದ್ದರಿಂದ ಈ ಹಣವೆಲ್ಲಾ ಗ್ರಾಮ ಪಂಚಾಯಿತಿಗೆ ಹೋಗಿದೆ. ಅವರಿಗೆ ಟೆಂಡರ್ ಕರೆಯುವುದಕ್ಕೂ ಬರುವುದಿಲ್ಲ ಮತ್ತು ಕೆಲಸ ಕೂಡ ಪ್ರಾರಂಭವಾಗಿಲ್ಲ. ಎಷ್ಟು ದುಡ್ಡು ಉಳಿದಿದೆ ಮತ್ತು ಎಷ್ಟು ಖರ್ಚಾಗಿದೆ ಮತ್ತು ಎಷ್ಟು ಖರ್ಚು ಮಾಡಬೇಕಾಗಿದೆ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ಮುಂದಿನ ಅಧಿವೇಶನದಲ್ಲಿ ಹೇಳಬೇಕಾಗುತ್ತದೆ. ಬರೀ ಹಣ ಬಿಡುಗಡೆ ಮಾಡಿದರೆ ಅಭಿವೃದ್ಧಿಯಾಗುವುದಿಲ್ಲ. ಹಣ ಎಷ್ಟರ ಮಟ್ಟಿಗೆ ಖರ್ಚಾಗಿದೆ ಮತ್ತು ಎಲ್ಲಿ ದುರುಪಯೋಗವಾಗಿದೆ ಎಂಬುದನ್ನು ವಿಚಾರ ಮಾಡಿದಾಗ ಮಾತ್ರ ಸರ್ಕಾರದ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ ಮತ್ತು ಜನ ಮೆಚ್ಚಿಕೊಳ್ಳುತ್ತಾರೆ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿ ನಾನು ಮಾತನಾಡುವುದಕ್ಕೆ 10 ನಿಮಿಷ ಅವಕಾಶಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ): ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನಾನು ಈ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ವರ್ಷದ ಅಂಗವಾಗಿ ಅನೇಕ ಒಳ್ಳೆಯ ಕಾರ್ಯಕ್ರಮಗಳು ಸರ್ಕಾರದಿಂದ ನಡೆದಿರುವುದನ್ನು ನಾನು ನೋಡಿದ್ದೇನೆ. ನಮ್ಮ ರಾಷ್ಟ್ರಾಧ್ಯಕ್ಷರೇ ಬೆಂಗಳೂರಿಗೆ ಬಂದು ನಮ್ಮ ಜಂಟಿ ಸದನವನ್ನು ಉದ್ದೇಶಿಸಿ ನಮ್ಮ ರಾಜ್ಯಕ್ಕೆ ಬೇಕಾಗಿರುವಂಥ 11 ಅಂಶದ ಸೂತ್ರವನ್ನು ಮುಂದಿಟ್ಟು ನಮ್ಮ ರಾಜ್ಯ ಹೇಗೆ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾದಂಥ ಒಂದು ದಿಕ್ಕನ್ನು ತೋರಿಸಿಕೊಟ್ಟಿದ್ದರು. ಆದಾದ ನಂತರದಲ್ಲಿ ಬಂದಂಥ ಹೊಸ ಸರ್ಕಾರ ನಮ್ಮ ಸಮ್ಮಿಶ್ರ ಸರ್ಕಾರ ಬಜೆಟ್‌ನಲ್ಲಿ ಗ್ರಾಮೀಣ ಜನತೆಯ ಪರವಾಗಿ ಮತ್ತು ನಿಜವಾಗಿ ಯಾರಿಗೆ ಸರ್ಕಾರದ ಸೌಲಭ್ಯಗಳು ಸಿಗಬೇಕೋ ಆ ಎಲ್ಲಾ ವರ್ಗಗಳಿಗೆ ಅನುಕೂಲ ವಾಗುವಂಥ ಒಂದು ಜನಪರವಾದಂಥ ಬಜೆಟ್ ಅನ್ನು ಮಂಡಿಸಿದ ನಂತರ ಅದು ಅನುಷ್ಠಾನ ಆಗುತ್ತಿರುವಂಥ ಸಂಗತಿಯನ್ನು ನೋಡುತ್ತಿದ್ದೇವೆ. ಹೆಚ್ಚು ಸಮಯ ಇಲ್ಲದಿರುವುದರಿಂದ ಹೆಚ್ಚಿನ ಅಂಶಗಳನ್ನು ನಾನು ಉಲ್ಲೇಖ ಮಾಡುವುದಕ್ಕೆ ಹೋಗದೆ, ಈಗ ಬೆಳಗಾಂನಲ್ಲಿ ನಾವು ಸುವರ್ಣ ಕರ್ನಾಟಕ ವರ್ಷದ ಆಚರಣೆಯ ನಿಮಿತವಾಗಿ ಈ ಒಂದು ಅಧಿವೇಶನವನ್ನು ನಾವು ಐತಿಹಾಸಿಕವಾಗಿ ನಡೆಸುತ್ತಿದ್ದೇವೆ. ಬೆಳಗಾವಿಯ ವಿಶೇಷತೆಯನ್ನು ಇವತ್ತು ಬೆಳಗಿನಿಂದ ನಾವೆಲ್ಲಾ ಹಾಡಿ ಹೊಗಳಿರುವುದನ್ನು ಕಂಡಿದ್ದೇವೆ. ಇದು ಸಕ್ಕರೆಯ ನಾಡು ಹೌದು. ಏಕೆಂದರೆ,

ಅತ್ಯಂತ ಹೆಚ್ಚು ಸಕ್ಕರೆ ಕಾರ್ಖಾನೆ ಇರುವಂತಹ ಒಂದು ಜಿಲ್ಲೆಯಾಗಿದೆ. ಇಂಥ ಒಂದು ಜಿಲ್ಲೆಯಲ್ಲಿ ಮುಂದಿನ ವರ್ಷದಲ್ಲಿಯೂ ಕೂಡ ಅಧಿವೇಶನ ನಡೆಸುವಂಥ ಒಂದು ಐತಿಹಾಸಿಕ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿರತಕ್ಕಂಥದಕ್ಕೆ ನಾನು ಸರ್ಕಾರವನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ. ಇವತ್ತು ನಾವು ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತಂತೆ ವಿಶೇಷವಾದಂಥ ಚರ್ಚೆಯನ್ನು ಮಾಡುತ್ತಿದ್ದೇವೆ. ಇವತ್ತು ನಿಜವಾಗಿಯೂ ಕರ್ನಾಟಕದ ಜನತೆಗೆ ಬಹಳ ಸಂತೋಷವಾಗಿದೆ. ಉತ್ತರ ಕರ್ನಾಟಕ ಭಾಗದ ಸಹಸ್ರಾರು ಜನರು ಇವತ್ತಿನದಿವಸ ದಕ್ಷಿಣ ಕರ್ನಾಟಕದಲ್ಲಿದ್ದಾರೆ. ನಮ್ಮ ಭಾಗದಲ್ಲಿ ಈ ಒಂದು ಐತಿಹಾಸಿಕ ಅಧಿವೇಶನವನ್ನು ನಡೆಸುತ್ತಿದೆ. ಮತ್ತೆ ಸರ್ಕಾರ ನಮ್ಮ ಭಾಗಕ್ಕೆ ಒಂದು ಮಹತ್ವವನ್ನು ಕೊಟ್ಟಿದೆ ಎನ್ನಂಥ ಸಂತೋಷವನ್ನು ಅವರೆಲ್ಲಾ ಅನುಭವಿಸುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಟ್ಟು ಏನೊಂದು ಪ್ರಾದೇಶಿಕ ಅಸಮತೋಲನ ಇದೆ, ಅದನ್ನು ನಿವಾರಿಸುವುದಕ್ಕೋಸ್ಕರ ಈ ಒಂದು ಅಧಿವೇಶನ ಸ್ಪಷ್ಟವಾದ ಸಂದೇಶವನ್ನು ಕಳುಹಿಸಿದೆ. ಮತ್ತೆ ಈ ಭಾಗದ ಜನರಲ್ಲಿ ಒಂದು ವಿಶ್ವಾಸವನ್ನು ಮೂಡಿಸಿದೆ ಎನ್ನಂಥಕ್ಕಂಥ ಭಾವನೆ ನನಗೂ ಕೂಡ ಇದೆ. ನಾವು ಒಟ್ಟಾರೆ ಉತ್ತರ ಕರ್ನಾಟಕ ಅಭಿವೃದ್ಧಿ ದೃಷ್ಟಿಯಿಂದ ಯೋಚನೆ ಮಾಡುವ ರೀತಿಯಲ್ಲಿ ಜಿಲ್ಲೆ ಅಥವಾ ತಾಲ್ಲೂಕುವಾರು ಒಂದು ಮೈಕ್ರೋ ಪ್ಲಾನಿಂಗ್ ಅನ್ನು ಮಾಡಿ, ಸೂಕ್ಷ್ಮವಾದಂಥ ಯೋಜನೆಗಳನ್ನು ರೂಪಿಸಿ ಎಲ್ಲಾ ಭಾಗದಲ್ಲಿ ಅನುಷ್ಠಾನ ತರುವಂಥ ಪ್ರಯತ್ನವನ್ನು ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಅಧಿವೇಶನ ಮಾಡುವುದರಿಂದ ಮಹಾರಾಷ್ಟ್ರ ಮತ್ತು ಕೇಂದ್ರ ಸರ್ಕಾರಕ್ಕೂ ಹಾಗೂ ನಮ್ಮ ರಾಜ್ಯದಲ್ಲಿದ್ದು, ಯಾರು ಬೇರೆ ರಾಜ್ಯಕ್ಕೆ ತಮ್ಮ ಒಲುವನ್ನು ತೋರಿಸುತ್ತಿದ್ದಾರೆಯೋ ಅಂಥ ಒಂದು ವಿವಾದದ ಶಕ್ತಿಗಳಿಗೂ ಸ್ಪಷ್ಟವಾದ ಸಂದೇಶವನ್ನು ಇವತ್ತಿನ ದಿವಸ ಇದರಿಂದ ಕೊಡುವುದಕ್ಕೆ ಸಾಧ್ಯವಾಗಿದೆ. ಬೆಳಗಾಂ ಮಾತ್ರವಲ್ಲದೆ ಕಾರವಾರವೂ ಸಹ ಒಳಗೊಂಡಂತೆ ಇವುಗಳಲ್ಲೆವು ನಮ್ಮ ರಾಜ್ಯ ಅವಿಭಾಜ್ಯ ಅಂಗವೆಂದು ಹೇಳುವಂತಹ ಒಂದು ಸ್ಪಷ್ಟವಾದಂಥ ಸಂದೇಶವನ್ನು ನಾವು ಕೊಡುವುದಕ್ಕೆ ಈ ಅಧಿವೇಶನದಿಂದ ಸಾಧ್ಯವಾಗಿದೆ. ಈ ಒಂದು ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡಿರತಕ್ಕಂತಹ ಸರ್ಕಾರಕ್ಕೆ ಅಭಿನಂದಿಸುತ್ತಾ ಸರ್ಕಾರ ಅನೇಕ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಅದಕ್ಕೂ ಕೂಡ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮುಖ್ಯವಾದ ಸಂಗತಿಯನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ರಾಜ್ಯ ಸರ್ಕಾರ ಮಾತ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಗಮನ ಹರಿಸಿದರೆ

ಅದೊಂದು ಪ್ರಮುಖವಾದಂಥ ಭಾಗ ಅದು ಆಗಬೇಕು. ಇದರಲ್ಲಿ ಕೇಂದ್ರ ಸರ್ಕಾರ ಜವಾಬ್ದಾರಿ ಜಾಸ್ತಿ ಇದೆ. ನಮ್ಮ ಹೈದರಾಬಾದ್ ಮತ್ತು ಬಾಂಬೆ ಕರ್ನಾಟಕದ ಅಭಿವೃದ್ಧಿ ಹಾಗೂ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ವಿಷಯದಲ್ಲಿ ನಮ್ಮ ರಾಜ್ಯದ ಅನೇಕ ಯೋಜನೆಗಳು ಕೇಂದ್ರ ಸರ್ಕಾರದಲ್ಲಿ ನೆನಗುದ್ದಿಗೆ ಬಿದ್ದು ಎಷ್ಟೋ ದಶಕಗಳಾಗಿವೆ. ಹಾಗಾಗಿ ನಾವು ಇವತ್ತು ಈ ಸದನದ ಮೂಲಕ ಈ ಒಂದು ಐತಿಹಾಸಿಕ ಸಮ್ಮೇಳನದ ಮೂಲಕ ಸಮಾವೇಶದ ಮೂಲಕ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವ ಪ್ರಯತ್ನ ಈ ಒಂದು ಸದನದ ಮೂಲಕವಾಗಬೇಕು. ಹೈದ್ರಾಬಾದ್–ಕರ್ನಾಟಕಕ್ಕೆ ಆರ್ಟಿಕಲ್ 371ರ ಪ್ರಕಾರ ವಿಶೇಷವಾದ ಒಂದು ಅಭಿವೃದ್ಧಿಗೆ ಬೇಕಾದಂಥ ಗಮನವನ್ನು ಕೇಂದ್ರ ಸರ್ಕಾರ ಕೊಡಬೇಕು ಎನ್ನುವ ಒಂದು ಕೂಗು ಆ ಭಾಗದಲ್ಲಿ ಅನೇಕ ವರ್ಷಗಳಿಂದ ಇದೆ. ಹಾಗಾಗಿ ಅದನ್ನು ಈಡೇರಿಸುವುದಕ್ಕೆ ಅನೇಕ ವರ್ಷಗಳಿಂದ ಆಗಿಲ್ಲ. ಆದರೆ ಈಗ ಮತ್ತೊಮ್ಮೆ ನಾವು ಇರುವಂಥ ಪರಿಸ್ಥಿತಿಯ ಬದಲಾವಣೆಯ ಅವಲೋಕನವನ್ನು ಮಾಡಿ ಕೇಂದ್ರ ಸರ್ಕಾರದಲ್ಲಿ ಹೈದ್ರಾಬಾದ್–ಕರ್ನಾಟಕಕ್ಕೆ ಕೊಡಬೇಕಾದ ಆರ್ಟಿಕಲ್ 371ರಂತೆ ವಿಶೇಷವಾದ ಅವಲೋಕವಾದ ಸೌಲಭ್ಯವನ್ನು ಕೊಡುವುದಕ್ಕೆ ಮಹಾರಾಷ್ಟ್ರದಲ್ಲಿ ಹಾಗೂ ಬೇರೆ ಬೇರೆ ಕಡೆ ಹೇಗೆ ಕೊಟ್ಟಿದೆ ಆ ರೀತಿ ನಮಗೆ ಸೌಲಭ್ಯ ಬರಬೇಕು. ಈ ಒಂದು ಧ್ವನಿ ಈ ಸದನದ ಒಂದು ಧ್ವನಿಯಾಗಿ ಅದು ಕೇಂದ್ರ ಸರ್ಕಾರಕ್ಕೆ ಮುಟ್ಟುವಂತಾಗಬೇಕು. ಈ ರೀತಿಯಾಗಿ ನೆರವೇರಿಸಬೇಕಾದ ಎಷ್ಟೋ ಯೋಜನೆಗಳು ಕೇಂದ್ರ ಸರ್ಕಾರದಲ್ಲಿದೆ. ಅದರ ಬಗ್ಗೆ ಪಟ್ಟಿ ಮಾಡಿದರೆ ಬಹುಶಃ ಅದಕ್ಕೆ 10 ನಿಮಿಷ ಬೇಕಾಗಬಹುದು. ನಾನು ಹೆಚ್ಚು ಸಂಗತಿಯನ್ನು ಹೇಳುವುದಕ್ಕೆ ಹೋಗುವುದಿಲ್ಲ. ಗುಲ್ಬರ್ಗಾ ರೈಲ್ವೆ ಲೈನ್ ಆದರೆ ನಮಗೆ ಎಷ್ಟು ಅನುಕೂಲ ನಮ್ಮ ಜನತೆಗೆ ಅದರಿಂದ ಇಡೀ ದೇಶಕ್ಕೂ ಅನುಕೂಲ, ನಾವು ಬೀದರ್ ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಎಷ್ಟು ವರ್ಷದಿಂದ ನಾವು ಕೂಗನ್ನು ಹಾಕುತ್ತಿದ್ದೇವೆ. ಆದರೆ ಏನಾಗಿದೆ. ಅಂಕೋಲಾ ಹುಬ್ಬಳ್ಳಿ ರೈಲ್ವೆ ಲೈನ್ ಅಡಿಗಲ್ಲು ಹಾಕಿದೆ. ಆದರೆ ಅರಣ್ಯ ಇಲಾಖೆಯ ಅಸಹಕಾರದಿಂದ ಏನಾಗುತ್ತಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಕೇಂದ್ರ ಸರ್ಕಾರ ಮುಂದೆ ಬರಬೇಕಾದ ಅಗತ್ಯತೆ ಇದೆ ಎನ್ನುವುದನ್ನು ನೋಡುತ್ತಿದ್ದೇವೆ. ನಮ್ಮ ಬಿಜಾಪುರ–ಬಾಗಲಕೋಟೆ–ಗದಗ್ ರೈಲ್ವೆ ಲೈನ್ ಹುಬ್ಬಳ್ಳಿ–ಗದಗ–ಮೆಹಬೂಬ್ ನಗರ ರೈಲ್ವೆ ಲೈನ್ ಬಗ್ಗೆ ಕೇಳುತ್ತಿದ್ದೇವೆ. ಕೊಟ್ಟೂರು–ಹರಿಹರ ರೈಲ್ವೆ ಲೈನ್ ಬಗ್ಗೆ ಕೇಳುತ್ತಿದ್ದೇವೆ. ಅದು ಎಷ್ಟು ಯೋಜನೆಗಳು ಕೇಂದ್ರ ಸರ್ಕಾರದಲ್ಲಿ ಪೆಂಡಿಂಗ್ ಇದೆ ಎನ್ನುವುದರ ಬಗ್ಗೆ ನಮ್ಮ ಹತ್ತಿರ ಪಟ್ಟಿ ಇದೆ. ನಾವು ಇಂತಹ ಒಂದು ಐತಿಹಾಸಿಕ ಅಧಿವೇಶನದಲ್ಲಿ ಕೇಂದ್ರ

ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದಾರೆ ಕರ್ನಾಟಕ ಈ ರೀತಿಯ ಮಲತಾಯಿ ಧೋರಣೆಯನ್ನು ಸಹಿಸುವುದಿಲ್ಲ ಎನ್ನುವಂಥ ಸಂದೇಶವನ್ನು ನಾವು ಕೊಡಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೆ ಅದರ ಬಗ್ಗೆ ನಾವು ಇಡೀ ರಾಜ್ಯದ ಜನತೆಗೆ ಇವತ್ತು...

(ಅಡಚಣೆ)

ಉಪಾಧ್ಯಕ್ಷರು: ಆಯಿತು, ಬೇಗ ಮುಗಿಸಿ ಬಿಡಿ. ಮಾನ್ಯ ಹೆಗಡೆಯವರೆ, ಇನ್ನೂ ಬಹಳ ಜನ ಇರುವುದರಿಂದ ಬೇಗ ಮುಗಿಸಿ ಬಿಡಿ. ಮಾನ್ಯ ಜ್ಞಾನೇಂದ್ರರವರೇ ತಾವು ಕುಳಿತುಕೊಳ್ಳಿ. ನಾನು ನಿಮ್ಮನ್ನು ಕರೆದಿಲ್ಲ. ಇಲ್ಲಾ ನೀವು ಕುಳಿತುಕೊಳ್ಳಿ. ಅವರು ಮುಗಿಸಿ ಬಿಡಲಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ರಾಜ್ಯ ಸರ್ಕಾರ ಏನೇನು ಮಾಡಬೇಕು...

ಉಪಾಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೆ, ನೀವು ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ: ನಾವು ಸುಮ್ಮನೆ ಕುಳಿತುಕೊಂಡಿದ್ದೆವು.

(ಅಡಚಣೆ)

ಉಪಾಧ್ಯಕ್ಷರು: ಅವರು ಮಾತನಾಡಲಿ, ಅವರು ಮುಗಿಸಲಿ. ನೀವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ: ಅವರು ಏಕೆ ರೇಗುತ್ತಿದ್ದಾರೆ? ಇದು ನಿನ್ನೆ ಮೊನ್ನೆಯಿಂದ ಇದೇ ರೀತಿ ನಡೆಯುತ್ತಿದೆ.

ಶ್ರೀ ಹೆಚ್.ಡಿ. ಬಸವರಾಜು: ಸಮಗ್ರ ಕರ್ನಾಟಕ ಅಭಿವೃದ್ಧಿಯ ದೃಷ್ಟಿಯಿಂದ ಚಿಂತನೆ ಮಾಡುತ್ತಿದ್ದೇವೆ. ಇವತ್ತು ಕೇಂದ್ರ ಸರ್ಕಾರ ಎಲ್ಲೆಲ್ಲಿ ಆಸಕ್ತಿಯನ್ನು ವಹಿಸಬೇಕಾಗಿತ್ತೋ ಅದು ವಿಫಲವಾಗಿರುವುದರಿಂದ ಅವರು ಅದನ್ನು ಎತ್ತಿ ಹೇಳುತ್ತಿದ್ದಾರೆ. ಸಹಕಾರ ಏನು ಬೇಕಾಗಿದೆ ಎಂದರೆ ಕೇಂದ್ರ ಸರ್ಕಾರಕ್ಕೆ ಈ ಮಾಹಿತಿಯನ್ನು ಕಳುಹಿಸಿಕೊಡಿ. ಅದನ್ನು ಆದಷ್ಟು ಶೀಘ್ರದಲ್ಲಿ ಆಗುವಂಥ ವ್ಯವಸ್ಥೆಯನ್ನು ಮಾಡಿ. ಅದಕ್ಕೆ ನಾವು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಅದನ್ನು ಬಿಟ್ಟು ಅನಾವಶ್ಯಕವಾಗಿ ಏಕೆ ವಹಿಸಿಕೊಳ್ಳುತ್ತಿದ್ದೀರಿ.

(ಅಡಚಣೆ)

ಉಪಾಧ್ಯಕ್ಷರು: ಮಾನ್ಯ ಬಸವರಾಜ್‌ರವರೇ, ನೀವು ಮಾತನಾಡಬೇಕಾದರೆ ಹೇಳಿ. ಈಗ ಅವರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ.

(ಅಡಚಣೆ)

ಶ್ರೀ ಹೆಚ್.ಡಿ.ಬಸವರಾಜು: ಇದರ ಬಗ್ಗೆ ಚರ್ಚೆಯಾಗಲಿ.

ಉಪಾಧ್ಯಕ್ಷರು: ಆಯಿತು ಚರ್ಚೆಗೆ ಇಟ್ಟುಕೊಳ್ಳೋಣ.

ಶ್ರೀ ಹೆಚ್.ಡಿ. ಬಸವರಾಜು: ಇದರ ಬಗ್ಗೆ ಚರ್ಚೆಯಾಗಬೇಕು. ಇದರ ಬಗ್ಗೆ ಎಷ್ಟು ಸಮಯವಿತ್ತು. ಇವರಿಗೆ ಕೊಟ್ಟಿರುವ ಅವಧಿಯ ಸಮಯವು ಎಷ್ಟಿತ್ತು. ಅದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ನಾನು ನಿಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ನಮ್ಮ ಸರ್ಕಾರ ಇದೆ ಆ ಸರ್ಕಾರದ ಮನವನ್ನು ಒಲಿಸಿ, ಇವತ್ತು ಉತ್ತರ ಕರ್ನಾಟಕದ ಅಭಿವೃದ್ಧಿಯಾಗಬೇಕು ಎನ್ನುವ ಚಿಂತನೆಯನ್ನು ಅವರ ಮನಃಪೂರ್ತಿಯಾಗಿ ಮಾಡಿಕೊಟ್ಟು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ನಾವು ನೀವು ಸಹ ಜೊತೆಯಾಗಿರೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬೆಳಗ್ಗಿನಿಂದ ಹೋರಾಟ ಮಾಡುತ್ತಿರುವ ರೈತರು ಹೊರಗಡೆ ಕಾಯುತ್ತಿದ್ದಾರೆ.

ಉಪಾಧ್ಯಕ್ಷರು: ನೀವು ಕುಳಿತುಕೊಂಡರೆ ನಾನು ಏನಾದರೂ ಮಾಡಬಹುದು. ಆಯಿತು ಅವರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ. ನಾನು ಅದಕ್ಕೆ ಬರುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನ್ನ ಭಾವನೆ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಸಮಯಾವಕಾಶ ಇಲ್ಲದಿರುವುದರಿಂದ ನಾನು ಹೆಚ್ಚು ವಿಸ್ತರಿಸಿ ಹೇಳುವುದಕ್ಕೆ ಹೋಗದೆ ನಾವು ರಾಜ್ಯ ಸರ್ಕಾರವಾಗಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಅದರೊಳಗೆ ಈ ಅಧಿವೇಶನದ ಮೂಲಕ ಉತ್ತರ ಕರ್ನಾಟಕದ ಹಿತದೃಷ್ಟಿಯಿಂದ ಹೋಗಬೇಕೆಂದು ನಮಗೆಲ್ಲರಿಗೂ ಸಂತೋಷವಿದೆ. ಆದರೆ ಕೇಂದ್ರ ಸರ್ಕಾರದ ಮಹತ್ವವಾದ ಪಾತ್ರ ಏನಿದೆ ಅದನ್ನು ಈ ಸದನ ಒಂದಾಗಿ ನಾವು ಒಂದೇ ಧ್ವನಿಯಲ್ಲಿ ನಮ್ಮ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು ಎನ್ನುವಂಥ ಒಂದಾದ ಭಾವನೆ ಈ ಸದನದ ಮೂಲಕ ಹೊರಹೊಮ್ಮಿದರೆ ಅದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಬೀರಿ ನಮ್ಮ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ ಹೊರತು ನಾನು ಆ ಸರ್ಕಾರವನ್ನು ದೂಷಿಸಬೇಕು, ಆಂಧ್ರಕ್ಕೆ ಏನು ಮಾಡುತ್ತಿದ್ದಾರೆ ಮಹಾರಾಷ್ಟ್ರಕ್ಕೆ ಏನು ಮಾಡುತ್ತಿದ್ದಾರೆ ನಮಗೆ ಏನೂ ಮಾಡುತ್ತಿಲ್ಲ ಎನ್ನುವ ಬಗ್ಗೆ ಈ ಕಂಪ್ಯಾರಿಸಂ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅದು ಎಲ್ಲಾ ಸತ್ಯ ಇದ್ದರೂ ನಾನು ಆ ರಾಜಕಾರಣವನ್ನು ಇದರೊಳಗೆ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಕರ್ನಾಟಕಕ್ಕೆ ಅತಿವೃಷ್ಟಿ ಪರಿಹಾರದಲ್ಲಿ ನಮಗೆ ಎಷ್ಟು ಕಡಿಮೆ ಕೊಟ್ಟಿದ್ದಾರೆ ಎಂಬುದರ ಮೂಲಕ ಅದು ಗೊತ್ತಾಗುತ್ತದೆ. ಮತ್ತೆ ಅದನ್ನು ವಿವರಿಸಿ ಹೇಳಿದರೆ ಕಾಂಗ್ರೆಸ್‌ನವರಿಗೆ

ಬೇಸರವಾಗುತ್ತದೆ. ಆದ್ದರಿಂದ ನಾನು ಆ ವಿಷಯಕ್ಕೆ ಹೋಗುವುದಿಲ್ಲ. ನಾನು ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದರ ಜೊತೆಯಲ್ಲಿ ನಾನು ಆಗಲೇ ಹೇಳಿದಂತೆ, ಎಲ್ಲಾ ಜಿಲ್ಲೆಗಳು ಉತ್ತರ ಕರ್ನಾಟಕದ ಹೈದ್ರಾಬಾದ್ ಕರ್ನಾಟಕದಲ್ಲಿ ನಮ್ಮದು 5 ಜಿಲ್ಲೆಗಳು ಇದೆ. ಉಳಿದ 7 ಜಿಲ್ಲೆಗಳು ಮುಂಬೈ ಕರ್ನಾಟಕದ ಭಾಗದಲ್ಲಿವೆ. ನಮ್ಮ ಈ ಎಲ್ಲಾ ಜಿಲ್ಲೆಗಳಲ್ಲಿ ಅನೇಕ ರೀತಿಯಾದ ಸಮಸ್ಯೆಗಳು ಇವೆ. ನಮ್ಮ ಸಮಸ್ಯೆ ಏನಾಗಿದೆ ಎಂದರೆ ನಾನು ಉತ್ತರ ಕನ್ನಡ ಜಿಲ್ಲೆಯಿಂದ ಬರುವವನು. ಉತ್ತರ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆ ಇದೆ. ಇದು ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ ಎನ್ನುವ ಭಾವನೆ ನಮ್ಮ ಜಿಲ್ಲೆಯ ಜನರಲ್ಲಿದೆ. ಆ ಭಾವನೆ ನಮ್ಮಲ್ಲೂ ನಿರ್ಮಾಣವಾಗುತ್ತಿದೆ. ನಮ್ಮ ಉತ್ತರ ಕನ್ನಡ ಜಿಲ್ಲೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಅನೇಕ ರೀತಿಯ ಕೊಡುಗೆಯನ್ನು ಪ್ರತಿವರ್ಷ ನೀಡುತ್ತಿದೆ. ಅದು ವಿದ್ಯುತ್ ಉತ್ಪಾದನೆಯಲ್ಲಿರಬಹುದು ಅರಣ್ಯ ಉತ್ಪಾದನೆಯಲ್ಲಿರಬಹುದು. ಅನೇಕ ರೀತಿಯಲ್ಲಿ ರಾಜ್ಯದ ಅಭಿವೃದ್ಧಿಯಲ್ಲಿ ಸಹಕರಿಸುತ್ತಿದೆ. ಒಟ್ಟಾರೆ ದೇಶದ ಅಭಿವೃದ್ಧಿಯಲ್ಲಿ ಸಹಕರಿಸುತ್ತಿದೆ. ಅದು ಸೀಬರ್ಡ್ ಯೋಜನೆ ಇರಬಹುದು, ಅದು ಕೈಗಾ ಯೋಜನೆ ಇರಬಹುದು, ಆದರೆ ನಮ್ಮ ಜಿಲ್ಲೆ ಆದರೂ ಸಹ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಹಿಂದೆ ಇದೆ ಎನ್ನುವಂಥ ಭಾವನೆ ನಮ್ಮ ಜಿಲ್ಲೆಯ ಜನರಲ್ಲಿದೆ. ಹಾಗಾಗಿ ನಮಗೆ ಪರಿಸರಕ್ಕೆ ಪೂರಕವಾದ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವಂಥ ತೋಟಗಾರಿಕೆಯ ಬೆಳೆಗಳನ್ನು ಪ್ರೋತ್ಸಾಹಿಸುವಂಥ ಅನೇಕ ಯೋಜನೆಗಳು ಬೇಕಾಗಿದೆ. ನಾನು ಕೇಂದ್ರ ಸರ್ಕಾರಕ್ಕೆ ಮತ್ತೇ ಮತ್ತೇ ಒತ್ತಿ ಹೇಳುತ್ತೇನೆ. ಸಮುದ್ರದ ತಡೆಗೋಡೆ ನಮ್ಮ ಮೂರು ಜಿಲ್ಲೆಗಳಾದ ದಕ್ಷಿಣ ಕನ್ನಡ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆ ಶಾಶ್ವತವಾದ ತಡೆಗೋಡೆ ನಿರ್ಮಾಣ ಆಗಬೇಕೆಂದು ಕೇಂದ್ರ ಸರ್ಕಾರದಲ್ಲಿ 150 ಕೋಟಿ ರೂ.ಗಳ ಪ್ರಪೋಸಲ್ 5 ವರ್ಷಗಳಿಂದ ಹಾಗೆ ಇದೆ ಕೇಂದ್ರ ಸರ್ಕಾರ ಇದುವರೆಗೆ ಮಂಜೂರಾತಿಯನ್ನು ಕೊಡಲಿಲ್ಲ. ಹೆಚ್ಚು ಕಡಿಮೆ ಅದು ಈಗ 250 ಕೋಟಿ ರೂ. ಎಸ್ಕಲೇಷನ್ ಆಗಿದೆ. ಆದರೆ ನಾನು ಹಿಂದೆ ಯಾರಿದ್ದಾರೆ ಇವಾಗ ಯಾರಿದ್ದಾರೆ ಅದರ ಬಗ್ಗೆ ನಾನು ರಾಜಕಾರಣದ ಮಾತನ್ನು ಹೇಳುತ್ತಿಲ್ಲ. ಅದು ನಮ್ಮ ಸರ್ಕಾರ ಇದ್ದಾಗ ಮಾನ್ಯ ವಾಜಪೇಯಿಯವರ ಸರ್ಕಾರ ಇದ್ದಾಗ ಕರ್ನಾಟಕಕ್ಕೇ ಅಷ್ಟೇ ಅಲ್ಲ ಇಡೀ ದೇಶಕ್ಕೆ ಜಗತ್ತು ಮೆಚ್ಚುವ ರೀತಿಯಲ್ಲಿ ಅಭಿವೃದ್ಧಿಯ ಕೆಲಸ ಕಾರ್ಯಗಳನ್ನು ನಾವು ಮಾಡಿದ್ದೇವೆ. ಅದರ ಬಗ್ಗೆ ನಮಗೆ ಹೆಮ್ಮೆ ಇದೆ. ಹಾಗಾಗಿ ಆ ರಾಜಕಾರಣವನ್ನು ಇಲ್ಲಿ ಕೂಡಿಸುವುದಕ್ಕೆ ಹೋಗುವುದಿಲ್ಲ. ಆದರೆ ಸಮುದ್ರದ ಕೊರತೆವನ್ನು ನಿಲ್ಲಿಸುವುದಕ್ಕೆ ಶಾಶ್ವತವಾದ ತಡೆಗೋಡೆಯನ್ನು ನಿರ್ಮಾಣ ಮಾಡುವುದಕ್ಕೆ

ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿದೆ. ಅದು ಆಗಬೇಕಾಗಿದೆ. ಅದಲ್ಲದೆ ಅತಿವೃಷ್ಟಿಯಿಂದಾಗಿ ನಮ್ಮ ಜಿಲ್ಲೆಯ ಜನ ಅತೀಯಾದಂಥ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಪಶ್ಚಿಮಘಟ್ಟ ಮಲೆನಾಡಿನ ಭಾಗವೆ ಈ ಕಷ್ಟ ಅನುಭವಿಸುತ್ತಿದೆ. ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಈ ಎಲ್ಲಾ ಜಿಲ್ಲೆಗಳು ಅತೀವೃಷ್ಟಿಯಿಂದಾಗಿ ವಿಶೇಷವಾಗಿ ರಸ್ತೆಗಳು ಪೂರ್ಣ ಕೊಚ್ಚಿಹೋಗಿವೆ. ಯಾರು ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುತ್ತಾರೋ ಅವರಿಗೂ ಸಹ ಗೊತ್ತಿದೆ. ಮಂಗಳೂರು ಸುರತ್ಕಲ್ ಹೋಗಿ ಬಂದರೆ ನಮ್ಮ ರಾಷ್ಟ್ರೀಯ ಹೆದ್ದಾರಿ ಕೇಂದ್ರ ಸರ್ಕಾರದ ರಸ್ತೆ ಅದರ ಪರಿಸ್ಥಿತಿಯನ್ನು ನೋಡಿಬಿಟ್ಟರೆ ಮತ್ತೊಮ್ಮೆ ಯಾರೂ ಆ ರಸ್ತೆಯಲ್ಲಿ ಹೋಗಬೇಕೆಂದು ಅಂದುಕೊಳ್ಳುವುದಿಲ್ಲ. ಅದು ರಸ್ತೆಯೊ ಎಂದು ಕೇಳುವ ಸ್ಥಿತಿ ಇದೆ, ಹಾಗಾಗಿ ಮಲೆನಾಡಿನ ಪಶ್ಚಿಮ ಘಟ್ಟದ ಭಾಗದಲ್ಲಿ 150 ರಿಂದ 180 ಇಂಚುಗಳವರೆಗೆ ನನ್ನ ಕ್ಷೇತ್ರದಲ್ಲಿ ಮಳೆಯಾಗಿದೆ. ಈ ರೀತಿಯಾದ ಮಳೆಯಾದಾಗ ಸಹಜವಾಗಿ ರಸ್ತೆಗಳು ಕೊಚ್ಚಿಹೋಗುತ್ತಿವೆ. ಅದಕ್ಕಾಗಿ ಶಾಶ್ವತವಾದ ಯೋಜನೆಗಳು ಬೇಕು. ನಾವು ಡಾಂಬರು ರಸ್ತೆಗಳನ್ನು ಮಾಡುತ್ತೇವೆ, ಅದು ಕ್ವಾಲಿಟಿ ಇಲ್ಲ, ಗುಣಮಟ್ಟದ ಕೆಲಸವನ್ನು ಮಾಡುವುದಿಲ್ಲ. ನಮಗೆಲ್ಲಾ ಗೊತ್ತಿದೆ, ಕಳಪೆ ಕೆಲಸಗಳು ಹೇಗಾಗುತ್ತವೆಂದು ನಾವು ಅವರನ್ನು ಶಿಕ್ಷೆಗೆ ಒಳಪಡಿಸುವುದಿಲ್ಲ. ಅದಕ್ಕಾಗಿ ಇಂತಹ ಅನೇಕ ದೋಷಗಳು ಇವೆ. ಅದರ ಜೊತೆಯಲ್ಲಿ ಕಾಂಕ್ರೀಟ್ ರೋಡ್‌ಗಳನ್ನು ಮಾಡುವ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಮಾಡುವಂಥ ಕೆಲಸವನ್ನು ಶಾಶ್ವತವಾಗಿ ಮಾಡುವುದಕ್ಕೆ ಕಾಂಕ್ರೀಟ್ ರೋಡ್‌ನ್ನು ಮಾಡುವಂಥದ್ದು ಘಟ್ಟಪ್ರದೇಶದಲ್ಲಿ ವಿಶೇಷವಾಗಿ ಕಾಂಕ್ರೀಟ್ ರೋಡ್‌ಗಳನ್ನು ಮಾಡುವುದರ ಮೂಲಕ ಜನರ ಸಮಸ್ಯೆಗಳು ಬಗೆಹರೆಯುವಂತೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಗಳು ಅಥವಾ ರಾಜ್ಯದ ಮುಖ್ಯ ಹೆದ್ದಾರಿಗಳು ಇರಲಿ ಕಾಂಕ್ರೀಟ್ ರೋಡ್‌ನ್ನೂ ಮಾಡುವುದಕ್ಕೆ ಬೇಕಾಗಿರುವಂಥ ಪ್ರಯತ್ನ ಆಗಬೇಕೆನ್ನುವ ಮಾತನ್ನು ಹೇಳುತ್ತೇನೆ. ತೋಟಗಾರಿಕೆ ಬೆಳೆಗಳು ನಮ್ಮಲ್ಲಿ ಮಳೆ ಜಾಸ್ತಿಯಾಗಿದೆ. ಇಲ್ಲಿ ಅಡಿಕೆ ಪ್ರದೇಶವಿದೆ. ನಾನು ಬೇಗ ಮುಗಿಸುತ್ತೇನೆ. ಅಡಿಕೆಗೆ ಕೊಳೆ ರೋಗ, ಅಡಿಕೆಗೆ ಒಳ್ಳೆಯ ಬೆಲೆ ಬಂದಿದೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ, ಪತ್ರಿಕೆಯನ್ನು ಓದಿದವರಿಗೆ ಸಂತೋಷವಾಗಿದೆ. ಆದರೆ ಅಡಿಕೆ ಬೆಳೆಗಾರರಾದ ನಮ್ಮ ನೋವು ನಮಗೆ ಗೊತ್ತಿದೆ. ಈ ವರ್ಷ ಅತೀವೃಷ್ಟಿಯಿಂದಾಗಿ ಶೇಕಡಾ 40 ರಿಂದ 50ರಷ್ಟು ಅಡಿಕೆ ಕೊಳೆ ರೋಗದಿಂದಾಗಿ ಅದು ಹಾಳಾಗಿ ಹೋಯಿತು. ಮಳೆ ಅತೀಯಾಗಿರುವುದರಿಂದ ಕೊಳೆರೋಗ ಬಂದು ಬಿಟ್ಟಿತು. ನಾನು ಮೈಲತುತ್ತವನ್ನು ಹಾಗೂ ಸುಣ್ಣವನ್ನು ಸೇರಿಸಿ ಹೊಡೆಯುತ್ತೇವೆ. ಆದರೆ ಈ ಭಾರಿ ಮೈಲತುತ್ತದ ದರವೂ ಸಹ 60 ರಿಂದ

6.30ಪಿಎಂ

70ರೂ. ಇರುವುದು ಈ ವರ್ಷ ಅದು ಕೆ.ಜಿ.ಗೆ 150 ರಿಂದ 170 ರೂ.ಗಳಾಗಿರುತ್ತದೆ. ಇವತ್ತು ರೈತರು ಕಷ್ಟದಲ್ಲಿದ್ದಾರೆ. ಬೆಳೆ ಅರ್ಧದಲ್ಲಿದೆ. ಹಾಗಾಗಿ ನಾವು ರೈತರಿಗೆ ಮೈಲುತುತ್ತವನ್ನು ಕೊಡುವಂಥ ವಿಷಯ ಇರಬಹುದು. ಅಥವಾ ಈ ರೀತಿಯಾಗಿ ಬೆಳೆ ಏನು ಹಾನಿಹಾಗಿದೆ. ಅಭಿವೃದ್ಧಿಯ ದೃಷ್ಟಿಯಿಂದ ಅನೇಕ ರೀತಿಯ ಸವಲತ್ತುಗಳನ್ನು ಕೊಡಬೇಕು. ಅತೀವೃಷ್ಟಿಯಿಂದಾಗಿ ಹತ್ತಿ ಹಾಳಾಗಿ ಹೋಗಿದೆ. ತಂಬಾಕು ಹಾಳಾಗಿ ಹೋಗಿದೆ. ನಮ್ಮ ಭಾಗದಲ್ಲಿ ಯಾವ ಬೆಳೆಯು ಬಂದಿಲ್ಲ. ಇನ್ನು ವೆನಿಲ್ಲಾ ಬೆಳೆಗೆ ಕೆ.ಜಿ. 3500 ರೂ.ಗಳು ಇತ್ತು. ಇವತ್ತು 100 ರೂ.ಗಳಿಗೆ ಯಾರು ತೆಗೆದುಕೊಳ್ಳುವವರು ಇಲ್ಲ. ಅದು ಒಳ್ಳೆಯ ಆರ್ಥಿಕ ಬೆಳೆಯಾಗಿದೆ. ಅದಕ್ಕಾಗಿ ಸರ್ಕಾರದಿಂದ ಅನೇಕ ಸಹಾಯಗಳು ಸಿಗಬೇಕಾಗಿದೆ. ಸರ್ಕಾರ ನಿನ್ನೆಯ ದಿವಸ ಪೂರಕ ಬಜೆಟ್‌ನಲ್ಲಿ ಹೆಚ್ಚು ಹೆಚ್ಚು ಹಣವನ್ನು ಕೊಟ್ಟಿದೆ. ಆದರೆ ಮಲೆನಾಡು ಹಾಗು ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ವಿಶೇಷವಾದ ಆದ್ಯತೆಯನ್ನು ಕೊಟ್ಟು ಹಣವನ್ನು ಬಿಡುಗಡೆ ಮಾಡಬೇಕು. ಕೊನೆಯಲ್ಲಿ ಹೇಳುವುದಾದರೆ ಸಹಕಾರ ಸಂಘಗಳ ಬಹಶಃ ಮುಖ್ಯ. ಸಹಕಾರಿ ಕ್ಷೇತ್ರವೇ ಒಂದು ಪರ್ಯಾಯವಾದಂಥ ಸರ್ಕಾರವನ್ನು ನಡೆಸುವಂಥ ಪ್ರಬಲವಾದಂಥ ಆರ್ಥಿಕ ಕ್ಷೇತ್ರ. ಅಷ್ಟು ಆರ್ಥಿಕ ಚಟುವಟಿಕೆಗಳನ್ನು ಆ ಕ್ಷೇತ್ರ ನಡೆಸುತ್ತದೆ. ನಾವು ಸಹಕಾರಿ ಕ್ಷೇತ್ರವನ್ನು ಬಲಪಡಿಸಬೇಕಾಗಿದೆ. ನಮ್ಮ ನಿಶ್ಚಿತವಾಗಿ ನಾಲ್ಕು ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಂಥ ಸೌಲಭ್ಯವನ್ನು ಮಾಡಿರುವುದರಿಂದ ರೈತರಿಗೆ ಒಂದು ವಿಶ್ವಾಸ ಬಂದಿದೆ. ಮಹಾರಾಷ್ಟ್ರ ಹಾಗೂ ಆಂಧ್ರದ ತರಹ ಕರ್ನಾಟಕದಲ್ಲಿ ರೈತರು ಇಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವಂಥ ಸ್ಥಿತಿ ನಿರ್ಮಾಣವಾಗದಿರುವುದನ್ನು ನಾವು ನೊಡುತ್ತಿದ್ದೇವೆ. ಅದಕ್ಕೆ ಮುಖ್ಯವಾದ ಕಾರಣವೇನೆಂದರೆ ಬಜೆಟ್‌ನಲ್ಲಿ ಗ್ರಾಮೀಣ ಜನತೆಗೆ ವಿಶ್ವಾಸ ಮೂಡಿಸುವಂಥ ಪ್ರಯತ್ನವಾಗಿರುವುದು 4% ನಲ್ಲಿ ಬಡ್ಡಿದರದಲ್ಲಿ ನಾವು ಹಣವನ್ನು ಸಾಲ ಸೌಲಭ್ಯವನ್ನು ಕೊಡುತ್ತಿರುವುದು. ಅದರಲ್ಲಿ ಕೆಲವು ನ್ಯೂನ್ಯತೆಗಳನ್ನು ಮಾನ್ಯ ಹಣಕಾಸಿನ ಸಚಿವರು ಅದನ್ನು ಸರಿಪಡಿಸುವ ಬಗ್ಗೆ ಸದನದಲ್ಲಿ ಈಗಾಗಲೇ ಹೇಳಿದ್ದಾರೆ. due date ನ್ನು ನಾವು ತೆಗೆಯುತ್ತೇವೆ. ಯಾರು ಯಾವ ಸಂದರ್ಭದಲ್ಲಿ ಸಾಲವನ್ನು ತುಂಬುತ್ತಾರೋ, ಅದೇ ರೀತಿಯಾಗಿ 4% ರೀತಿಯಲ್ಲಿ ಸಾಲ ಸೌಲಭ್ಯ ಸಿಗುವ ಹಾಗೆ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮೆಲ್ಲರ ಅಪೇಕ್ಷೆ ಇದೆ. ಸಹಕಾರಿ ಕ್ಷೇತ್ರದಲ್ಲಿರುವಂಥ ಪ್ರಮುಖರ ಬೇಡಿಕೆಗಳು ಇವೆ. ನಾವು 3 ಲಕ್ಷ ರೂ.ಗಳ ಲಿಮಿಟ್ ಏನಿದೆ, ಅದನ್ನು ತೆಗೆಯಬೇಕು, tractor ಇತ್ಯಾದಿಗಳನ್ನು ತೆಗೆದುಕೊಳ್ಳುವುದಕ್ಕೆ ಅದಕ್ಕೆ

5 ರಿಂದ 6 ರೂ.ಗಳಾದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕೆಂದು 3 ಲಕ್ಷ ರೂ.ಗಳ ಲಿಮಿಟ್ ತೆಗೆಯುವುದಕ್ಕೆ ಅಥವಾ tractor ನ್ನು ತೆಗೆದುಕೊಳ್ಳುವುದಕ್ಕೆ 4% ಸಾಲದ ಸೌಲಭ್ಯ ಸಿಗಬೇಕು. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಿದೆ. ವಿಧಾನ ಪರಿಷತ್ತಿನಲ್ಲಿಯೂ ಸಹ ಮಾನ್ಯ ಹಣಕಾಸಿನ ಸಚಿವರು ನಿನ್ನೆ ಈ ವಿಷಯದ ಬಗ್ಗೆ ಬಹಳ ರಚನಾತ್ಮಕವಾಗಿ ಸ್ಪಂದಿಸಿದ್ದಾರೆ. ಒಳ್ಳೆಯ ರೀತಿಯಲ್ಲಿ ನಮಗೆ ಬೆಂಬಲ ಸಿಕ್ಕಿದೆ. ಅದರ ಬಗ್ಗೆ ಸರ್ಕಾರದಲ್ಲಿ ನಿರ್ಣಯವಾಗಬೇಕು. ಉತ್ತರ ಕನ್ನಡ ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಸಾಮಿಖಾತೆ ಎಂಬ ಒಂದು ಖಾತೆ ಸಹಕಾರಿ ಕ್ಷೇತ್ರದಲ್ಲಿದೆ. ರೈತರು ವರ್ಷ ವರ್ಷ ತುಂಬುವಂಥದ್ದು ಇದೆ. ಅದಕ್ಕೂ ಸಹ 4% ಬಡ್ಡಿದರ ಅನ್ವಯವಾಗುವಂತೆ ಒಂದು ನಿರ್ಣಯ ಸರ್ಕಾರದಿಂದ ಆಗಬೇಕು. ಅಸಾಮಿಖಾತೆಯ ಸಾಲವನ್ನು ಪ್ರತಿವರ್ಷವೂ ತುಂಬುತ್ತಾರೆ. ಅದರಲ್ಲಿ Bad debts ಇಲ್ಲ; ರಿಕವರಿಯಾಗಿಲ್ಲವೆಂದು ಇಲ್ಲ. ಅದಕ್ಕೆ 4% ಸಾಲ ಸೌಲಭ್ಯವಿಲ್ಲ. 11 ರಿಂದ 12% ದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಹಾಗಾಗಿ ಸಹಕಾರಿ ಕ್ಷೇತ್ರದಲ್ಲಿ ಯಾರೂ ಈ ರೀತಿ ವ್ಯವಹರಿಸುತ್ತಿದ್ದಾರೋ ಅವರಿಗೆ ವಿಶ್ವಾಸ ತುಂಬುವುದಕ್ಕೆ ಈ 4% ಬಡ್ಡಿ ದರದಿಂದ ಏನು ಅನುಕೂಲವಾಗಿದೆಯೋ ಅದೇ ರೀತಿಯಾಗಿ ಇದು ಉಳಿದದ್ದಕ್ಕೂ ಅನ್ವಯವಾಗುವಂತೆ ಮಾಡಬೇಕು. ಪಶ್ಚಿಮ ಘಟ್ಟದ ಮಲೆನಾಡು ಪ್ರದೇಶಕ್ಕೆ ಹೆಚ್ಚಿನ ಒತ್ತನ್ನು ಅತೀವೃಷ್ಟಿಯಿಂದ ಆಗಿರುವ ಹಾನಿಯನ್ನು ತುಂಬಿಕೊಡುವುದಕ್ಕೆ ಸರ್ಕಾರ ಮುಂದೆ ಬರುತ್ತದೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಇನ್ನು ಜನರ ಅನೇಕ ಸಮಸ್ಯೆಗಳು ಇವೆ. ನಮ್ಮದು ತದಡಿ ವಿದ್ಯುತ್ ಸ್ಥಾವರ ನಮ್ಮ ಜಿಲ್ಲೆಯ ಜನರ ಪರಿಸರದ ಉಷ್ಣದ ದೃಷ್ಟಿಯಿಂದ ವಿರೋಧ ಮಾಡುತ್ತಿದ್ದಾರೆ. ಇನ್ನು ಅನೇಕ ವಿಷಯಗಳು ಇದೆ. ನಾನು ಹೆಚ್ಚಿನ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸಮಯದ ಅಭಾವ ಇದೆ. ಒಟ್ಟಾರೆ ಐತಿಹಾಸಿಕವಾದ ಸಮ್ಮೇಳನದ ಈ ಒಂದು ವಿಧಾನಸಭೆಯ ಅಧಿವೇಶನದಲ್ಲಿ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂಥ ನಿರ್ಣಯವನ್ನು ಮಾಡಬೇಕು. ಸದನ ಒಟ್ಟಾಭಿಪ್ರಾಯದಿಂದ ತರಬೇಕು. ಎನ್ನುವಂಥ ಮಾತನ್ನು ಮತ್ತೊಮ್ಮೆ ಹೇಳಿ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

(ಅಡಚಣೆ)

ಒಬ್ಬ **ಮಾನ್ಯ ಸದಸ್ಯರು:** ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು: ಅವರು ಏನು ಹೇಳುತ್ತಾರೆಂದು ಕೇಳೋಣ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ:– ಬೆಳಗಾಂ ಜಿಲ್ಲೆಯಲ್ಲಿ ಕಬ್ಬುಬೆಳೆಯುವ ರೈತರ ಧರಣಿ ಬಗ್ಗೆ.